ಖಾಸಗಿ ಪ್ರಸಾರಕ್ಕಾಗಿ

# ನವ ಮಾನವ ಮಾಸಿಕ

ನವೆಂಬರ್, ೨೦೧೨ ಪುಟ: ೨೦ ಚಂದಾ: ವಾರ್ಷಿಕ ರೂ.೧೨೫/-

ಸಂಪಾದಕ: **ಡಿ.ಎಸ್.ನಾಗಭೂಷಣ**

ವಿಳಾಸ: **ಎಚ್.ಐ.ಜಿ.-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ- ೫೭೭ ೨೦೪**

**ದೂ: ೦೮೧೮೨-೨೪೮೫೭೪ ಸಂಚಾರಿ : ೯೪೪೯೨ ೪೨೨೮೪ ಈ ಮೇಲ್:** dsnagabhushana@gmail.com

## ಸಂಪಾದಕನ ಟಿಪ್ಪಣಿಗಳು

ಪ್ರಿಯ ಓದುಗರೇ,

ಕಳೆದೊಂದು ತಿಂಗಳಿಂದ ಸುದ್ದಿಯಲ್ಲಿರುವವವರು ಅರವಿಂದ ಕೇಜ್ರಿವಾಲ್. ಅಣ್ಣಾ ಹಜಾರೆ ನೇತೃತ್ವದ ಭ್ರಷ್ಟಾಚಾರ ವಿರೋಧಿ ಆಂದೋಲನದ ಆಧಾರ ಸ್ತಂಭಗಳಲ್ಲಿ ಒಬ್ಬರಾಗಿದ್ದ ಕೇಜ್ರಿವಾಲ್, ಇತ್ತೀಚೆಗೆ ಅಣ್ಣಾ ತಂಡದಿಂದ ತಮ್ಮ ಕೆಲವು ಸಹ ಮನಸ್ಕ ಗೆಳೆಯರೊಂದಿಗೆ ಹೊರಬಿದ್ದು ಪರ್ಯಾಯ ರಾಜಕೀಯ ಪಕ್ಷವೊಂದನ್ನು ಆರಂಭಿಸುವ ಸನ್ನಾಹದಲ್ಲಿದ್ದಾರೆ. ಅಂದಮಾತ್ರಕ್ಕೆ ಅವರಿಗೆ ಅಣ್ಣಾರ ಬೆಂಬಲವಿಲ್ಲವೆಂದಲ್ಲ. ಏಕೆಂದರೆ ಕಳೆದ ಭ್ರಷ್ಟಾಚಾರ ವಿರೋಧಿ ನಿರಶನದ ಸಂದರ್ಭದಲ್ಲಿ ಸ್ವತಃ ಅಣ್ಣಾ ಅವರೇ, ರಾಜಕೀಯ ಪರ್ಯಾಯದ ಅನಿವಾರ್ಯತೆಯ ಬಗ್ಗೆ ಮಾತನಾಡಿದ್ದರು. ಆದರೆ ಈ ಕುರಿತ ತಮ್ಮ ತಂಡದೊಳಗಿನ ಭಿನ್ನಾಭಿಪ್ರಾಯಗಳನ್ನು ಗಮನಿಸಿಯೋ ಅಥವಾ ಸರ್ಕಾರದ ವಿಭಜನಾ ತಂತ್ರಕ್ಕೆ ಸಿಕ್ಕಿಯೋ ಏನೋ, ಕೇಜ್ರಿವಾಲಾರ ರಾಜಕೀಯ ಸಾಹಸದಿಂದ ದೂರ ಉಳಿಯಲು ನಿರ್ಧರಿಸಿದ್ದಾರೆ. ಆದರೆ ಕೇಜ್ರಿವಾಲರ ಒಳ್ಳೆಯ ಕೆಲಸಗಳಿಗೆ ತಮ್ಮ ಆಶೀರ್ವಾದವದೆಯೆಂದೂ ಅವರು ಸ್ಪಷ್ಟಪಡಿಸಿದ್ದಾರೆ. ಅಣ್ಣಾರ ಇಂತಹ ನಿಗಾ ಒಳ್ಳೆಯದಕ್ಕೇ.

ಅರವಿಂದ ಕೇಜ್ರಿವಾಲ್, ಭ್ರಷ್ಟಾಚಾರ ವಿರೋಧಿ ಆಂದೋಲನದ ಸಂದರ್ಭದಲ್ಲಿ ಸರ್ಕಾರದ ಅಧಿಪತಿಗಳು ಪದೇ ಪದೇ ಹಾಕುತ್ತಿದ್ದ ತಾಕತ್ತಿದ್ದರೆ ರಾಜಕೀಯ ಪ್ರವೇಶಿಸಿ ನಮ್ಮನ್ನು ಎದುರಿಸಿ ಎಂಬ ಸವಾಲನ್ನು ಸ್ವೀಕರಿಸಿದ್ದಾರೆ. ಅವರ ಜೊತೆ ಈಗ ಶಾಂತಿಭೂಷಣ್, ಪ್ರಶಾಂತ್ ಭೂಷಣ್, ಮನೀಶ್ ಸಿಸೋಡಿಯಾ, ಯೋಗೇಂದ್ರ ಯಾದವ್, ಷಾಜಿಯಾ ಇಲ್ಮಿ, ಪ್ರೊ. ಆನಂದಕುಮಾರ್, ಮಯಾಂಕ್ ಗಾಂಧಿ, ಕುಮಾರ್ ವಿಶ್ವಾಸ್‌ರಂತಹ ದೀರ್ಘ ಹೋರಾಟಗಳ ಹಿನ್ನೆಲೆಯಿರುವ ಹಲವು ಹಿರಿಯರು ಮತ್ತು ಯುವ ಚಿಂತಕರೂ ಸೇರಿಕೊಂಡಿದ್ದಾರೆ. ಇವೊತ್ತಿನ ದುಷ್ಟ ಮತ್ತು ಭ್ರಷ್ಟ ರಾಜಕೀಯ ವ್ಯವಸ್ಥೆಗೊಂದು ಪರ್ಯಾಯ ರೂಪಿಸುವ ಅನಿವಾರ್ಯತೆಯನ್ನು ಮನಗಂಡಿರುವ ಈ ತಂಡ ಈಗ ತನ್ನ ಪ್ರಯತ್ನದ ಮೊದಲ ಭಾಗವಾಗಿ ಈ ರಾಜಕೀಯ ವ್ಯವಸ್ಥೆಯ ಪಕ್ಷಾತೀತ ಭ್ರಷ್ಟತೆ ಮತ್ತು ಅವುಗಳ ನಡುವಣ ಪರಸ್ಪರ ಸಹಕಾರ ಮತ್ತು ರಕ್ಷಣೆಯ ರೀತಿ ನೀತಿಗಳನ್ನು ಬಯಲುಗೊಳಿಸುವ ಹಗರಣಗಳನ್ನು ವಿಶ್ವಾಸಾರ್ಹ ಸಾಕ್ಷ್ಯಗಳೊಂದಿಗೆ ರಾಷ್ಟ್ರದ ಮುಂದಿಡುತ್ತಿದೆ.

ಈ ಮೊದಲೇ ಈ ತಂಡ ಪ್ರಧಾನ ಮಂತ್ರಿಯೂ ಸೇರಿದಂತೆ ಕೇಂದ್ರದ ಹದಿನೈದು ಸಚಿವರ ವಿರುದ್ಧ ಆರೋಪ ಪಟ್ಟಿಯನ್ನು ಪ್ರಕಟಿಸಿ ಇವುಗಳ ಬಗ್ಗೆ 'ವಿಶೇಷ ತನಿಖಾ ದಳ'ದ ಮೂಲಕ ತನಿಖೆ ನಡೆಸುವಂತೆ ಆಗ್ರಹಿಸಿತ್ತು. ಆದರೆ ಸರ್ಕಾರ ಇದಕ್ಕೆ ಸೊಪ್ಪು ಹಾಕದ ಕಾರಣ ಅದೀಗ ತನ್ನ ಕಾರ್ಯಾಚರಣೆಯನ್ನು ತೀವ್ರಗೊಳಿಸಿ, ದಿನವಹಿ ಕಾರ್ಯಕ್ರಮದಂತೆ ದೆಹಲಿ ಮುಖ್ಯ ಮಂತ್ರಿ ಶೀಲಾ ದೀಕ್ಷಿತ್, ಸೋನಿಯಾ ಗಾಂಧಿಯವರ ಅಳಿಯ ರಾಬರ್ಟ್ ವಾಡ್ರಾ, ಕೇಂದ್ರ ಕಾನೂನು ಸಚಿವ ಸಲ್ಮಾನ್ ಖುರ್ಷೀದ್ ಮತ್ತು ಬಿಜೆಪಿ ಅಧ್ಯಕ್ಷ ನಿತಿನ್ ಗಡ್ಕರಿ ಅವರಿಗೆ ಸಂಬಂಧಿಸಿದ ಭ್ರಷ್ಟಾಚಾರದ ಹಗರಣಗಳನ್ನು ವಿವರ ಸಹಿತ ಬಹಿರಂಗಗೊಳಿಸುತ್ತಾ ಹೋಗುತ್ತಿದೆ. ಈ ವಿವರಗಳು ನಮ್ಮ ರಾಜಕೀಯ ನಾಯಕರು ಮತ್ತು ಅವರ ಆಪ್ತರು ಎಷ್ಟು ನಿರ್ಲಜ್ಜೆ ಮತ್ತು ನಿರ್ಭಯವಾಗಿ ಸಾರ್ವಜನಿಕ ಹಣ ಮತ್ತು ಆಸ್ತಿಪಾಸ್ತಿಯನ್ನು ಲೂಟಿ ಮಾಡತೊಡಗಿದ್ದಾರೆ ಎಂಬುದನ್ನು ಕ್ರಮೇಣ ಜನರಿಗೆ ಮನವರಿಕೆ ಮಾಡಿಕೊಡುತ್ತಿವೆ. ಇದು ರಾಷ್ಟ್ರದ ಎರಡು ಪ್ರಮುಖ ಪಕ್ಷಗಳನ್ನು ಬುಡಸಮೇತ ಅಲುಗಾಡಿಸಿದೆಯಷ್ಟೇ ಅಲ್ಲ, ಮಿಕ್ಕ ಪಕ್ಷಗಳೂ ಗಾಬರಿಯಿಂದ ಎದ್ದು ಕೂಡುವಂತೆ ಮಾಡಿದೆ.

ಸಹಜವಾಗಿಯೇ ಇಡೀ ರಾಜಕೀಯ ವ್ಯವಸ್ಥೆ, ನಿರ್ದಿಷ್ಟವಾಗಿ ರಾಷ್ಟ್ರದ ಎರಡು ಪ್ರಮುಖ ಪಕ್ಷಗಳು ಕೇಜ್ರಿವಾಲ್ ತಂಡದ ವಿರುದ್ಧ ಹಲವು ನೆಲೆಗಳ ದಾಳಿ ಆರಂಭಿಸಿವೆ. ಕೇಜ್ರಿವಾಲಾ ತಂಡ ಇದೆಲ್ಲಕ್ಕೂ ಸಿದ್ಧವಾಗಿಯೇ ಇದ್ದಂತಿದೆ. ಏಕೆಂದರೆ ಈ ತಂಡದ ವಿರುದ್ಧ ಮಾಡಲಾಗುತ್ತಿರುವ ಆರೋಪಗಳಲ್ಲಿ ಹೊಸದೆನ್ನುವುದು ಏನೂ ಇಲ್ಲ. ಇವಕ್ಕೆ ಉತ್ತರಗಳನ್ನು ಈಗಾಗಲೇ ಕೊಡಲಾಗಿದೆ.(ನೋಡಿ: 'ನವ ಮಾನವ': ಅಕ್ಟೋಬರ್, ೨೦೧೧) ಇನ್ನೂ ಅನುಮಾನಗಳಿದ್ದರೆ ಎಲ್ಲ ಅಧಿಕಾರವಿರುವ ಸರ್ಕಾರವೇ ಆ ಬಗ್ಗೆ ತನಿಖೆ ಮಾಡಲಿ ಎಂದೂ ತಂಡ ಸವಾಲೆಸೆದಿದೆ. ಈ ಸವಾಲನ್ನು ಸರ್ಕಾರ ಸ್ವೀಕರಿಸಲು ಏಕೋ ಹಿಂಜರಿಯುತ್ತಿದೆ. ಬದಲಿಗೆ ಜನರ ಮನಸ್ಸಿನಲ್ಲಿ ಈ ತಂಡದ ಬಗ್ಗೆ ಗೊಂದಲ ಸೃಷ್ಟಿಸಲು, ತನ್ನ ಅದಕ್ಷ ಮತ್ತು ಭ್ರಷ್ಟ ಆಡಳಿತದಿಂದಾಗಿ ಹತ್ತು ವರ್ಷಗಳ ಹಿಂದೆಯೇ ಮಧ್ಯಪ್ರದೇಶದಲ್ಲಿ ಬಿಜೆಪಿಗೆ ಅಧಿಕಾರವನ್ನು ತಟ್ಟೆಯಲ್ಲಿಟ್ಟುಕೊಟ್ಟು ಬಂದ ದಿಗ್ವಿಜಯ ಸಿಂಗ್ ಎಂಬ ನೆಹ್ರೂ ಕುಟುಂಬದ ಆಸ್ಥಾನ ವಿದೂಷಕನ ಮೂಲಕ ಈ ತಂಡದ ಮೇಲೆ ಪದೇ ಪದೇ ಹಣಕಾಸಿನ ದುರ್ವ್ಯವಹಾರ ಮತ್ತು ಬಿಜೆಪಿಯ ಒಳ ರಾಜಕಾರಣದ ಭಾಗವಾಗಿರುವ ಆರೋಪಗಳನ್ನು ಹೊರಿಸುತ್ತಲೇ ಇದೆ.

ಈ ಅರವಿಂದ ಕೇಜ್ರಿವಾಲ್ ಎಲ್ಲಿಂದಲೂ ಇದ್ದಕ್ಕಿದ್ದಂತೆ ರಾಜಕೀಯ ಹೋರಾಟ ಕ್ಷೇತ್ರವನ್ನು ಪ್ರವೇಶಿಸಿದವರಲ್ಲ. ಅವರು ಭಾರತೀಯ ಕಂದಾಯ ಸೇವೆಯಲ್ಲಿ ಹಿರಿಯ ಅಧಿಕಾರಿಯಾಗಿದ್ದವರು. ಆದರೆ ರಾಷ್ಟ್ರ ಜೀವನವನ್ನು ಆವರಿಸುತ್ತಿದ್ದ ಬೃಹತ್ ಭ್ರಷ್ಟಾಚಾರವನ್ನು ಕಂಡು ಗಾಬರಿಯಾಗಿ ಸೇವೆಯಿಂದ ನಿವೃತ್ತಿ ಪಡೆದವರು. ಭ್ರಷ್ಟಾಚಾರ ವಿರೋಧಿ ಹೋರಾಟದ ಮೊದಲ ಹಂತವಾಗಿ ಮಾಹಿತಿ ಹಕ್ಕು ಕಾಯಿದೆ ರಚನೆ ಮತ್ತು ಜಾರಿಗಾಗಿ ಜನಾಂದೋಲನವನ್ನು ರೂಪಿಸಿದವರು. ಅದಕ್ಕಾಗಿ ಏಷ್ಯಾದ ನೊಬೆಲ್ ಎಂದೆನಿಸಿರುವ ಮ್ಯಾಗ್ಸೆಸೆ ಪ್ರಶಸ್ತಿ ಪಡೆದವರು. ಅದರಿಂದ ಬಂದ ಪ್ರಶಸ್ತಿ ಹಣವನ್ನು 'ಭಾರತ್ ಸ್ವರಾಜ್ ಆಂದೋಲನ'ದಲ್ಲಿ ಹೂಡಿದವರು. ನಂತರವಷ್ಟೇ ಅವರು ಅಣ್ಣಾ ಹಜಾರೆ ತಂಡ ಸೇರಿ 'ಭ್ರಷ್ಟಾಚಾರ ವಿರೋಧಿ ಭಾರತ' ಎಂಬ ವೇದಿಕೆಯನ್ನು ಸ್ಥಾಪಿಸಿದ್ದು. ಅವರ ತಂಡ ಈಗ ಒಂದು ಕಡೆ ಪ್ರಸಕ್ತ ರಾಜಕೀಯ ವ್ಯವಸ್ಥೆಯ ಕೊಳಕನ್ನು ಜನಸಾಮಾನ್ಯರ ಗಮನಕ್ಕೆ ತರುವ ಹಗರಣಗಳನ್ನು ಬಯಲು ಮಾಡುವ ಕೆಲಸದಲ್ಲಿ ತೊಡಗಿರುವಂತೆಯೇ, ಇನ್ನೊಂದೆಡೆ ಈ ವ್ಯವಸ್ಥೆಗೆ ಪರ್ಯಾಯವಾದ ರಾಜಕೀಯ ವ್ಯವಸ್ಥೆಯೊಂದನ್ನು ರೂಪಿಸುವ ರಚನಾತ್ಮಕ ಕೆಲಸದಲ್ಲೂ ತೊಡಗಿದೆ. ಅದು ತನ್ನ ರಾಜಕೀಯ ಪ್ರಣಾಳಿಕೆಯೊಂದನ್ನು ಕರಡು ರೂಪದಲ್ಲಿ ಸಿದ್ಧಪಡಿಸಿ ಸಾರ್ವಜನಿಕರ ಅಭಿಪ್ರಾಯಗಳಿಗಾಗಿ ಜನರ ಮುಂದಿರಿಸಿದೆ. (ವಿವರಗಳಿಗಾಗಿ india

against corruptionನ ಜಾಲತಾಣದಲ್ಲಿ ನೋಡಬಹುದು) ಆದರೆ ಏನು ಸಿಕ್ಕರೂ ಅದನ್ನೆಲ್ಲ ಮಸಾಲೆ ಮಾಡಿಯೇ ಮಾರುವ ನಮ್ಮ ಮಾಧ್ಯಮಗಳು ಕೇಜ್ರಿವಾಲರ ತಂಡ ಈಗ ಬಯಲುಗೊಳಿಸುತ್ತಿರುವ ಹಗರಣಗಳನ್ನು ಕುರಿತು ರೋಚಕ ಚರ್ಚೆಗಳನ್ನು ಏರ್ಪಡಿಸುತ್ತಾ ತಮ್ಮ ಜಾಹೀರಾತು ಆದಾಯವನ್ನು ಹೆಚ್ಚಿಸಿಕೊಳ್ಳುತ್ತಿವೆಯೇ ಹೊರತು, ಈ ಪರ್ಯಾಯ ರಾಜಕೀಯ ಪ್ರಣಾಳಿಕೆಯ ಬಗ್ಗೆ ಚರ್ಚೆಯಿರಲಿ, ಎಲ್ಲಿಯೂ ಒಂದು ಪ್ರಸ್ತಾಪವನ್ನೂ ಮಾಡಲು ಹೋಗಿಲ್ಲ! ಹಾಗಾಗಿ ಈ ಮಾಧ್ಯಮಗಳೂ ಪ್ರಸಕ್ತ ರಾಜಕೀಯ ವ್ಯವಸ್ಥೆಯ ಭಾಗವಾಗಿಯೇ ಇದ್ದು ಇಂತಹ ಮಾಧ್ಯಮಗಳನ್ನು ನಂಬಿ ಹೊಸ ರಾಜಕೀಯ ಸಂಸ್ಕೃತಿಯನ್ನು ಬೆಳೆಸಲಾಗುವುದಿಲ್ಲ ಎಂಬುದನ್ನು ಕೇಜ್ರಿವಾಲ್ ತಂಡ ಆದಷ್ಟು ಬೇಗ ಅರಿಯಬೇಕಿದೆ.

ಈ ಕರಡು ಪ್ರಣಾಳಿಕೆ ಮೊದಲ ನೋಟಕ್ಕೆ ಗಾಂಧೀಜಿಯ 'ಹಿಂದ್ ಸ್ವರಾಜ್'ನಿಂದ ತನ್ನ ತಾತ್ವಿಕ ಸ್ಫೂರ್ತಿ ಪಡೆದಂತೆ ತೋರುತ್ತಾ ಆಸೆ ಹುಟ್ಟಿಸುತ್ತದೆ. ಅದು ಭಾರತದ ಇಡೀ ರಾಜಕಾರಣವನ್ನು ಅತಿ ಕೆಳ ಹಂತದಿಂದ ಪುನಾರಚಿಸುವ ಆಶಯವನ್ನು ವ್ಯಕ್ತಪಡಿಸುತ್ತದೆ. ಎಲ್ಲ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ನಿರ್ಧಾರಗಳೂ ಸ್ಥಳೀಯ ಗುಂಪು ಮತ್ತು ಸಮುದಾಯಗಳ ಹಂತದಿಂದ ಮೂಡಬೇಕು ಎಂದು ಅದು ಸೂಚಿಸುತ್ತದೆ. ಎಲ್ಲ ರಾಷ್ಟ್ರೀಯ ಅಗತ್ಯಗಳು ಜನರ ಅಗತ್ಯಗಳಾಗಿ ಅವರ ಮಧ್ಯದಿಂದ ಮೂಡಬೇಕು ಎಂದು ಅದು ತನ್ನ ಅರ್ಥಶಾಸ್ತ್ರೀಯ ಚಿಂತನೆಯನ್ನು ಪ್ರಸ್ತುತಪಡಿಸಿದೆ. ಇದೆಲ್ಲದರ ಹಿಂದೆ ಸಮುದಾಯಗಳ ನಾಶವೇ ಭಾರತದ ನಾಶಕ್ಕೆ ಕಾರಣ ಎಂಬ ಅರಿವು ಇದ್ದಂತಿದೆ. ಹಾಗಾಗಿ ವಿಕೇಂದ್ರೀಕರಣ ಈ ಪ್ರಣಾಳಿಕೆಯ ಕೇಂದ್ರ ಕಾಳಜಿಯಾಗಿದೆ. ಸಾಮಜಿಕ ಮತ್ತು ಆರ್ಥಿಕ ಸಮಾನತೆಯ ಸಾಧನೆಯ ಮಾರ್ಗವಾಗಿ ದಲಿತ, ಅಲ್ಪಸಂಖ್ಯಾತ, ಆದಿವಾಸಿ ಮತ್ತು ಇತರೆ ದುರ್ಬಲ ವರ್ಗಗಳಿಗೆ ವಿಶೇಷ ಪ್ರೋತ್ಸಾಹದ ಅಗತ್ಯವನ್ನು ಪುರುಚ್ಚರಿಸಿರುವ ಪ್ರಣಾಳಿಕೆ ತನ್ನ ಸಂಘಟನೆ ಮತ್ತು ಚುನಾವಣಾ ಅಭ್ಯರ್ಥಿಗಳ ಆಯ್ಕೆಯಲ್ಲಿ ಮಹಿಳೆಯರಿಗೆ ಶೇ. ೩೦ರ ಮೀಸಲಾತಿಯನ್ನು ಪ್ರಕಟಿಸಿದೆ. ಈ ಎಲ್ಲ ದೃಷ್ಟಿಯಿಂದ ಇದು ಗಾಂಧಿ–ಲೋಹಿಯಾ ಸಮಾಜವಾದಿ ಚಿಂತನೆಯನ್ನು ಹೋಲುವಂತಿದ್ದು, ಒಟ್ಟಾರೆಯಾಗಿ ಜೆಪಿಯವರ 'ಸಂಪೂರ್ಣ ಕ್ರಾಂತಿ' ಪರಿಕಲ್ಪನೆಯ ಪುನಾರಚಿತ ಕರ್ಯಕ್ರಮ ರೂಪವೇ ಆಗಿದೆ. ಈ ಹಿನ್ನೆಲೆಯಲ್ಲಿ, ಈ ತಂಡದ ಯೋಗೇಂದ್ರ ಯಾದವ್ ಮತ್ತು ಪ್ರೊ॥ ಆನಂದ ಕುಮಾರ್ ಲೋಹಿಯಾ ಸಮಾಜವಾದಿಗಳೇ ಆಗಿದ್ದು ಅವರು ಜೆಪಿ ಚಳುವಳಿಯ ಉತ್ಪನ್ನಗಳೂ ಆಗಿದ್ದಾರೆ ಎಂಬುದನ್ನೂ ನಾವು ಗಮನಿಸಬಹುದು.

ಆದರೆ ಪ್ರಣಾಳಿಕೆ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ಮಾದರಿಗಳ ಬಗ್ಗೆ ಸ್ಪಷ್ಟವಾಗಿ ಏನನ್ನೂ ಹೇಳಿಲ್ಲ. ಹಾಗೇ, ಬಹು ಮುಖ್ಯವಾದ ಜನರಿಗೇ ನೇರ ಆಡಳಿತದ ಹೊಣೆ ಒದಗಿಸುವ ವ್ಯವಸ್ಥೆಗಾಗಿ ಮತ್ತು ಚುನಾವಣಾ ಸುಧಾರಣೆ, ಪೋಲೀಸ್ ಸುಧಾರಣೆ ಹಾಗೂ ನ್ಯಾಯಾಂಗ ಸುಧಾರಣೆಗಳಿಗಾಗಿ ಕಾನೂನು ಮತ್ತು ಸಂವಿಧಾನಗಳ ನೆಲೆಯಲ್ಲಿ ಅಗತ್ಯವಾದ ಬದಲಾವಣೆಗಳ ಬಗ್ಗೆ ಈ ಕರಡು ಪ್ರಣಾಳಿಕೆ ಮೌನವಾಗಿದೆ. ನಿಜ, ಅದರ ಘೋಷಿತ ರಾಜಕೀಯ ಆಶಯಗಳು ಮತ್ತು ಕಾರ್ಯಕ್ರಮಗಳನ್ನು ಸಮಗ್ರವಾಗಿ ನೋಡಿದಾಗ ಈ ಬದಲಾವಣೆಗಳ ಅನಿವಾರ್ಯತೆ ಅದರಲ್ಲಿ ಪರೋಕ್ಷವಾಗಿ ಸೂಚಿತವಾದಂತಿವೆ. ಆದರೆ ಅವುಗಳ ಬಗೆಗಿನ ಸ್ಪಷ್ಟ ಬದ್ಧತೆ ಮತ್ತು ಮಾರ್ಗಸೂಚಿಯನ್ನು ಇದೇ ನವೆಂಬರ್ ೨೬ರಂದು ಘೋಷಿತವಾಗಲಿದೆಯೆಂದು ಹೇಳಲಾಗಿರುವ ಪ್ರಣಾಳಿಕೆಯ ಅಂತಿಮ ರೂಪದಲ್ಲಾದರೂ ನಿರೂಪಿಸಬೇಕಿದೆ. ಜೊತೆಗೆ ಹೊಸ ಪಕ್ಷ ಕಟ್ಟುವ ಮತ್ತು ಅದನ್ನು ಜನರ ಕಣ್ಣಿನಲ್ಲಿ ಒಂದು ವಿಶ್ವಾಸಾರ್ಹ ಹಾಗೂ ವ್ಯಾವಹಾರಿಕ ವಿದ್ಯಮಾನ ಎನ್ನುವಂತೆ ಮಾಡುವ ಬೇರುಮಟ್ಟದ ಕೆಲಸವನ್ನು ಶೀಘ್ರ ಗತಿಯಲ್ಲಿ ಆರಂಭಿಸಬೇಕಿದೆ. ಈ ತಂಡ ಇಂಗ್ಲಿಷ್ ಬಲ್ಲ ವಿದ್ಯಾವಂತರೂ ಮತ್ತು ಬುದ್ಧಿವಂತರಿಂದಲೂ ಕೂಡಿದೆ. ಅದರೆ ಇದು ಅದರ ಶಕ್ತಿಯಾಗಿರುವಂತೆಯೇ, ತನ್ನ ನಾಯಕತ್ವವನ್ನು ಜನಸಾಮಾನ್ಯರ ಮಧ್ಯೆಯೂ ವಿಸ್ತರಿಸದೇ ಹೋದರೆ ದೊಡ್ಡ ದೌರ್ಬಲ್ಯವೂ ಆಗಿಬಿಡಬಹುದು. ಈ ಎಚ್ಚರ ತಂಡಕ್ಕೆ ಆದಷ್ಟು ಬೇಗ ಮೂಡಬೇಕಿದೆ. ಅದರ ತಕ್ಷಣದ ಗಮನ ದೆಹಲಿ ರಾಜ್ಯ ವಿಧಾನ ಸಭೆಯ ಚುನಾವಣೆಗಳಾದರೂ, ಅದು ಆದಷ್ಟು ಬೇಗ ರಾಷ್ಟ್ರಾದ್ಯಂತ ತನ್ನ ಇರವನ್ನು ಸ್ಥಾಪಿಸಬೇಕಿದೆ. ಉದಾಹರಣೆಗೆ ಕರ್ನಾಟಕದಲ್ಲಿ ಅದರ ದಾತರು ಯಾರು ಎಂಬುದನ್ನು ಹುಡುಕಾಡುವ ಪರಿಸ್ಥಿತಿ ಇದೆ!

ಜನ ಸದ್ಯದ ರಾಜಕೀಯ ಸಂಸ್ಕೃತಿಯೊಂದಿಗೆ ಅನಿವಾರ್ಯವಾಗಿ ಹೊಂದಿಕೊಂಡುಹೋಗುವ ಅನಿವಾರ್ಯತೆಗೆ ಸಿಕ್ಕಿ ಬಳಲಿದ್ದಾರೆ. ಅವರಿಗೆ ನಿಜವಾದ ರಾಜಕೀಯ ಪರ್ಯಾಯವೊಂದು ಮೂಡುತ್ತಿದೆ ಎಂಬ ನಂಬಿಕೆ ಉಂಟಾದಲ್ಲಿ ಖಂಡಿತ ಅದನ್ನು ಸ್ವಾಗತಿಸಲಿದ್ದಾರಷ್ಟೇ ಅಲ್ಲ, ಬೆಂಬಲಿಸುತ್ತಾರೆ ಕೂಡ. ಹಾಗೆ ತನ್ನ ನಿಜತ್ವ ಮತ್ತು ವಿಶ್ವಾಸಾರ್ಹತೆಯನ್ನು ಸ್ಥಾಪಿಸುವುದು ಕೇಜ್ರಿವಾಲ್ ತಂಡದ ತುರ್ತು ಕೆಲಸವಾಗಿದೆ. ಇಲ್ಲವಾದರೆ ಈ ಹೋರಾಟ ನಮ್ಮ ಈವರೆಗಿನ ಎಲ್ಲ ಪರ್ಯಾಯ ರಾಜಕಾರಣದ ಪ್ರಯತ್ನಗಳಂತೆಯೇ ಹಾರಾಟವಾಗಿ ಮಾತ್ರ ಪರ್ಯಾವಸನಗೊಳ್ಳಲಿದೆ. ಈ ಎಚ್ಚರಿಕೆಯೊಂದಿಗೆ, ಈ ತಂಡಕ್ಕೆ, ಅದರ ಪ್ರಯತ್ನಕ್ಕೆ 'ನವ ಮಾನವ ಮಾಸಿಕ'ದ ಶುಭಾಶಯಗಳು!

**–ಸಂಪಾದಕ**

## ನಿಮ್ಮ ಮಾತು

ಪ್ರಿಯ ಸಂಪಾದಕರೇ,

ಪತ್ರಿಕೆ 'ಹೊಸ ಮನುಷ್ಯ' ಎಂಬ ಶೀರ್ಷಿಕೆಯಲ್ಲಿ ಬರಲಿ. ಅದರಿಂದ ಅಂಚೆ ರಿಯಾಯ್ತಿ ಮತ್ತು ಸರ್ಕಾರಿ ಜಾಹೀರಾತು ದೊರೆತು ಪತ್ರಿಕೆ ಆರ್ಥಿಕ ಸುಭದ್ರತೆಯನ್ನು ಪಡೆಯಲು ಸಹಾಯವಾಗುತ್ತದೆ.

ಕಿಡಿಗೇಡಿ ಅಂಕಣ ಸುತ್ತಲಿನ ರಾಜಕೀಯ ಮತ್ತು ಬೌದ್ಧಿಕ ಲೋಕದ 'ಒಂದು ಚುರುಕಾದ ವ್ಯಂಗ್ಯ ನೋಟ ಒದಗಿಸಿ ಮನವನ್ನು ಮುದಗೊಳಿಸುತ್ತಾದ್ದರಿಂದ ಅದನ್ನು ಮುಂದುವರೆಸಿ. ಆದರೆ ಈ ಅಂಕಣ ಮತ್ತು 'ಇದು ಭಾರತ! ಇದು ಭಾರತ!!' ಸೇರಿ ಒಂದು ಪುಟ ಮೀರದಿರಲಿ.

**–ಎಚ್.ಆರ್. ಬಸವರಾಜು**, ಬೆಂಗಳೂರು

ಪತ್ರಿಕೆ ಹೊಸ ಅರಿವು ಮೂಡಿಸುವ, ವಿಸ್ತರಿಸುವ ನೆಲೆಯಲ್ಲಿ ಕೆಲಸ ಮಾಡಲು ಯತ್ನಿಸುತ್ತಿದೆ. ಲೇಖಕರು ಮತ್ತಷ್ಟು ಅನುಭವ ನೆಲೆಗಳಿಂದ ಬಂದರೆ ಒಳಿತೆಂದು ಅನ್ನಿಸುತ್ತಿದೆ.

ಇದರೊಡನೆ ಒಂದು ಸಾವಿರ ರೂಪಾಯಿಗಳ ಡಿ.ಡಿ. ಇರಿಸಿರುವೆ. ನಮ್ಮ ಕಾಲೇಜು ವಾಚನಾಲಯದ ಚಂದಾ ಕೂಡಾ ಕಳಿಸುತ್ತಿರುವೆ,

**–ಶಿವರಾಮು ಕಾಡನಕುಪ್ಪೆ**, ಮೈಸೂರು

ಅಕ್ಟೋಬರ್ ಸಂಚಿಕೆಯ ನಿಮ್ಮ ಸಂಪಾದಕೀಯದ ರಾಜಕೀಯ ಅರ್ಥಶಾಸ್ತ್ರದ ವಿಶ್ಲೇಷಣೆ ಅದ್ಭುತವಾಗಿದೆ. ಮೊದಲಿನಿಂದಲೂ ನೀವು ಮನಮೋಹನ ಸಿಂಗರ ಆರ್ಥಿಕ ನೀತಿಯ ಮೇಲೆ ವಿಶೇಷವಾಗಿ ಕಣ್ಣು ಇಟ್ಟಿರುವಂತಿದೆ. ಇರಲಿ. ನೀವು ಹಾಗಿಲ್ಲದಿದ್ದರೆ ನಮ್ಮಂತಹವರ ಕಣ್ಣು ತೆರೆಯುತ್ತಿರಲಿಲ್ಲ. ಇವತ್ತು 'ಹಾಸಿಗೆ ಇದ್ದಷ್ಟೂ ಮತ್ತಷ್ಟೂ ಕಾಲು ಚಾಚು' ಎಂದು ಕರೆಯುವ ಮುಕ್ತ ಮಾರುಕಟ್ಟೆಯೇ ಸರ್ಕಾರದ ಜೀವಾಳ ಎಂದಮೇಲೆ ಯಾರಾದರೂ ವಿವೇಕ ಹೇಳಲು ಬರುವುದೇ?

ನ್ಯಾಯಾಂಗ ವ್ಯವಸ್ಥೆಯಾದರೂ ಜನಸಾಮಾನ್ಯರ ನೆರವಿಗೆ ಬರುವಂತಿದ್ದರೆ ಎಷ್ಟೋ ಹಗುರವಾಗುತ್ತಿತ್ತು. ಆದರೆ ಅದರೊಳಗಿರುವ ಮಹತ್ತರ ದೋಷಗಳನ್ನೂ ಎತ್ತಿ ತೋರಿಸಿದೆ ರುಚಿಕಾ ಪ್ರಕರಣ ಮತ್ತು ನ್ಯಾ. ಬಿ.ಜೆ.ಕೋಚರ್ ರವರ ಲೇಖನ.

ಗಾಂಧಿ ಆತ್ಮಕತೆಯ ಪವಾಡ ಸಕಾಲಿಕವಾಗಿದೆ ಮತ್ತು ಸ್ಫೂರ್ತಿದಾಯಕವಾಗಿದೆ.

**–ಟಿ.ಎಲ್.ರೇಖಾಂಬ**, ಶಿವಮೊಗ್ಗ

ನಿಮ್ಮ ಸಂಪಾದಕೀಯ ಮನಮುಟ್ಟುವಂತಿದೆ. ಮನಮೋಹನ ಸಿಂಗ್‌ರು ಗಾಂಧಿ ಅರ್ಥ ಚಿಂತನೆಯನ್ನೂ ಸರಳ ಜೀವನ ಮಾದರಿಯನ್ನೂ ನಾಮಾವಶೇಷ ಮಾಡಲು ಪಣ ತೊಟ್ಟಂತಿದೆ. ರುಚಿಕಾ ಪ್ರಕರಣವಂತೂ ಭೀಕರ. ಈ ವ್ಯವಸ್ಥೆಯಲ್ಲಿ ಸಾಮಾನ್ಯರು ನಿರುಮ್ಮಳವಾಗಿ ಬದುಕಲು ಅಸಾಧ್ಯವೆನ್ನಿಸುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.

ಪತ್ರಿಕೆ 'ನವ ಮಾನವ 'ಎಂಬ ಹೆಸರಲ್ಲೇ ಬರಲಿ..

**–ಕೆ.ಪಿ. ಮೃತ್ಯುಂಜಯ**, ಬಜಗೋಳಿ

# ಕುಪ್ಪಳ್ಳಿಯಲ್ಲಿ 'ಗಾಂಧಿ ಮತ್ತು ಸಮಾಜವಾದ': ಅಧ್ಯಯನ ಶಿಬಿರ



ಸಾಗರದ ಲೋಹಿಯಾ ಜನ್ಮ ಶತಾಬ್ಧಿ ಪ್ರತಿಷ್ಠಾನವು ಕಳೆದ ಅಕ್ಟೋಬರ್ ೨೦ ಮತ್ತು ೨೧ರಂದು ತೀರ್ಥ ಹಳ್ಳಿ ಸಮೀಪದ ಕುಪ್ಪಳ್ಳಿಯಲ್ಲಿ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಹಯೋಗದಲ್ಲಿ 'ಗಾಂಧಿ ಮತ್ತು ಸಮಾಜವಾದ' ಕುರಿತು ಅಧ್ಯಯನ ಶಿಬಿರವನ್ನು ಏರ್ಪಡಿಸಿತ್ತು.

ಶಿಬಿರವನ್ನು ಉದ್ಘಾಟಿಸಿದ ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯ ನಿರ್ದೇಶಕ ಎನ್. ಆರ್. ವಿಶುಕುಮಾರ್, ಗಾಂಧಿ ವಿಚಾರಧಾರೆ ಭಾರತದಲ್ಲಿ ಮಸುಕಾಗುತ್ತಿದ್ದು ಗಾಂಧಿ ಪ್ರತಿಪಾದಿಸಿದ ಮೌಲ್ಯಗಳ ಪುನರ್ ವ್ಯಾಖ್ಯಾನವಾಗಬೇಕಿದೆ ಎಂದರು. ಹಾಗೇ ರಾಜ್ಯ ರಾಜಕಾರಣವನ್ನು ಪರಿಣಮಕಾರಿಯಾಗಿ ಕಟ್ಟುವಲ್ಲಿ ಸಮಾಜವಾದಿಗಳು ವಹಿಸಿದ ಪಾತ್ರವನ್ನು ಅವರು ನೆನಪಿಸಿದರು. ಅಧ್ಯಕ್ಷತೆ ವಹಿಸಿದ್ದ ಪ್ರತಿಷ್ಠಾನದ ಉಪಾಧ್ಯಕ್ಷ ಬಿ.ಪಿ.ವೀರೇಂದ್ರಕುಮಾರ್, ಪಾಶ್ಚಾತ್ಯ ಜೀವನ ಶೈಲಿ ನಮ್ಮನ್ನು ಆವರಿಸಿಕೊಳ್ಳುತ್ತಿರುವ ಈ ಹೊತ್ತಿನಲ್ಲಿ ಗಾಂಧಿಯನ್ನು ನಮ್ಮ ಸಮಕಾಲೀನ ಬದುಕಿಗೆ ಹೇಗೆ ಪ್ರಸ್ತುತಗೊಳಿಸಿಕೊಳ್ಳಬೇಕು ಎನ್ನುವುದರ ಪರಿಶೀಲನೆ ನಿರಂತರವಾಗಿ ನಡೆಯಬೇಕಿದೆ ಎಂದರು.

ಮೊದಲ ಗೋಷ್ಠಿಯಲ್ಲಿ 'ಗಾಂಧಿ ಮತ್ತು ಸಮಾಜವಾದಿಗಳ ಸಂವಾದ' ವಿಷಯವಾಗಿ ಶಿಬಿರದ ಪ್ರವೇಶ ಭಾಷಣ ಮಾಡಿದ ಪ್ರತಿಷ್ಠಾನದ ಅಧ್ಯಕ್ಷ ಡಿ.ಎಸ್.ನಾಗಭೂಷಣ ಅವರು, ಮೂಲತಃ ಐರೋಪ್ಯ ಪರಿಕಲ್ಪನೆಯಾದ ಸಮಾಜವಾದ ಭಾರತದಲ್ಲಿ ಅರ್ಥಪೂರ್ಣವಾದದ್ದೇ ಗಾಂಧಿ ಪ್ರಭಾವದಲ್ಲಿ ಎಂದರು. ಗಾಂಧಿ ಮತ್ತು ಸಮಾಜವಾದಿಗಳ ನಡುವಣ ನಿರಂತರ ಸಂವಾದ ಗಾಂಧೀಜಿಯನ್ನೂ, ಸಮಾಜ ವಾದಿಗಳನ್ನೂ ಒಟ್ಟಿಗೇ ಜಾತಿ, ಧರ್ಮ, ಭೂಮಿ, ತಂತ್ರಜ್ಞಾನ, ಭಾಷೆ, ಹಿಂಸೆ ಮುಂತಾದ ವಿಷಯಗಳಲ್ಲಿ ಪರಸ್ಪರ ಬದಲಾವಣೆಗಳಿಗೆ ಒಳಪಡಿಸುತ್ತಾ ಹೋಯಿತು. ಇಂದಿನ ನಿರ್ದಯ ಪೈಪೋಟಿಯ ಜಗತ್ತಿನಲ್ಲಿ ಹಿಂಸೆಯೇ ವಿವಿಧ ರೂಪಗಳಲ್ಲಿ ಜೀವನ ಶೈಲಿ ಮತ್ತು ಧರ್ಮವಾಗಿ ಅವತರಿಸುತ್ತಿದ್ದು ಗಾಂಧಿ ಪ್ರಣೀತ ಸಮಾಜವಾದದ ಪುನರನ್ವೇಷಣೆ, ಲೋಹಿಯಾ ಬಿಟ್ಟುಹೋದ ಹಂತದಿಂದ ಮತ್ತೆ ಆರಂಭವಾಗುವ ತುರ್ತು ಅಗತ್ಯವಿದೆ ಎಂದು ನಾಗಭೂಷಣ ಪ್ರತಿಪಾದಿಸಿದರು.

ಎರಡನೇ ಗೋಷ್ಠಿಯಲ್ಲಿ 'ಗಾಂಧಿಯ ಸಂಪ್ರದಾಯವಾದ ಮತ್ತು ಸಮಾಜವಾದ' ಎಂಬ ವಿಷಯ ಕುರಿತು ಮಂಗಳೂರು. ವಿ.ವಿ.ದ ರಾಜ್ಯಶಾಸ್ತ್ರ ಪ್ರಾಧ್ಯಾಪಕ ಡಾ.ರಾಜಾರಾಮ್ ತೋಳ್ಪಾಡಿ ಮಾತನಾಡಿ, ಗಾಂಧೀಜಿ ಸಂಪ್ರದಾಯವಾದಿ, ಧಾರ್ಮಿಕವಾದಿ, ಬಂಡವಾಳವಾದಿ, ಸಮಾಜವಾದಿ ಹೌದು ಅಥವಾ ಅಲ್ಲ ಎಂಬ ವರ್ಗೀಕರಣಗಳಿಗೆ ಸಿಗದಂತಹ ತಮ್ಮದೇ ಸ್ವತಂತ್ರ ದಾರಿ ಸವೆಸಿದ ದಾರ್ಶನಿಕರಾಗಿದ್ದು, ಅವರನ್ನು 'ನೈತಿಕ ರಾಜಕಾರಣದ ದಾರ್ಶನಿಕ' ಎಂದಷ್ಟೇ ಕರೆಯಬಹುದು ಎಂದು ಅಭಿಪ್ರಾಯಪಟ್ಟರು. ನೈತಿಕತೆ ಮತ್ತು ಧರ್ಮದ ನಡುವೆ ಆಯ್ಕೆ ಬಂದರೆ ನಾನು ನೈತಿಕತೆಯನ್ನೇ ಆಯ್ದುಕೊಳ್ಳುತ್ತೇನೆ ಎಂದು ಗಾಂಧಿ ಹೇಳಿದ್ದನ್ನು ನೆನಪಿಸಿದ ತೋಳ್ಪಾಡಿ, ಗಾಂಧೀಜಿಯ ಧರ್ಮದೃಷ್ಟಿ ಆಧುನಿಕವಾದದ್ದು, ಲೌಕಿಕವಾದದ್ದು ಮತ್ತು ಕ್ರಾಂತಿಕಾರಕವಾದದ್ದು ಎಂದರು. ತೋಳ್ಪಾಡಿ, ಈ ಅರ್ಥದಲ್ಲಿ ಗಾಂಧಿ ಸಮಾಜವಾದವನ್ನೂ ಒಂದು ನೈತಿಕ ಮತ್ತು ಕ್ರಾಂತಿಕಾರಕ ಧರ್ಮವಾಗಿ ಅರ್ಥೈಸುವ ಪ್ರಯತ್ನ ಮಾಡಿದರು ಎಂದರು.

ಮೂರನೇ ಗೋಷ್ಠಿಯಲ್ಲಿ 'ಸಾಮ್ರಾಜ್ಯಶಾಹಿ–ಬಂಡವಾಳಶಾಹಿ–ಸಮಾಜವಾದ:ಗಾಂಧಿ ನೋಟ' ಎಂಬ ವಿಷಯ ಕುರಿತು ಹಂಪಿ ಕನ್ನಡ ವಿಶ್ವವಿದ್ಯಾಲಯದ ಇತಿಹಾಸ ಪ್ರಾಧ್ಯಾಪಕ ಡಾ. ತಂಬಂಡ ವಿಜಯ್ ಪೂಣಚ್ಚ ಮಾತನಾಡಿ, ಬ್ರಿಟಿಷರು ಬರುವುದಕ್ಕಿಂತ ಮುಂಚೆಯೇ ಭಾರತ ಒಂದು ದೇಶವಾಗಿತ್ತು ಎಂದು ಗಾಂಧಿ ಪ್ರತಿಪಾದಿಸಿದ್ದರು ಎಂದರು. ಅವರ ಈ ಚಿಂತನೆಯ ಹಿಂದೆ ರಾಜಕೀಯ ಭಾರತದ ಕಲ್ಪನೆ ಇರದೆ, ಆಧ್ಯಾತ್ಮಿಕ ಹಾಗೂ ಭಾವನಾತ್ಮಕ ಭಾರತದ ಕಲ್ಪನೆ ಇತ್ತು. ಬಂಡವಾಳಗಾರರು ಇರಲಿ, ಆದರೆ ಬಂಡವಾಳಶಾಹಿ ಹೋಗಲಿ ಎಂಬ ನಿಲುವು ಗಾಂಧಿಯದ್ದಾಗಿದ್ದು, ಬಂಡವಾಳಶಾಹಿ, ಸಾಮ್ರಾಜ್ಯಶಾಹಿಗೆ ಪ್ರಬಲ ಪರ್ಯಾಯವನ್ನು ಸ್ವರಾಜ್ಯ ಕಲ್ಪನೆಯ ಮೂಲಕ ಗಾಂಧೀಜಿ ಕೊಟ್ಟಿದ್ದಾರೆ. ಅದೇ ಅವರ ಸಮಾಜವಾದವೂ ಆಗಿತ್ತು. ಆದರೆ ಅದನ್ನು ನಾವು ಗುರುತಿಸಿ ಸಮರ್ಪಕವಾಗಿ ಬಳಸಿಕೊಳ್ಳಲು ಸಾಧ್ಯವಾಗಿಲ್ಲ ಎಂದು ಪೂಣಚ್ಚ ವಿಷಾದಿಸಿದರು.

ನಾಲ್ಕನೇ ಗೋಷ್ಠಿಯಲ್ಲಿ 'ಗಾಂಧಿಯ ಪ್ರಭುತ್ವದ ಪರಿಕಲ್ಪನೆ:ಗ್ರಾಮ ಸ್ವರಾಜ್ಯ ಮತ್ತು ಆಧುನಿಕ ಪ್ರಭುತ್ವ' ಕುರಿತು ಮೈಸೂರು ವಿಶ್ವವಿದ್ಯಾಲಯದ ರಾಜಕೀಯ ಶಾಸ್ತ್ರ ಪ್ರಾಧ್ಯಾಪಕ ಡಾ.ಮುಜಾಫರ್ ಅಸ್ಸಾದಿಯವರು ಮಾತನಾಡಿ, ಭಾರತದಲ್ಲಿ ಬಹುರೂಪಿ ಗಾಂಧಿಯನ್ನು ಕಾಣಬಹುದು ಎಂದರು. ಭಾರತದ ಹಲವು ಪ್ರಮುಖ ಸಂವಾದ ಮತ್ತು ಸಂಕಥನಗಳ ಸಂಕೇತವಾಗಿ ಗಾಂಧಿಯನ್ನು ಬಳಸಲಾಗುತ್ತಿದೆ. ಸರ್ಕಾರಿ ಗಾಂಧಿ ಇರುವಂತೆ ಪ್ರಭುತ್ವಕ್ಕೆ ಅಪ್ರಿಯವಾದ ಸತ್ಯಾಗ್ರಹದ ಗಾಂಧಿಯೂ ಇದ್ದಾರೆ. ಆಧುನಿಕತೆಯ ಭಾಗವಾಗಿಯೂ ಗಾಂಧಿ ಬರುತ್ತಾರೆ. ಆದರೆ ಆಧುನಿಕತೆಯ ಸಂದರ್ಭದಲ್ಲಿ ಗಾಂಧಿಯನ್ನು ಬೇಕಾದಾಗ ಮಾತ್ರ ಬಳಸಿಕೊಳ್ಳುವ ವಿದ್ಯಮಾನ ದೊಡ್ಡ ವಿರೋಧಾಭಾಸವಾಗಿ ಕಾಣುತ್ತಿದೆ ಎಂದ ಅಸ್ಸಾದಿ ಈ ಎಲ್ಲ ಗಾಂಧಿಗಳ ಕೇಂದ್ರ 'ಹಿಂದ್ ಸ್ವರಾಜ್'ನಲ್ಲಿದ್ದು, 'ಗ್ರಾಮ ಸ್ವರಾಜ್ಯ'ದ ಈ ಗಾಂಧಿಯನ್ನು ನಾವಿಂದು ಪ್ರಸ್ತುತಗೊಳಿಸಕೊಳ್ಳಬೇಕಿದೆ ಎಂದು ಸೂಚಿಸಿದರು.

ಐದನೇ ಗೋಷ್ಠಿಯಲ್ಲಿ 'ಗಾಂಧಿ ಅರ್ಥಶಾಸ್ತ್ರ ಮತ್ತು ತಂತ್ರಜ್ಞಾನದ ಪ್ರಸ್ತುತತೆ' ಕುರಿತು ಬೆಂಗಳೂರಿನ ದಯಾನಂದ ಸಾಗರ್ ವ್ಯವಸ್ಥಾಪನಾ ಶಾಸ್ತ್ರ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ. ಎಚ್.ಎ. ಶಂಕರನಾರಾಯಣ ಮಾತನಾಡಿ, ವಿ–ಘಟಿತ ಜ್ಞಾನವಾದ ವಿಜ್ಞಾನವನ್ನು ಜ್ಞಾನ ಎಂದು ನಂಬಿರುವ ಆಧುನಿಕ ಸಮಾಜಕ್ಕೆ ಗಾಂಧೀಜಿ ಭಾರತೀಯ ಜ್ಞಾನ ಪರಂಪರೆಯ ಭಾಗವಾಗಿ ಕಂಡುಕೊಂಡ ಬದುಕಿನ ಕ್ರಮ ಮತ್ತು ಸಾರ್ಥಕತೆಯನ್ನು ಕುರಿತ ವಿಚಾರಗಳು ಅಪ್ರಸ್ತುತವಾಗಿ ಕಂಡಿರುವುದರಲ್ಲಿ ಆಶ್ಚರ್ಯವೇನಿಲ್ಲ ಎಂದರು. ಗಾಂಧಿಯ ಈ ವಿಚಾರಗಳನ್ನು ಅರ್ಥಶಾಸ್ತ್ರ ಮತ್ತು ತಂತ್ರಜ್ಞಾನ ಎಂದು ವರ್ಗೀಕರಿಸಿ ನೋಡುವ ಕ್ರಮವೇ ಗಾಂಧೀಜಿಯನ್ನು ಅಪ್ರಸ್ತುತಗೊಳಿಸುವ ರೀತಿಯಾಗಿದ್ದು, ಅವರನ್ನು ಅವರ ಜ್ಞಾನ ಪರಂಪರೆಯ ನೆಲೆಯಲ್ಲಿ ಅರ್ಥ ಮಾಡಿಕೊಳ್ಳುವ ಮೂಲಕ ಮಾತ್ರ ಅವರ ವಿಚಾರಗಳನ್ನು ಅವುಗಳ ಸಮಗ್ರತೆಯಲ್ಲಿ ಪ್ರಸ್ತುತಗೊಳಿಸಕೊಳ್ಳಬಹುದು ಎಂದರು

ಆರನೇ ಗೋಷ್ಠಿಯಲ್ಲಿ 'ಗಾಂಧಿ: ಒಂದು ಸೃಜನಾತ್ಮಕ ಪ್ರತಿಕ್ರಿಯೆ' ಶೀರ್ಷಿಕೆಯಲ್ಲಿ ಕವಯತ್ರಿ ಸವಿತಾ ನಾಗಭೂಷಣ ಅವರು ಮಾತನಾಡಿ, ಗಾಂಧಿ ಪ್ರಕೃತಿ ಸಹಜ ಮನುಷ್ಯರಾಗಿದ್ದು, ಅವರು ನಂಬಿದ್ದ ಸತ್ಯ, ಅಹಿಂಸೆ, ಅಪರಿಗ್ರಹ ಮುಂತಾದವೆಲ್ಲ ಆ ನೆಲೆಯಲ್ಲಿಯೇ ಹುಟ್ಟಿದವಾಗಿದ್ದು; ನಾವೀಗ ಪ್ರಕೃತಿಯಿಂದ ದೂರವಾಗುವಂತಹ ಬದುಕಿನ ಶೈಲಿಗೆ ಬಲಿಯಾಗಿರುವುದರಿಂದಲೇ ಅವರಿಂದು ನಮಗೆ ಅಪ್ರಸ್ತುತ ಮತ್ತು ಅವ್ಯವಹಾರಿಕರಂತೆ ಕಾಣುತ್ತಿದ್ದಾರೆ;ಆದರೆ ನಮ್ಮ ಇಂದಿನ ಬದುಕು ಹಿಡಿದಿರುವ ಅಪಾಯದ ಹಾದಿಯನ್ನು ನಾವು ಮನಗಾಣುವಂತಾದರೆ ಗಾಂಧಿ ಪ್ರಸ್ತುತ ಎನ್ನಿಸುವುದು ಖಂಡಿತ ಎಂದು ಹಲವು ದೃಷ್ಟಾಂತಗಳ ಮೂಲಕ ವಿವರಿಸಿದರು.

ಶಿಬಿರದಲ್ಲಿ ರಿಚರ್ಡ್ ಅಟೆನ್‌ಬರೋ ನಿರ್ದೇಶನದ 'ಗಾಂಧಿ' ಚಲನಚಿತ್ರ ಪ್ರದರ್ಶಿಸಲಾಯಿತು. ಈ ಚಿತ್ರದ ಕುರಿತು ಶಿಬಿರಾರ್ಥಿಗಳು ವಿಸ್ತೃತ ಚರ್ಚೆ ನಡೆಸಿದರು. ಕರ್ನಾಟಕದ ವಿವಿಧ ಭಾಗಗಳಿಂದ ಬಂದ ಸುಮಾರು ಐವತ್ತು ಜನ ಶಿಬಿರಾರ್ಥಿಗಳು ಶಿಬಿರದಲ್ಲಿ ಪಾಲ್ಗೊಂಡಿದ್ದರು.

**(ವರದಿ: ಎಂ. ರಾಘವೇಂದ್ರ)**

# ಪರಮಾಧಿಕಾರ ಜನರದ್ದು, ಸಂಸತ್ತಿನದಲ್ಲ...

*ಅರವಿಂದ ಕೇಜ್ರಿವಾಲ್

**ಭಾ**ರತದಲ್ಲಿ ದುರದೃಷ್ಟವಶಾತ್ ಸಂಸತ್ತಿನ ನಡಾವಳಿಗಳ ಮೇಲೆ ಜನತೆಯ ಯಾವುದೇ ರೀತಿಯ ಹತೋಟಿ ಇಲ್ಲವಾಗಿದೆ. ೧೯೦೮ರಲ್ಲಿ ಗಾಂಧಿಜಿ 'ಹಿಂದ್ ಸ್ವರಾಜ್'ನಲ್ಲಿ ಬ್ರಿಟಿಷ್ ಸಂಸತ್ತಿನ ಬಗ್ಗೆ ಬರೆದಿದ್ದರು:

> **"ಯಾವುದನ್ನು ಎಲ್ಲ ಸಂಸತ್ತುಗಳ ತಾಯಿ ಎಂದು ಕರೆಯಲಾಗಿದೆಯೋ ಆ ಬಿಟಿಷ್ ಸಂಸತ್ ಬಂಜೆಯೂ, ವೇಶ್ಯೆಯೂ ಆಗಿರುವಳು. ನಿಜ ಈ ಎರಡು ಶಬ್ದಗಳು ಒರಟಾದವು. ಆದರೆ ಸರಿಯಾದವು. ಸಂಸತ್ತು ಎಂದೂ ತಾನಾಗಿ ಯಾವುದೇ ಒಳ್ಳೆಯ ಕೆಲಸ ಮಾಡಿಲ್ಲ. ಹಾಗಾಗಿ ಅದನ್ನು ನಾನು ಬಂಜೆ ಎಂದಿರುವೆ. ಪದೇ ಪದೇ ಅದರ ಸದಸ್ಯರು ಬದಲಾಗುತ್ತಾ ಹೋಗುವುದರಿಂದ ಅದು ವೇಶ್ಯೆ. ಈ ಸದಸ್ಯರು ವೇಷಧಾರಿಗಳು ಮತ್ತು ಸ್ವಾರ್ಥಿಗಳು ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಪ್ರತಿಯೊಬ್ಬ ಸದಸ್ಯನೂ ತನ್ನ ಸ್ವಾರ್ಥಾಸಕ್ತಿಯಿಂದಲೇ ಕೆಲಸ ಮಾಡುತ್ತಾನೆ. ಅಭದ್ರತೆಯೇ ಅವನ ಮುಂದಿನ ನಡಾವಳಿಯನ್ನು ನಿರ್ಧರಿಸುತ್ತದೆ. ಸಂಸತ್ತಿನಲ್ಲಿ ಮಹತ್ವದ ವಿಷಯಗಳ ಬಗ್ಗೆ ಚರ್ಚೆ ನಡೆಯುತ್ತಿರುವಾಗ ಇವರಲ್ಲಿ ಬಹಳ ಜನ ಮೈಮುರಿಯುತ್ತಲೋ ತೂಕಡಿಸುತ್ತಲೋ ಇರುತ್ತಾರೆ. ಕೆಲವೊಮ್ಮೆ ಇವರು ಕೇಳುವವರು ಕಂಗಾಲಾಗುವಷ್ಟು ಮಾತನಾಡುತ್ತಾ ಹೋಗುವುದೂ ಉಂಟು. ಹಾಗಾಗಿಯೇ ಕ್ಯಾರಲೆ ಸಂಸತ್ತನ್ನು ಮಾತಿನ ಅಂಗಡಿ ಎಂದು ಕರೆದಿರುವುದು.**
>
> **ಸದಸ್ಯರು ಸಂಸತ್ತಿನಲ್ಲಿ ನಿರ್ಯೋಚನೆಯಿಂದ ತಮ್ಮ ಪಕ್ಷದ ನಿಲುವಿನ ಪರ ಮತ ಹಾಕುತ್ತಾರೆ. ಪಕ್ಷದ ಶಿಸ್ತಿನ ಹೆಸರಲ್ಲಿ ಇದನ್ನು ಅವರ ಮೇಲೆ ಹೇರಲಾಗಿದೆ. ಯಾವುದೇ ಸದಸ್ಯ ಸ್ವತಂತ್ರವಾಗಿ ಯೋಚಿಸಿ ಪಕ್ಷದ ಆದೇಶದ ವಿರುದ್ಧ ಮತ ಹಾಕಿದರೆ ಅವನು ಪಕ್ಷದ್ರೋಹಿ, ಜನದ್ರೋಹಿಯಾಗಿಬಿಡುತ್ತಾನೆ. 'ಸಂಸತ್ ರಾಷ್ಟ್ರದ ಅತಿ ದುಬಾರಿ ಆಟಿಕೆಯಾಗಿದೆ' ಎಂಬ ವರ್ಣನೆ ನನಗೆ ವಿಶೇಷವಾಗೇನೂ ಕಂಡಿಲ್ಲ, ಇಂಗ್ಲೆಂಡಿನ ಅನೇಕ ಚಿಂತಕರು ಇದನ್ನು ಹೇಳಿದ್ದಾರೆ."**

ಬ್ರಿಟಿಷ್ ಸಂಸತ್ತಿನ ಬಗ್ಗೆ ಗಾಂಧೀಜಿಯ ಈ ಅಭಿಪ್ರಾಯಗಳು ಇಂದು ಭಾರತದ ಸಂಸತ್ತಿಗೆ ಎಷ್ಟರ ಮಟ್ಟಿಗೆ ಅನ್ವಯವಾಗುತ್ತದೆ ಎಂಬುದನ್ನು ಪರಿಶಿಲಿಸಿದರೆ ಒಳ್ಳೆಯದಾದೀತು. ಭಾರತವನ್ನು ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ಎಂದೆಲ್ಲ ಕರೆಯಲಾಗುತ್ತದೆ. ಇದು ಅತಿ 'ದೊಡ್ಡ' ಎಂದೆನಿಸಿರುವುದು ಇದರ ಅತಿ ವಿಶಾಲ ಜನಸಂಖ್ಯೆಯಿಂದಾಗಿ ಮಾತ್ರ. ಏಕೆಂದರೆ, ಐದು ವರ್ಷಗಳಿಗೊಮ್ಮೆ ಮತ ಚಲಾಯಿಸುವುದರ ಹೊರತಾಗಿ ಜನತೆಗೆ ಆಡಳಿತದ ಬಗ್ಗೆ ಏನಾದರೂ ಹೇಳಲು ಅವಕಾಶವಿದೆಯೇ ಯೋಚಿಸಿ. ಇಲ್ಲಿ ವಯಸ್ಕ ಮತದಾನ ಪದ್ಧತಿ ಇದೆಯೆಂದ ಮಾತ್ರಕ್ಕೆ ಇದು ಪ್ರಜಾಪ್ರಭುತ್ವ ಎನಿಸಿಕೊಳ್ಳಬಹುದೇ? ನಾವು ಐದು ವರ್ಷಕ್ಕೊಮ್ಮೆ ಯಾರನ್ನೋ ಆರಿಸುತ್ತೇವೆ. ನಂತರ ನಮಗಾಗಲೀ, ನಮ್ಮ ಈ ಪ್ರತಿನಿಧಿಗಳಿಗಾಗಲೀ ಸಂಸತ್ತಿನಲ್ಲಿ ಯಾವುದೇ ಅಧಿಕಾರ ಇರುವುದಿಲ್ಲ. ಏಕೆಂದರೆ, ನಮ್ಮ ಪ್ರತಿನಿಧಿ ನಮ್ಮ ಬಳಿ ಎಂದೂ ಬರುವುದಿಲ್ಲ; ಹೋಗಲಿ, ಸಂಸತ್ತಿನಲ್ಲಿ ನಿರ್ಣಾಯಕ ವಿಷಯಗಳ ಮೇಲೆ ಮತ ಹಾಕುವಾಗ ನಮ್ಮೊಡನೆ ಯಾವುದೇ ಸ್ತರದಲ್ಲೂ ಚರ್ಚಿಸುವುದಿಲ್ಲ. ಒಮ್ಮೆ ಚುನಾಯಿತನದನೆಂದರೆ, ನಮ್ಮ ಪ್ರತಿನಿಧಿ ಪಕ್ಷದ ಶಿಸ್ತಿಗೆ ಒಳಪಟ್ಟು ಸಂಪೂರ್ಣ ಅದರ ಸ್ವತ್ತಾಗಿಬಿಡುತ್ತಾನೆ. ಪಕ್ಷಗಳು ತಮ್ಮ ಘೋಷಿತ ಮೂಲತತ್ವಗಳಿಗೆ ಮತ್ತು ಚುನಾವಣೆಗಳ ಮುನ್ನ ಪ್ರಕಟಿಸಿದ್ದ ಪ್ರಣಾಳಿಕೆಗಳನ್ನು ಸುಲಭವಾಗಿ ಗಾಳಿಗೆ ತೂರಬಲ್ಲಷ್ಟು ನಿರ್ಲಜ್ಜವಾಗಿರುವ ಈ ದಿನಗಳಲ್ಲಿ ಇದು ಎಷ್ಟು ಘಾತುಕವಾಗಬಲ್ಲದೆಂದು ನೀವೇ ಯೋಚಿಸಿ.

ಹೀಗಾಗಿ ಲೋಕಸಭಾ ಸದಸ್ಯರು ತಂತಮ್ಮ ಪಕ್ಷಗಳ ಜೀತದಾಳುಗಳ ಮಟ್ಟಕ್ಕೆ ಇಳಿದಿದ್ದಾರೆ. ಪಕ್ಷದ ನಿರ್ಣಯದ ವಿರುದ್ಧ ನಿಂತವರು ಪಕ್ಷದ ಸದಸ್ಯತ್ವ ಮತ್ತು ಆಮೂಲಕ ಸಂಸತ್ತಿನ ಸದಸ್ಯತ್ವ ಕಳೆದುಕೊಳ್ಳಬೇಕಾಗುತ್ತದೆ. ಉದಾಹರಣಗೆ, ಪ್ರಸ್ತುತ ಲೋಕಸಭೆಯ ೨೦೬ ಜನ ಕಾಂಗ್ರೆಸ್ ಸದಸ್ಯರಲ್ಲಿ ಯಾರೂ ಸ್ವತಂತ್ರವಾಗಿ ಯೋಚಿಸುವ ಸ್ಥಿತಿಯಲ್ಲಿ ಇಲ್ಲ. ಅವರು ಏನಿದ್ದರೂ ತಮ್ಮ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿಯವರು ಮಾಡಿದ ತೀರ್ಮಾನಕ್ಕೆ ಬದ್ಧವಾಗಿರಬೇಕಾಗುತ್ತದೆ. ಇದೇ ಸ್ಥಿತಿ ಬಿಜೆಪಿಯ ೧೧೪ ಜನ ಸದಸ್ಯರದ್ದು. ಮಾಜಿ ಲೋಕಸಭಾ ಸದಸ್ಯ ಇಲಿಂಯಾಸ್ ಆಜ್ಮಿ ಹೇಳುವಂತೆ, ಇಂದಿನ



ಲೋಕಸಭೆ ಚದುರಂಗದ ಹಾಸಿನಂತಿದೆ. ಅದರ ಮೇಲೆ ಕೆಲವು ರಾಜಕೀಯ ಪಕ್ಷಗಳ ನಾಯಕರ ಹತೋಟಿಯಲ್ಲಿರುವ ಕಾಯಿಗಳ ಆಟ ನಡೆದಿದೆ.

ಪರಿಸ್ಥಿತಿ ಇಂತಿರುವಾಗ ರಾಷ್ಟ್ರ ಎರಡು ಚುನಾವಣೆಗಳ ನಡುವೆ ಒಳಗಾಗುವುದು, ಆಡಳಿತ ಪಕ್ಷದ ನಾಯಕರ ಸರ್ವಾಧಿಕಾರಕ್ಕೇ ಅಲ್ಲವೆ? ಈ ಕೆಲವೇ ಪುರುಷರು ಮತ್ತು ಮಹಿಳೆಯರು ಐದು ವರ್ಷಗಳ ಕಾಲ ಸಂಸತ್ತನ್ನೂ, ಕಾರ್ಯಾಂಗವನ್ನೂ ಆಳುವ ಈ ರೀತಿಯಲ್ಲಿ ಯಾರ ಮತ್ತು ಯಾವ ಬದ್ಧತೆ ಅವರನ್ನು ಹಣದ ಮತ್ತು ಇತರೆ ರೀತಿಯ ಪ್ರಭಾವಗಳಿಂದ ಮುಕ್ತವಾಗಿಟ್ಟೀತು? ಇದೊಂದು ಭೀಕರವೆನ್ನಿಸುವ ಪರಿಸ್ಥಿತಿ. ಐದು ವರ್ಷಗಳಿಗೊಮ್ಮೆ ಚುನಾವಣೆಯ ನಾಟಕ ನಡೆಯುತ್ತದೆ. ಆ ಮೂಲಕ ದೇಶವನ್ನು ಸಗಟಾಗಿ ತಟ್ಟೆಯಲ್ಲಿಟ್ಟು ಕೆಲವರ ವಶಕ್ಕೆ ಒಪ್ಪಿಸಿಬಿಡಲಾಗುತ್ತದೆ. ಎಲ್ಲ ಪಕ್ಷಗಳ ನಾಯಕರ ನಡುವೆ ಒಂದು ಅಲಿಖಿತ ಒಪ್ಪಂದವಿರುತ್ತದೆ. ಅವರು ಹೆಸರಿಗೆ ಮಾತ್ರ, ಜನರ ತೋರಿಕೆಗಾಗಿ ಮಾತ್ರ ಭಿನ್ನ ಭಿನ್ನ ಪಕ್ಷಗಳವರು. ತೆರೆಯ ಹಿಂದೆ ಒಂದೇ ಸಾಮಾನ್ಯ ಹಿತಾಸಕ್ತಿ ಕಾಯಲು ಒಂದುಗೂಡುವವರು. ಬಹಿರಂಗವಾಗಿ ಪರಸ್ಪರ ದೂಷಣೆಗೆ ಇಳಿಯುವರಾದರೂ, ಅಧಿಕಾರಕ್ಕೆ ಬಂದಾಗ ತಾವೇ ಅಪರಾಧಿಗಳೆಂದು ಹೇಳಿದ ಎದುರು ಪಕ್ಷದ ನಾಯಕರನ್ನು ಶಿಕ್ಷಿಸಲು ಮುಂದಾಗಲಾರರು. ಹಾಗಾಗಿಯೇ ಬಹುಕಾಲ ಧೂಳೆಬ್ಬಿಸಿದ್ದ ಬೋಫೋರ್ಸ್ ಹಗರಣ ಈವರೆಗೆ ಒಂದು ತಾರ್ಕಿಕ ಅಂತ್ಯ ಕಾಣಲಾಗದೇ ಹೋಗಿದೆ. ಮಿಕ್ಕವೂ ಅದೇ ದಾರಿ ಹಿಡಿಯಬಲ್ಲವು. ಆಡಳಿತ ಪಕ್ಷ, ವಿರೋಧ ಪಕ್ಷಗಳ ನಾಯಕರ ಸಂಬಂಧಿಗಳಿಗೆ ದೊಡ್ಡ ದೊಡ್ಡ ಗುತ್ತಿಗೆಗಳನ್ನು ಕೊಟ್ಟು ಅವರನ್ನು ಆಂತರಿಕವಾಗಿ ಖುಷಿಯಲ್ಲೇ ಇಟ್ಟಿರುತ್ತದೆ. ನಮ್ಮ ಸಂಸದೀಯ ಪ್ರಜಾಪ್ರಭುತ್ವದ ಇಂದಿನ ಈ ಮಾದರಿ, ದೇಶವನ್ನು ಲೂಟಿ ಮಾಡಲು ಸ್ವಿಚ್ಒತ್ತಿದರೆ ಸಾಕು ಚಾಲನೆಗೊಳ್ಳುವ ಯಂತ್ರದಂತಿದೆ. ಸಾರ್ವಜನಕ ಹಿತಾಸಕ್ತಿ ಎನ್ನುವುದು ಕೇವಲ ನೆಪ. ಅದು ಸ್ಪಂದಿಸುವುದು ತನ್ನ ಸದಸ್ಯರ ದುಃಖ–ದುಮ್ಮಾನಗಳಿಗೆ ಮಾತ್ರ.

ಒಕ್ಕಲು ಮಂತ್ರಿ ಶರದ್ ಪವಾರ್‌ಗೆ ಯಾರೋ ಕಪಾಳಕ್ಕೆ ಹೊಡೆದಾಗ ಈ ಸಂಸತ್ತು ಎರಡು ಅಮೂಲ್ಯ ತಾಸುಗಳ ಕಾಲ ಅದನ್ನು ಚರ್ಚಿಸಿ ಶೋಕಿಸಿತು. ಆದರೆ ರೈತರು ಆತ್ಮಹತ್ಯೆ ಮಾಡಿಕೊಂಡಾಗ, ಪೋಲೀಸರ ಗೋಲಿಬಾರ್‌ನಲ್ಲಿ ಸತ್ತಾಗ, ಐ.ಪಿ.ಎಸ್. ಅಧಿಕಾರಿ ನರೇಂದ್ರ ಕುಮಾರ್ ಕೊಲೆಗೀಡಾದಾಗ ಈ ಸಂಸತ್ತು ಈ ಬಗ್ಗೆ ಒಂದು ನಿಮಿಷ ಚರ್ಚಿಸಲಿಲ್ಲ. ಲೋಕಪಾಲ್ ಮಸೂದೆಯನ್ನು ಇವರು ೪೨ ವರ್ಷಗಳ ಕಾಲ ಚರ್ಚಿಸುತ್ತಲೇ ಬಂದಿದ್ದಾರೆ! ಆದರೆ ಅದನ್ನೊಂದು ಕಾನೂನು ಮಾಡಲು ಮಾತ್ರ ಅನೇಕ ಅಡೆ ತಡೆಗಳು. ತಮ್ಮ ಸಂಬಳ–ಸಾರಿಗೆಗಳನ್ನು ಮಾತ್ರ ಕೆಲವೇ ನಿಮಿಷಗಳಲ್ಲಿ ಹೆಚ್ಚಿಸಿಕೊಂಡುಬಿಡುತ್ತಾರೆ! ಇನ್ನು ಸಂಸತ್ತಿನ ಎರಡೂ ಸಭೆಗಳ ಶೀಲ ಸ್ವರೂಪ ನೋಡಿ. ಇಂದಿನ ಲೋಕಸಭೆಯಲ್ಲಿ ೧೬೨ ಜನ ಮತ್ತು ರಾಜ್ಯ ಸಭೆಯಲ್ಲಿ ೪೦ಕ್ಕೂ ಹೆಚ್ಚು ಜನ ಕ್ರಿಮಿನಲ್ ಮೊದ್ದಮೆಗಳನ್ನು ಎದುರಿಸುತ್ತಿರುವವರು. ಇನ್ನುಳಿದವರಲ್ಲಿ ಹಲವರು ಭಾರಿ ಭ್ರಷ್ಟಾಚಾರದ ಮೊಕದ್ದಮೆಗಳನ್ನು ಎದುರಿಸುತ್ತಿರುವವರು. ಇಂತಹ

ಸಂಸ್ಥೆಯಿಂದ ನ್ಯಾಯದಾನ ಪದ್ಧತಿಯನ್ನು ದಕ್ಷಗೊಳಿಸುವ ವಿಧೇಯಕ ಅನುಮೋದಿತವಾಗುವುದೆಂದು ನಿರೀಕ್ಷಿಸಲಾದರೂ ಹೇಗೆ ಸಾಧ್ಯ?

ಈ ಮೂಲಭೂತ ಪ್ರಶ್ನೆಗಳನ್ನು ಎತ್ತಿದಾಗಲೆಲ್ಲ ಸಂಸತ್ತಿನ ಪರಮಾಧಿಕರವನ್ನು ಪ್ರಶ್ನಿಸಿ ಪ್ರಜಾಪ್ರಭುತ್ವ ಪದ್ಧತಿಯನ್ನೇ ಪ್ರಶ್ನಿಸಲಾಗುತ್ತಿದೆ ಎಂದು ಜನರಲ್ಲಿ ಭೀತಿ ಹುಟ್ಟಿಸಲಾಗುತ್ತಿದೆ. ಪ್ರಜಾಪ್ರಭುತ್ವದ ಸದರಿ ಮಾದರಿಗಿಂತ ಹೆಚ್ಚು ಜನ ಸಮೀಪವಾದ ಬೇರೆ ಮಾದರಿಗಳೂ ಇವೆಯಲ್ಲವೇ? ಇವೊತ್ತಿನ ಅತಿ ದೊಡ್ಡ ಸಮಸ್ಯೆಯೆಂದರೆ, ಸಂಸತ್ತು ಜನತೆಯಿಂದ ಸಂಪೂರ್ಣ ಬೇರ್ಪಟ್ಟಿರುವುದು. ಸಂಸತ್ತಿನ ನಡಾವಳಿಗಳಲ್ಲಿ, ಜನತೆಯು–ಅದು ನಿರ್ಣಾಯಕ ತಪ್ಪು ಮಾಡಿದಾಗಲಾದರೂ ನೇರ ಪ್ರವೇಶಕ್ಕೆ ಅವಕಾಶವಿರುವ ವ್ಯವಸ್ಥೆ ಇಲ್ಲವಾಗಿದೆ.

ಜನತೆ ಪರಮೋಚ್ಚವೇ ಹೊರತು ಸಂಸತ್ತಲ್ಲ. ಆದರೆ ದುರದೃಷ್ಟಕರ ಸಂಗತಿಯೆಂದರೆ, ಸಂಸತ್ತಿನ ನಡಾವಳಿಯ ಮೇಲೆ ಜನತೆಗೆ ನಿಯಂತ್ರಣವಿಲ್ಲ. ಹಲವು ದೇಶಗಳಲ್ಲಿ ಜನಾಭಿಪ್ರಾಯ ಸಂಗ್ರಹದ ಮುಖೇನ ಸಂಸತ್ತಿನ ನಿರ್ಧಾರಗಳನ್ನು ತಿದ್ದುಪಡಿಗೊಳಪಡಿಸುವ ಅಥವಾ ರದ್ದುಗೊಳಿಸುವ ಕಾನೂನಾತ್ಮಕ ಅವಕಾಶ ಇದೆ. ಇದರಿಂದ ಬಹು ಮುಖ್ಯ ಸಂದರ್ಭಗಳಲ್ಲಾದರೂ ಸಂಸತ್ತಿನ ನಡಾವಳಿಯಲ್ಲಿ ಜನತೆಯ ನೇರ ಪ್ರವೇಶಕ್ಕೆ ಅವಕಾಶವಿದೆ. ಇದರ ಪರಿಣಾಮವಾಗಿ ಸಂಸತ್ತು ಸದಾ ಎಚ್ಚರಿಕೆಯಿಂದ, ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸುವ ಒತ್ತಡದಲ್ಲಿರುತ್ತದೆ. ಇದರ ಒಂದು ಪ್ರಯೋಗವಾಗಿ ಪ್ರತಿ ಶಾಸಕನೂ ತಾನು ಯಾವುದೇ ನಿರ್ಣಯಕ್ಕೆ ಮತ ಹಾಕುವ ಮುನ್ನ ಅದರ ಕರಡಿನ ಪ್ರತಿಗಳನ್ನು ತನ್ನ ಕ್ಷೇತ್ರದಲ್ಲಿ ಹಂಚಿ ಸಾರ್ವತ್ರಿಕವಾದ ಪ್ರತಿಕ್ರಿಯೆ ಏಕೆ ಪಡೆಯಬಾರದು? ನಿರ್ಣಾಯಕವೆನ್ನುಸುವ ಮಸೂದೆಗಳಿಂದಲಾದರೂ ಈ ಪ್ರಕ್ರಿಯೆಯನ್ನು ಆರಂಭಿಸಬಹುದಲ್ಲವೇ? ಪ್ರತಿ ಗ್ರಾಮ ಮತ್ತುಪಟ್ಟಣಗಳ ವಾರ್ಡುಗಳಲ್ಲಿ ಗ್ರಾಮ ಸಭೆ ಏರ್ಪಾಟಾಗುವಂತಾಗಿ ಈ ಮಸೂದೆಗಳನ್ನು ಚರ್ಚಿಸುವಂತಾಗಲಿ ಮತ್ತು ಅದರ ವರದಿಯನ್ನು ಜನಪ್ರತಿನಿಧಿಗಳಿಗೆ ತಲುಪಿಸುವ ವ್ಯವಸ್ಥೆಯಾಗಲಿ. ಹೀಗೆ ತನಗೆ ತಲುಪಿದ ಎಲ್ಲ ವರದಿಗಳ ಆಧಾರದ ಮೇಲೆ ಜನಪ್ರತಿನಿಧಿಯು ಅಭಿಪ್ರಾಯವೊಂದನ್ನು ರೂಪಿಸಿಕೊಂಡು ಅದನ್ನು ಶಾಸನ ಸಭೆಯಲ್ಲಿ ಮಂಡಿಸಲಿ ಮತ್ತು ತನ್ನ ಪಕ್ಷದ ಸಗಟು ಆದೇಶಗಳಿಂದ ಬಿಡುಗಡೆ ಹೊಂದುವಂತಾಗಲಿ. ಆಗ ಮಾತ್ರ ಪ್ರಜಾಪ್ರಭುತ್ವವೆಂಬುದು ನಿಜವೆನ್ನಸುತ್ತದೆ.

**(ಕನ್ನಡಕ್ಕೆ: ಡಿಎಸ್ಸೆನ್)**

# ಸಮಾನತೆಯ ಪರಿಕಲ್ಪನೆ: ಗಾಂಧಿ, ಅಂಬೇಡ್ಕರ್ ಹಾಗೂ ಲೋಹಿಯಾ ವಿಚಾರಗಳು

ಮೂಲ ಇಂಗ್ಲಿಷ್: **ದಿವ್ಯಾಂಶು ಪಟೇಲ್**
ಕನ್ನಡಕ್ಕೆ: **ಹಸನ್ ನಯೀಂ ಸುರಕೋಡ**

(ಕಳೆದ ಸಂಚಿಕೆಯಿಂದ ಮುಂದುವರೆದುದು)



**ಗಾ**ಂಧಿಗೆ ತದ್ವಿರುದ್ಧವಾಗಿ, ಅವರ ಸಮಕಾಲೀನರಾದ ಬಿ.ಆರ್.ಅಂಬೇಡ್ಕರ್ ಅವರ ವಿಚಾರಗಳು ಹೆಚ್ಚು ನಿಖರ ಹಾಗೂ ಪರಿಣಾಮಕಾರಿ ಯಾಗಿದ್ದವು. ಅವರು ಜಾತಿ ಭಾರತದಲ್ಲಿನ ಸಾಮಾಜಿಕ ಅಸಮಾನತೆಗೆ ಏಕೈಕ ಹಾಗೂ ಮೂಲ ಕಾರಣವೆಂದು ಪರಿಗಣಿಸಿದ್ದರು. ಅದರ ನಿರ್ಮೂಲನೆ ಮಾತ್ರ ಸಾಮಾಜಿಕ ಅಸಮಾನತೆಯನ್ನು ನಿರ್ಮೂಲನೆ ಮಾಡುವಲ್ಲಿ ಸಹಕಾರಿಯಾಗುತ್ತದೆಂದು ಅವರು ನಂಬಿದ್ದರು. ಅವರು ಸಾಮಾಜಿಕ ಹಕ್ಕುಗಳನ್ನು ರಾಜಕೀಯ ಹಕ್ಕುಗಳೊಂದಿಗೆ ತಳುಕು ಹಾಕಿದರು. ಅವರು ರಾಜಕೀಯ ಅಧಿಕಾರ ದಲಿತರ ವಿಮೋಚನೆಗೆ ಪರಿಹಾರವೆಂದು ಭಾವಿಸಿದರು. ಸಾಮಾಜಿಕ ಅಸಮಾನತೆಯ ಸಮಸ್ಯೆ ಹಾಗೂ ಅಸ್ಪೃಶ್ಯರೆಂದು ಪರಿಗಣಿಸಲ್ಪಟ್ಟವರ ಸಂಕಟವನ್ನು ಮುಂಚೂಣಿಗೆ ತರುವುದಕ್ಕಾಗಿ ಅಂಬೇಡ್ಕರ್ ತಮ್ಮನ್ನು ಹಿಂದೂ ಧರ್ಮದ ವಲಯದಿಂದ ಪ್ರತ್ಯೇಕಿಸಿಕೊಂಡರು. ಅದು ಅವರ ವಾದಕ್ಕೆ ತಾರ್ಕಿಕ ವಿವರಣೆಯನ್ನೂ, ವೈಜ್ಞಾನಿಕ ಆಧಾರವನ್ನೂ ಒದಗಿಸುವಲ್ಲಿ ಸಹಕಾರಿಯಾಯಿತು. ಏಕೆಂದರೆ,ಅಂಬೇಡ್ಕರ್ ಅಸಮಾನತೆಯನ್ನು ಹಿಂದೂ ಸಮಾಜದ ಅನಿವಾರ್ಯ ಅಂಗವೆಂದು ಪರಿಗಣಿಸಿದರು.ಜಾತಿ ಪದ್ಧತಿಯನ್ನು 'ಶ್ರಮ ವಿಭಜನೆ'ಗಿಂತ 'ಶ್ರಮಿಕರ ವಿಭಜನೆ' ಎಂದು ಬಗೆದರು.

ಅಂಬೇಡ್ಕರ್ ಸಮಾಜದಲ್ಲಿ ಅಸಮಾನತೆ ಬೆಳೆಯಲು ಜಾತಿಪದ್ಧತಿ ಕಾರಣವಾಗಿದೆ ಎಂದು ಭಾವಿಸಿದರು. ಅವರ ದೃಷ್ಟಿಯಲ್ಲಿ ಅಸ್ಪೃಶ್ಯತೆ ಜಾತಿ ಆಧಾರಿತ ವಿಭಜನೆಗಳ ಉಪ ಉತ್ಪನ್ನವಾಗಿತ್ತು. ರಾಜಕೀಯ ಅಧಿಕಾರಗಳು ಅಸ್ಪೃಶ್ಯರೆಂದು ಪರಿಗಣಿಸಲ್ಪಟ್ಟವರನ್ನು ಮೇಲೆತ್ತುವುದಕ್ಕೆ ಅತ್ಯವಶ್ಯವೆಂದು ಅವರು ವಾದಿಸಿದರು. ಪೂನಾ ಒಪ್ಪಂದವನ್ನು ರೂಪಿಸಿದ ವಿಚಾರಗಳಲ್ಲಿ ಅದು ವ್ಯಕ್ತವಾಗಿದೆ. ಸುಧಾರಣಾವಾದಿ ವಿಚಾರಗಳಿಗೆ ವಿರುದ್ಧವಾಗಿ, ಆರ್ಥಿಕ ಹಾಗೂ ರಾಜಕೀಯ ಸಂಪನ್ಮೂಲಗಳಲ್ಲಿ ಪಾಲು ಪಡೆಯಲು ದಲಿತರಿಗೆ ಸಮಾನ ಅವಕಾಶಗಳು ಹಾಗೂ ಹಕ್ಕುಗಳಿರಲೇಬೇಕು ಎನ್ನುವುದಕ್ಕೆ ಅವರು ಒತ್ತು ಕೊಟ್ಟರು.

ಭಾರತದ ಸಂದರ್ಭದಲ್ಲಿ, ಲೋಹಿಯಾರ ಪ್ರಸ್ತಾಪವಿಲ್ಲದೆ ಸಾಮಾಜಿಕ ಸಮಾನತೆಯ ಪರಿಕಲ್ಪನೆ ಕುರಿತ ಚರ್ಚೆ ಅಪೂರ್ಣವಾಗುತ್ತದೆ. ಅವರು ಆಧುನಿಕ ಭಾರತದ ದಾರ್ಶನಿಕ ಚಿಂತಕರಾಗಿದ್ದರು. ಅವರ ಇತರ ವಿಚಾರಗಳಂತೆಯೇ ಸಮಾನತೆ ಕುರಿತ ವಿಚಾರಗಳು ಬಹು ಆಯಾಮದವಾಗಿವೆ. ಜಾತಿ, ಧರ್ಮ, ಭಾಷೆ ಹಾಗೂ ಲಿಂಗದಂತಹ ಅನೇಕ ದೃಷ್ಟಿಕೋನಗಳಿಂದ ಸಮಾನತೆಯ ಪರಿಕಲ್ಪನೆಯನ್ನು ಅವರು ರೂಪಿಸಿದರು ಹಾಗೂ ವಿಶ್ಲೇಷಿಸಿದರು. ಅವರೂ ಸಹ ಜಾತಿ ಪದ್ಧತಿಯೇ ಸಾಮಾಜಿಕ ಅಸಮಾನತೆಗೆ ಮೂಲ ಕಾರಣವೆಂದು ಭಾವಿಸಿದರು. ಸಾಮಾಜಿಕ ಬದಲಾವಣೆ ತರುವುದಕ್ಕಾಗಿ ಅವರು ಸಪ್ತ ಕ್ರಾಂತಿಯ ಪರಿಕಲ್ಪನೆ ಮಂಡಿಸಿದರು.[೩] ಆ ಪೈಕಿ ಮೂರನೆಯ ಕ್ರಾಂತಿ ಸಂಸ್ಕಾರ ಆಧಾರಿತ ಜಾತಿ ಪದ್ಧತಿಯ ನಿರ್ಮೂಲನೆ ಹಾಗೂ ಅಂಚಿಗೆ ದೂಡಲ್ಪಟ್ಟವರಿಗೆ ವಿಶೇಷ ಅವಕಾಶಗಳನ್ನು ನೀಡುವುದರ ಕಡೆ ತನ್ನ ಗಮನವನ್ನು ಕೇಂದ್ರೀಕರಿಸುತ್ತದೆ. ಲೋಹಿಯಾ ಭಾಷೆ ಹಾಗೂ ಪ್ರಾದೇಶಿಕತೆ ಆಧಾರಿತ ತಾರತಮ್ಯಗಳನ್ನು ಸಹ ವಿರೋಧಿಸಿದರು ಹಾಗೂ ಸಮಾನತೆ ಸಾಧಿಸುವುದಕ್ಕಾಗಿ ಇವುಗಳನ್ನು ಸಹ ನಿರ್ಮೂಲನೆ 'ಮಾಡುವುದನ್ನು ಒತ್ತಿ ಹೇಳಿದರು.

ಭಾಷೆಯ ಆಧಾರದಲ್ಲಿ ವಿಭಜನೆಯ ವಿಷಯವನ್ನು ಪ್ರಸ್ತಾಪಿಸುತ್ತಾ ಅವರು ಅಸಮಾನತೆಯನ್ನು ಹುಟ್ಟುಹಾಕಲು ಇಂಗ್ಲಿಷ್ ಭಾಷೆಯೂ ಕಾರಣ; ಈ ರೀತಿ ಅದು ಸಮಾನತೆಯನ್ನು ತರುವ ವಿಚಾರಕ್ಕೆ ಅಡ್ಡಿಯಾಗುತ್ತದೆ ಎಂದು ಅವರು ಭಾವಿಸಿದರು. ಲೋಹಿಯಾ ಸಮಾಜದ ಎಲ್ಲ ಸ್ತರದಲ್ಲೂ ಸಮಾನತೆ ಇರಬೇಕೆಂದು ಬಯಸಿದ್ದರು. ಸಮಾಜದಲ್ಲಿ ಮಹಿಳೆಯರಿಗೆ ಸಮಾನ ಸ್ಥಾನಮಾನ ಒದಗಿಸುವುದಕ್ಕೆ ಅವರು ವಿಶೇಷ ಗಮನ ಹರಿಸಿದರು.

ಲೋಹಿಯಾ ಅವರು ಸಾಮಾಜಿಕ ಸಮಾನತೆ ತರುವುದಕ್ಕೆ ಆದಾಯ ಕೂಡ ಒಂದು ಮಹತ್ವಪೂರ್ಣ ಅಂಶವೆಂದು ಪರಿಗಣಿಸಿದರು. ಸರಾಸರಿ ಆದಾಯವನ್ನು ನಿರ್ಧರಿಸುವ ವಿಚಾರಕ್ಕೆ ಅವರು ಒತ್ತು ಕೊಟ್ಟರು. ೧೯೬೪ರಲ್ಲಿ ಬರೆದಿದ್ದ ಒಂದು ಲೇಖನದಲ್ಲಿ ಅವರು ಕನಿಷ್ಠ ಕೂಲಿಯನ್ನು ಒಂದು ಮೂಲಭೂತ ಪ್ರಶ್ನೆಯನ್ನಾಗಿ ಪ್ರಸ್ತುಪಡಿಸಿದ್ದರು. ಅವರು



ಸಮಾನತೆಯ ಪರಿಕಲ್ಪನೆಯ ವಾಸ್ತವಿಕ ಹಾಗೂ ಕಾರ್ಯ ಸಾಧು ವಿವರಣೆ ನೀಡಿದರು. ಅದಕ್ಕೊಂದು ತಾರ್ಕಿಕ ವಿಶ್ಲೇಷಣೆಯನ್ನೂ ಅವರು ಒದಗಿಸಿದ್ದರು

**೨. ಸಮಾನತೆ ಮತ್ತು ಶಿಕ್ಷಣ**

ಭಾರತದಲ್ಲಿ, ಸಾಮಾಜಿಕ ಸಮಾನತೆ ತರುವುದಕ್ಕಾಗಿ ಶಿಕ್ಷಣವನ್ನು ಒಂದು ಮಾರ್ಗ ಅಥವಾ ಸಾಧನವಾಗಿ ಬಳಸುವುದಕ್ಕೆ ಜ್ಯೋತಿಬಾ ಫುಲೆ, ರಮಾಬಾಯಿ, ಪೆರಿಯಾರ್ ಮುಂತಾದ ಹಲವಾರು ಸಿದ್ಧಾಂತಿಗಳು ಒತ್ತು ಕೊಟ್ಟಿದ್ದರು. ಈ ನಿಟ್ಟಿನಲ್ಲಿ ಮಾಡಲಾದ ಕಾರ್ಯ ಹಾಗೂ ಪ್ರಯತ್ನಗಳು ಅನನ್ಯವಾಗಿವೆ. ಆದಾಗ್ಯೂ ಈ ಗುರಿಯನ್ನು ಸಾಧಿಸುವುದಕ್ಕಾಗಿ ನಿಖರವಾದ ಹಾಗೂ ಸಮಗ್ರವಾದ ಪಠ್ಯಕ್ರಮದ ಕನಸು ಕಂಡು ಅದನ್ನು ಸಿದ್ಧಪಡಿಸಿದ್ದು ಗಾಂಧಿಯೇ.

ಭಾರತದಲ್ಲಿ ಜಾತಿ ಆಧಾರಿತ ತಾರತಮ್ಯಗಳನ್ನು ಕರಗಿಸುವ ಗಾಂಧಿಯ ಪ್ರಯತ್ನಗಳಲ್ಲಿ 'ಮೂಲ ಶಿಕ್ಷಣ'ದ ಪ್ರಸ್ತಾವನೆಯೂ ಸೇರಿದೆ. ೧೯೩೭ರಲ್ಲಿ ವರ್ಧಾದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಅವರಿಂದ ಈ ಪ್ರಸ್ತಾವನೆ ಮಂಡಿಸಲ್ಪಟ್ಟಿತ್ತು. ಈ ವಿಚಾರದ ಮೂಲಕ ಗಾಂಧಿ, ಚರ್ಮದ ಬಳಕೆ ಅಥವಾ ಭೂಮಿಯಲ್ಲಿ ಕೆಲಸ ಮಾಡುವಂತಹ ವಿಶಿಷ್ಟ ವೃತ್ತಿಗಳನ್ನು ಕೆಳ ಜಾತಿಗಳು ಹಾಗೂ ಅಸ್ಪೃಶ್ಯರಿಗೇ ಮೀಸಲಿರಿಸುವ ಮಾನಸಿಕ ಪ್ರವೃತ್ತಿಯನ್ನು ನಿರ್ಮೂಲನೆ ಮಾಡ ಬಯಸಿದ್ದರು. ಕರಕುಶಲ ವೃತ್ತಿಗಳನ್ನು ಕುರಿತ ಜ್ಞಾನ ಒದಗಿಸುವ ಮೂಲಕ 'ಮೂಲ ಶಿಕ್ಷಣ'ವು ಒಂದು ವಿಶಿಷ್ಟ ಜ್ಞಾನದ ಸಾಮಾಜಿಕ ಆಧಾರಗಳನ್ನು ಪುನಾರಚಿಸಿ ಸಾರ್ವತ್ರಿಕ ಜ್ಞಾನವನ್ನಾಗಿ ಪರಿವರ್ತಿಸುವ ಉದ್ದೇಶವನ್ನು ಈಡೇರಿಸಲೆತ್ನಿಸಿತ್ತು. ತಮ್ಮ 'ಹಿಂದ್ ಸ್ವರಾಜ್' ಪುಸ್ತಕದಲ್ಲಿ ಗಾಂಧಿ ಅಕ್ಷರ ಜ್ಞಾನವನ್ನು ರಚನಾತ್ಮಕ ಹಾಗೂ ವಿಧ್ವಂಸಕ ಉದ್ದೇಶಗಳೆರಡಕ್ಕೂ ಬಳಸಬಹುದಾದ ಸಾಧನವೆಂದು ಪರಿಗಣಿಸಿದರು. ಸಮಾನತೆ ತರುವುದಕ್ಕಾಗಿ ಅವರು 'ಹಿಂದುಸ್ತಾನಿ' ಭಾಷೆಯನ್ನು ಶಿಕ್ಷಣ ಮಾಧ್ಯಮ ಹಾಗೂ ಸರ್ಕಾರಿ ಕೆಲಸ ಕಾರ್ಯಗಳ ಬಳಸುವುದನ್ನು ಅವರು ಬೆಂಬಲಿಸಿದರು.

ಇದಕ್ಕೆ ವಿರುದ್ಧವಾಗಿ, ಅಂಬೇಡ್ಕರ್ ಅಸ್ಪೃಶ್ಯರ ಅಭಿವೃದ್ಧಿಗೆ ಇಂಗ್ಲಿಷ್ ಭಾಷೆ ಒಂದು ಸಾಧನವಾಗಬಲ್ಲದೆಂದು ಭಾವಿಸಿದರು. ಅವರು ಪಕ್ಕಾ ಪಾಶ್ಚಾತ್ಯವಾಗಿದ್ದ ಉಡುಪನ್ನು ಸಹ ಅಂಗೀಕರಿಸಿದ್ದರು. ಅನಂತರ ಈ ಪ್ರತಿಮೆ ದಲಿತ ಪ್ರಜ್ಞೆಯ ಪ್ರಾತಿನಿಧಿಕ ಸಂಕೇತವಾಗಿ ಬಿಟ್ಟಿತು. ಎಲ್ನರ್ ಜೇಲಿಯಟ್ ಅವರ ಪ್ರಕಾರ, 'ಈ ಪ್ರತಿಮೆಗಳು ಸಾಮಾನ್ಯವಾಗಿ ಶಿಕ್ಷಣ ನೀಡಿಕೆಯ ಅಥವಾ ಸಾಹಸದ ಮತು ಸಮಾನತೆಯ ಘೋಷಣೆಯನ್ನು ತಮ್ಮ ಎತ್ತಿದ ಕೈಗಳ ಮೂಲಕ ವ್ಯಕ್ತಪಡಿಸುತ್ತವೆ.'

ಲೋಹಿಯಾ ತಮ್ಮ ಉನ್ನತ ಶಿಕ್ಷಣವನ್ನು ಇಂಗ್ಲಿಷಿನಲ್ಲಿ ಪಡೆದರಾದರೂ ಗಾಂಧಿಯಂತೆಯೇ ಹಿಂದುಸ್ತಾನಿ ಭಾಷೆಯ ಬಳಕೆಗೆ ಆದ್ಯತೆ ನೀಡಿದರು. ಇಂಗ್ಲಿಷ್ ಭಾಷೆಯನ್ನು ಪಾಳೆಗಾರಿ ಭಾಷೆ ಎಂದು ಪರಿಗಣಿಸುವುದಕ್ಕೆ ಬದಲಾಗಿ ಅವರು ಭಾರತದ ಸಂದರ್ಭದಲ್ಲಿ ಇಂಗ್ಲಿಷ್ ಬಳಕೆ ಪಾಳೆಗಾರಿ ಮಾನಸಿಕತೆಗೆ ಗುಲಾಮರಾಗುವುದಕ್ಕೆ ಸಂಕೇತವಾಗುತ್ತದೆ;ಏಕೆಂದರೆ, ಅದು ಅಪಾರ ಸಂಖ್ಯೆಯ ಜನರನ್ನು ಜ್ಞಾನ ಸಂಪಾದನೆಯ ಸಾಧ್ಯತೆಯಿಂದ ವಂಚಿತರನ್ನಾಗಿಸುತ್ತದೆ ಎಂದು ಅವರು ವಿಶ್ಲೇಷಿಸಿದರು. ೪೦ ವರ್ಷಗಳ ಹಿಂದೆ ಬರೆದಿದ್ದ ಒಂದು ಪತ್ರದಲ್ಲಿ, ಅವರು ಜನಸಾಮಾನ್ಯರಿಗೆ ದೊರೆಯುವ ಶಿಕ್ಷಣದ ಗುಣಮಟ್ಟ ಬಹು ಮುಖ್ಯವಾದ ಸಂಗತಿಯಾಗಿದ್ದು, ಆ ಕಡೆ ಗಮನ ಹರಿಸಬೇಕಾಗಿದೆಯೆಂದು ಒತ್ತಿ ಹೇಳಿದ್ದರು.

**೩.ಸನ್ನಿವೇಶ ಮತ್ತು ಭಿನ್ನತೆಗಳು**



ಸಮಾನತೆಗೆ ಸಂಬಂಧಿಸಿದಂತೆ ಗಾಂಧಿ, ಅಂಬೇಡ್ಕರ್ ಹಾಗೂ ಲೋಹಿಯಾರ ವಿಚಾರಗಳಲ್ಲಿ ಕೆಲ ಮಟ್ಟದ ಸಾಮ್ಯತೆ ಕಂಡು ಬರುತ್ತದೆ. ಆದಾಗ್ಯೂ ಸೂಕ್ಷ್ಮ ವಿಶ್ಲೇಷಣೆಯ ಅಧ್ಯಯನವು ಅವರ ವಿಚಾರಗಳಲ್ಲಿ ಸಣ್ಣ ವ್ಯತ್ಯಾಸಗಳಿದ್ದರೂ ತುಂಬ ಮಹತ್ವಪೂರ್ಣವಾಗಿರುವುದನ್ನು ತೋರಿಸಿಕೊಡಬಲ್ಲದು. ಈ ಮೂವರು ಚಿಂತಕರು ಬೇರೆ ಬೇರೆ ಪ್ರದೇಶಗಳಿಗೆ ಸೇರಿದವರು ಹಾಗೂ ವಿಭಿನ್ನ ಸಾಮಾಜಿಕ ಹಿನ್ನೆಲೆಯುಳ್ಳವರಾಗಿದ್ದಾರೆ. ಅವರ ಚಿಂತನೆಯ ಮೇಲೆ ಈ ಅಂಶಗಳ ಪ್ರಭಾವ ಸ್ಪಷ್ಟವಾಗಿದೆ. ಲೋಹಿಯಾ ಹಾಗೂ ಗಾಂಧಿ ಗುಜರಾತ್ ಮತ್ತು ಉತ್ತರ ಪ್ರದೇಶದ ಬನಿಯಾ ಕುಟುಂಬಗಳಿಗೆ ಸೇರಿದವರಾಗಿದ್ದರೆ, ಅಂಬೇಡ್ಕರ್ ಮಹಾರಾಷ್ಟ್ರದ ಅತ್ಯಂತ ಕೆಳ ಜಾತಿಗಳಲ್ಲೊಂದಾದ ಮಹಾರ್ ಜಾತಿಗೆ ಸೇರಿದ್ದರು. ಜಾತಿ ಆಧಾರಿತ ತಾರತಮ್ಯ ಹಾಗೂ ಅಸ್ಪೃಶ್ಯತೆಯ ವಿರುದ್ಧ ಹೋರಾಡುವುದಕ್ಕಾಗಿ ಗಾಂಧಿ ಉಪವಾಸದ ಮೂಲಕ ಸಾರ್ವಜನಿಕ ಅಭಿಪ್ರಾಯ ರೂಪಿಸಲೆತ್ನಿಸಿದರು ಹಾಗೂ ಅದನ್ನು ಆತ್ಮಶುದ್ಧಿ ಎಂದು ಹೆಸರಿಸಿದರು.

ಗಾಂಧಿ ವ್ಯವಸ್ಥೆಯ ಚೌಕಟ್ಟಿನೊಳಗಿದ್ದುಕೊಂಡೇ ಜಾತಿ ವಿಭಜಕತೆಯ ಸಮಸ್ಯೆಗೆ ಪರಿಹಾರ ಹುಡುಕಲೆತ್ನಿಸಿದರೆ, ಅಂಬೇಡ್ಕರ್ ಮತ್ತು ಲೋಹಿಯಾ ವ್ಯವಸ್ಥೆಯ ಕಟ್ಟಳೆಗಳಿಂದ ಹೊರ ಬಂದರು ಹಾಗೂ ಜಾತಿ ಆಧಾರಿತ ಸಾಮಾಜಿಕ ವ್ಯವಸ್ಥೆಯನ್ನು ಧಿಕ್ಕರಿಸುವ ಪರಿಹಾರವನ್ನು ಸೂಚಿಸಿದರು. ಗಾಂಧಿ ಜಾತಿ ಆಧಾರಿತ ಶ್ರೇಣೀಕರಣದ–ಅಂದರೆ ಹಿಂದೂ ಧರ್ಮದಲ್ಲಿನ ಸಾಮಾಜಿಕ ಸಾಮರಸ್ಯದ ಶ್ರಮದ ವಿಭಜನೆಯ– ವಿಚಾರವಾಗಿ ಉದಾರವಾಗಿದ್ದರೆ, ಲೋಹಿಯಾ ಅದನ್ನು ಬಲವಾಗಿ ವಿರೋಧಿಸಿದರು. ಇದೇ, ಗಾಂಧಿಗೆ ತದ್ವಿರುದ್ಧವಾಗಿ ಜಾತಿ ಆಧರಿತ ವಿಭಜನೆಗಳನ್ನು ನಿರ್ಮೂಲನೆ ಮಾಡುವುದಕ್ಕಾಗಿ ಕೈಗೊಳ್ಳಬೇಕಾದ ಕ್ರಮಗಳ ಕುರಿತಂತೆ ಹೆಚ್ಚು ನಿಖರ ಮತ್ತು ಹೆಚ್ಚು ಸಮಗ್ರವಾದ ಅರಿವು ಹೊಂದಲು ಲೋಹಿಯಾರಿಗೆ ಏಕೆ ಸಾಧ್ಯವಾಯಿತು ಎನ್ನುವುದಕ್ಕೆ ಮುಖ್ಯ ಕಾರಣವಾಗಿದೆ.

ಅಂಬೇಡ್ಕರ್ ಜಾತಿಪದ್ಧತಿಯ ಮೂಲಗಳ ಕುರಿತು ಮಾನವ ಶಾಸ್ತ್ರದ ಆಧಾರದಲ್ಲಿ ತಮ್ಮ ನಿಲುವುಗಳನ್ನು ರೂಪಿಸಿಕೊಂಡರು ಮತ್ತು ಅದು ಏಕೆ ಪ್ರಾಮುಖ್ಯ ಪಡೆಯಿತು ಎನ್ನುವುದಕ್ಕೆ ಕಾರಣಗಳನ್ನು ಆ ನೆಲೆಗಳಲ್ಲೇ ಶೋಧಿಸಿದರು ಹಾಗೂ ಅದರ ಆಧಾರಗಳ ಮೇಲೇ ಅದನ್ನು ಹೇಗೆ ನಿರ್ಮೂಲನೆ ಮಾಡಬೇಕು ಎನ್ನುವುದರ ಕುರಿತು ತಮ್ಮ ವಾದವನ್ನು ಮಂಡಿಸಿದರು. ಅಂಬೇಡ್ಕರ್ ಮೇಲ್ಜಾತಿ ಹಾಗೂ ದಲಿತರಿಬ್ಬರನ್ನೂ ದಲಿತರ ದುರವಸ್ಥೆಗೆ ಹೊಣೆಯಾಗಿಸಿದರು. ಇನ್ನೊಂದೆಡೆ ಲೋಹಿಯಾ ರಾಜಕೀಯ ಕ್ಷೇತ್ರದಲ್ಲಿ ಕ್ರಿಯಾಶೀಲರಾಗಲು ದಲಿತರು ಮತ್ತು ಹಿಂದುಳಿದ ಜಾತಿಗಳನ್ನು ಆಗ್ರಹಿಸಿದರು. ದಲಿತರೊಂದಿಗೆ ಹಿಂದುಳಿದ ಜಾತಿಗಳಿಗೆ ಮೀಸಲಾತಿಯ ಬೇಡಿಕೆ ಮೊದಲಿಗೆ ಮುಂದಿಟ್ಟವರಲ್ಲಿ ಅವರು ಒಬ್ಬರಾಗಿದ್ದರು. ಇದು ಅಂಬೇಡ್ಕರ್ ಮತ್ತು ಲೋಹಿಯಾರ ತಾತ್ವಿಕತೆಯಲ್ಲಿನ ಮೂಲಭೂತ ವ್ಯತ್ಯಾಸ.

ಲೋಹಿಯಾರ ಸಮಾನತೆಯ ಪರಿಕಲ್ಪನೆಯಲ್ಲಿ ಮಹಿಳೆಯರ ಪಾತ್ರದ ಮಹತ್ವ ಹೆಚ್ಚಿನದು ಎನ್ನುವುದನ್ನು ನಾವು ಗಮನಸಬೇಕು.. ಇದು ಇನ್ನಿಬ್ಬರು ಚಿಂತಕರಿಂದ ಇವರನ್ನು ಭಿನ್ನವಾಗಿಸುತ್ತದೆ. ಮಹಿಳೆಯರಿಗೆ ಸಮಾನ ಸ್ಥಾನಮಾನ ನೀಡದೆ ಸಮ ಹಾಗೂ ನ್ಯಾಯ ಸಮ್ಮತ ಸಮಾಜ ಕಟ್ಟುವುದು ಸಾಧ್ಯವೇ ಇಲ್ಲವೆಂದು ಅವರು ವಾದಿಸುತ್ತಾರೆ. ಲೋಹಿಯಾ ತಮ್ಮ 'ವರ್ಣ ಔರ್ ಯೋನಿ ಶುಚಿತಾ' ಪ್ರಬಂಧದಲ್ಲಿ, ಮಹಿಳೆಯರಿಗೆ ಅವರ ಸ್ಥಾನಮಾನವನ್ನು ನಿರಾಕರಿಸಲಾಗಿದ್ದು ಅವರನ್ನು ಸಮಾಜದಲ್ಲಿನ

ಶೂದ್ರರಿಗೆ ಸಮವೆಂದು ಪರಿಗಣಿಸಲಾಗಿದೆ ಎಂದು ಸೂಚಿಸುತ್ತಾರೆ. ಸಮಾಜದಲ್ಲಿ ಮಹಿಳೆಯರಿಗೆ ಸಮಾನ ಸ್ಥಾನಮಾನ ನೀಡಬೇಕೆನ್ನುವ ವಿಚಾರದ ಮಹತ್ವವನ್ನು ಎತ್ತಿ ಹಿಡಿಯುವುದಕ್ಕಾಗಿ ಅವರು ದ್ರೌಪದಿಯ ನಿದರ್ಶನವನ್ನು ಉಲ್ಲೇಖಿಸುತ್ತಾರೆ. ದ್ರೌಪದಿಯ ನಿದರ್ಶನ ನೀಡುವುದರ ಮೂಲಕ ಸ್ತ್ರೀ ಪುರುಷರ ನಡುವೆ ಸಮಾನತೆಯ ಸಂಬಂಧ ಏರ್ಪಡಬೇಕು ಎನ್ನುವ ಸಂಗತಿಯನ್ನು ಸ್ಥಾಪಿಸಬಯಸುತ್ತಾರೆ. ೧೯೬೦ರ ಜುಲೈನಲ್ಲಿ ಅವರು 'ಮಹಿಳೆ ತಾನು ಅಬಲೆಯೆಂದು ಭಾವಿಸಕೂಡದು. ಬದಲಾಗಿ ಮಹಿಳೆ ಅದೆಷ್ಟು ಶಕ್ತಿಶಾಲಿಯಾಗಬೇಕೆಂದರೆ, ಪ್ರಸಂಗ ಬಂದರೆ ಪುರುಷನನ್ನು ತನ್ನ ಜೊತೆಗೆ ಆಗ್ರಹಪೂರ್ವಕವಾಗಿ ಎಳೆದೊಯ್ಯುವಂತಾಗಬೇಕು' ಎಂದು ಬರೆದಿದ್ದರು.

ಈ ವಾದವನ್ನು ಸಮಾರೋಪಗೊಳಿಸುತ್ತ ನಾನು ಹೇಳಬಯಸುವುದೇನೆಂದರೆ ಲೋಹಿಯಾರ ಸಮಾನತೆಯ ಪರಿಕಲ್ಪನೆಯ ಆಧುನಿಕ ಸಮಕಾಲೀನ ಭಾರತದ ಮುಖ್ಯ ಲಕ್ಷಣವೆನಿಸಿದ ಅಧಿಕಾರಕ್ಕೆ ಸಂಬಂಧಿಸಿದ ಎಲ್ಲಾ ಮುಖ್ಯಾಮುಖ್ಯ ಕಾಳಜಿಗಳನ್ನು–ಜಾತಿ, ವರ್ಗ, ಲಿಂಗ, ಭಾಷೆ ಮುಂತಾದುವೆಲ್ಲವೂ ಸೇರಿದಂತೆ–ಒಳಗೊಂಡಿದೆ. ಅವರ ವಿಚಾರಗಳಲ್ಲಿನ ಈ ಬಹುಮುಖತೆ ದಾರ್ಶನಿಕನೊಬ್ಬನ ಸೋಪಜ್ಞತೆ ಹಾಗೂ ಸೃಜನಶೀಲತೆಯ ಪ್ರತಿಫಲನವೇ ಆಗಿದೆ.

(೪)

ಭಾರತದಲ್ಲಿ ಸಮಾನತೆ ಸಾಧಿಸುವ ನಿಟ್ಟಿನಲ್ಲಿ ಮಾಡಲಾದ ಪ್ರಯತ್ನಗಳು ಧನಾತ್ಮಕ ಫಲಿತಾಂಶಗಳನ್ನು ನೀಡಿವೆ. ಆದಾಗ್ಯೂ ಈ ಗುರಿಯನ್ನು ಸಾಧಿಸಲು ಇನ್ನೂ ಸಾಕಷ್ಟು ಪ್ರಯತ್ನಿಸಬೇಕಿದೆ. ಸಮಾಜದಲ್ಲಿ ಸಮಾನತೆ ತರಲು ಬೇರು ಮಟ್ಟದಿಂದ, ಅಂದರೆ ಪಂಚಾಯತ್ ಹಂತದಿಂದ ರಾಜಕೀಯ ಅಧಿಕಾರದ ಅತ್ಯುನ್ನತ ವೇದಿಕೆಯಾಗಿರುವ ಸಂಸತ್ತಿನವರೆಗೆ ದಲಿತರ ಸೂಕ್ತ ಮತ್ತು ಸಕ್ರಿಯ ಪ್ರಾತಿನಿಧ್ಯ ಸಾಧ್ಯವಾಗಬೇಕು. ಈ ಕಾರಣಕ್ಕಾಗಿಯೇ ಗಾಂಧಿ, ಅಂಬೇಡ್ಕರ್ ಮತ್ತು ಲೋಹಿಯಾರ ವಿಚಾರಗಳು–ಸಮಾನತೆಯ ಸಾಧನೆಯನ್ನು ನಿರ್ಧರಿಸುವ ನಾಲ್ಕು ಮುಖ್ಯ ಅಂಶಗಳಾದ ಜಾತಿ, ವರ್ಗ, ಲಿಂಗ ಹಾಗೂ ಭಾಷೆಗೆ ಸಂಬಂಧಿಸಿದಂತೆ–ಇಂದಿಗೂ ಪ್ರಸ್ತುತ ಹಾಗೂ ಮಹತ್ವಪೂರ್ಣವೆನಿಸಿವೆ. ಪ್ರೊ. ಆನಂದಕುಮಾರ್ ಅವರ ಪ್ರಕಾರ, ನಮ್ಮ ಪಾಳೇಗಾರಿ ಮನೋಭಾವ ಬದಲಾಗಿ ಮುಕ್ತ ಕ್ಷೇತ್ರಗಳಲ್ಲಿ ಹಿಂದುಳಿದ ವರ್ಗಗಳು, ದಲಿತರು ಹಾಗೂ ಮಹಿಳಾ ಅಭ್ಯರ್ಥಿಗಳಿಗೆ ಮತ ನೀಡಿ ಆಯ್ಕೆ ಮಾಡುವಂತಾಗುವವರೆಗೆ ಸಮಾನತೆ ಕುರಿತು ಮಾತನಾಡುವುದೇ ಸಾಧ್ಯವಿಲ್ಲ

ಸಾಮಾನ್ಯವಾಗಿ ಗಾಂಧಿ, ಅಂಬೇಡ್ಕರ್ ಹಾಗೂ ಲೋಹಿಯಾರನ್ನು ಸಮಾನತೆಯ ವಿಷಯದಲ್ಲಿ ವಿಭಿನ್ನರೆಂದು ಭಾವಿಸಲಾಗುತ್ತದೆ. ಸಾಮಾಜಿಕ ಸಮಾನತೆಯನ್ನು ಸಾಧಿಸುವ ನಿಟ್ಟಿನಲ್ಲಿ ಅವರ ಪ್ರಯತ್ನಗಳಿಗೆ ತುಂಬ ನಾಟಕೀಯ ರೀತಿಯಲ್ಲಿ, ಪ್ರತ್ಯೇಕ ರಾಜಕೀಯ ಸಂಬಂಧಗಳನ್ನು ಕಲ್ಪಿಸಲಾಗಿದೆ. ಅವರ ವಿಚಾರಗಳಲ್ಲಿ ನಿರ್ದಿಷ್ಟ ಮಟ್ಟದ ಸಾಮ್ಯವಿದೆ ಎನ್ನುವ ಸಂಗತಿಯನ್ನು ಸಂಪೂರ್ಣವಾಗಿ ಅಲ್ಲಗಳೆದು ಹಾಗೆ ಮಾಡಲಾಗಿದೆ. ಶಾಲಾ ಪಠ್ಯ ಪುಸ್ತಕಗಳಲ್ಲೂ ಸಹ ಇದರ ಛಾಯೆ ಮತ್ತು ಪುನರಾವರ್ತನೆಯನ್ನು ಕಾಣಬಹದು. ಅಷ್ಟೇ ಅಲ್ಲ, ಈ ಮೂವರು ಮೂಲ ಚಿಂತಕರಲ್ಲಿ ಅತ್ಯಂತ ಕಲ್ಪನಾಶೀಲರಾದ ಲೋಹಿಯಾರನ್ನು ಕೆಲವೇ ಕೆಲವು ಪಠ್ಯ ಪುಸ್ತಕಗಳಲ್ಲಿ ಹೆಸರಿಸಲಾಗಿದೆ ಎಂಬುದನ್ನು ನಾವು ಗಮನಸಬೇಕಿದೆ.

ಆದ್ದರಿಂದ ಸಮಾನತೆ ಕುರಿತು ನಾವು ಮಾತನಾಡಿದಾಗಲೆಲ್ಲ ಸಮಾನತೆ ಕುರಿತ ಈ ಮೂವರು ಚಿಂತಕರ ವಿಚಾರಗಳು ಪರಸ್ಪರ ಪೂರಕವಾಗಿವೆ ಎಂಬ ಸಂಗತಿಯನ್ನು ಗಮನದಲಿಟ್ಟುಕೊಂಡಿರಬೇಕು. ಡಿ.ಆರ್.ನಾಗರಾಜ(೨೦೦೮) ಅವರ ಪ್ರಕಾರ, 'ಗಾಂಧಿ ಮತ್ತು ಅಂಬೇಡ್ಕರ್ ಪರಸ್ಪರರನ್ನು ರೂಪಾಂತರಿಸಿದ್ದರು. ಗಾಂಧೀಜಿ ಹರಿಜನರ ಉದ್ಧಾರದ ಪ್ರಶ್ನೆಯನ್ನು ಕೇವಲ ಅಸ್ಪೃಶ್ಯತೆಯ ನೆಲೆಯಿಂದ ಪರಿಶೀಲಿಸಿದರೆ, ಅಂಬೇಡ್ಕರ್ ಜಾತಿವಾದದ ಅಂತ್ಯದಲ್ಲಿ ಧರ್ಮದ ಪಾತ್ರವನ್ನು

ಲೋಹಿಯಾ ಅವರು ಗಾಂಧಿ ಮತ್ತು ಅಂಬೇಡ್ಕರ್‌ರ ಸೈದ್ಧಾಂತಿಕ ರಚನೆಗಳಿಗೆ ತುಂಬ ಹತ್ತಿರವಾಗಿದ್ದರು. ಅಂಬೇಡ್ಕರ್‌ರಂತೆ ಅವರು ಜಾತಿ ಆಧಾರಿತ ತಾರತಮ್ಯದ ವಿರುದ್ಧ ಪ್ರತಿಭಟಿಸಿದರು ಹಾಗೂ ಅನ್ಯಾಯದ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಬಯಸಿದರು. ಜೊತೆಗೆ ಅವರು ಹಿಂದುಳಿದ ಜಾತಿಗಳಿಗೆ ವಿಶೇಷ ಹಕ್ಕುಗಳು ಅಥವಾ ಅವಕಾಶಗಳನ್ನು ಕಲ್ಪಿಸುವುದು ಅವಶ್ಯವಾಗಿದೆ ಎಂದು ಭಾವಿಸಿದರು. ಗಾಂಧಿ ಹಾಗೂ ಲೋಹಿಯಾರ ನಡುವಣ ಸಂಬಂಧ ಗುರು–ಶಿಷ್ಯರ ಸಂಬಂಧವಾಗಿತ್ತು. ಗಾಂಧಿಯ ವಿಚಾರಗಳೊಂದಿಗೆ ಲೋಹಿಯಾ ಸಹಮತವಾಗಿದ್ದರೂ ಅವರು ಸ್ವಾಭಾವಿಕವಾಗಿ ತಮ್ಮದೇ ಆದ ವಿಶಿಷ್ಟ ಅಭಿಪ್ರಾಯ ತಳೆದಿದ್ದರು. ಜಾತಿ ವಿಷಯವಾಗಿ ಬಹಳ ಕಾಲದವರೆಗೆ ಗಾಂಧಿಯನ್ನು ವಿರೋಧಿಸಿ ಅವರ ಜೊತೆ ಭಿನ್ನಾಭಿಪ್ರಾಯ ಹೊಂದಿದ್ದರೂ ಅವರು ಶಿಕ್ಷಣ ಮತ್ತು ಭಾಷೆಗೆ ಸಂಬಂಧಿಸಿದಂತೆ ಗಾಂಧಿಯ ವಿಚಾರಗಳನ್ನು ಬೆಂಬಲಿಸಿದರು.ಲೋಹಿಯಾ ಪ್ರಕಾರ ('ಧರ್ಮಯುಗ' –೧೯೬೭)'ಭಾರತವನ್ನು ಒಗ್ಗೂಡಿಸುವ ಎರಡೇ ಶಕ್ತಿಗಳಿವೆ–ಒಂದು ಗಾಂಧೀಜಿ ಹಾಗೂ ಎರಡನೆಯದು ಸಿನಮಾ'

ಪ್ರಸಕ್ತ ಸನ್ನಿವೇಶದಲ್ಲಿ, ಪ್ರಜಾಪ್ರಭುತ್ವೀಕರಣ, ಸಾಮಾಜಿಕ ಸಮಾನತೆ ಹಾಗೂ ಅಧಿಕಾರದ ಕಣದಲ್ಲಿ ಪ್ರಬಲರಿಂದ ದಮನಿಸಲ್ಪಟ್ಟ ಹಾಗೂ ಶೋಷಿಸಲ್ಪಟ್ಟವರ ಏಳ್ಗೆಗಾಗಿ ಗಾಂಧಿ, ಅಂಬೇಡ್ಕರ್ ಹಾಗೂ ಲೋಹಿಯಾರ ವಿಚಾರಗಳನ್ನು ಸಕ್ರಿಯವಾಗಿ ಬಳಸಿಕೊಳ್ಳುವುದು ಅವಶ್ಯವಾಗಿದೆ. ಆಗ ಮಾತ್ರ ಸಮಾನತೆಯ ಹಕ್ಕಿನ ಸಾಂವಿಧಾನಿಕ ಅವಕಾಶವನ್ನು ಅದರ ನೈಜ ಕಾಳಜಿಯೊಂದಿಗೆ ಜಾರಿಗೊಳಿಸಬಹುದು.

**(ಕೃಪೆ: 'ಜನತಾ')**

# ನಮ್ಮ ಹಾಲಪ್ಪ ಇನ್ನಿಲ್ಲ...



ಬಹುಮತದ ಹಾಲಪ್ಪ ಎಂದೇ ಶಿವಮೊಗ್ಗ ಸೀಮೆಯಲ್ಲಿ ಹೆಸರಾಗಿದ್ದ ಎಚ್. ಹಾಲಪ್ಪ ಇನ್ನಿಲ್ಲ ಎಂದರೆ ಅವರ ಗೆಳೆಯರಿಗೆ ನಂಬುವುದು ಕಷ್ಟ. ಏಕೆಂದರೆ, ಅವರು ತಮ್ಮ ಬದುಕಿನ ಕೊನೆಯ ದಿನಗಳವರೆಗೂ ಅಷ್ಟು ಜೀವಂತವಿದ್ದರು. ಹಲವು ವರ್ಷಗಳ ಅನಾರೋಗ್ಯದಿಂದ ದೇಹ ಶಿಥಿಲವಾಗಿದ್ದರೂ, ಅದನ್ನು ಲೆಕ್ಕಿಸದೆ ಅವರು ಶಿವಮೊಗ್ಗ ಸುತ್ತಮುತ್ತಲ ಎಲ್ಲ 'ಪ್ರಗತಿಪರ' ಚಟುವಟಿಕೆಗಳಿಗೆ ತಮ್ಮ ಬೈಕನ್ನೇರಿ ಬಂದೇ ಬಿಡುತ್ತಿದ್ದರು.

ಮೂಲತಃ ಹೊನ್ನಾಳಿ ಬಳಿಯ ಸಾಸ್ವೆಹಳ್ಳಿಯವರಾದ ಹಾಲಪ್ಪ ಜಮೀನ್ದಾರ ಜಾತಿಯಲ್ಲಿ ಹುಟ್ಟಿದವರಾದರೂ, ಕಡುಬಡತನದಲ್ಲಿ ಬೆಳೆದವರಾದ್ದರಿಂದ ಬಡವರನ್ನು ಕುರಿತಂತೆ ಬಾಲ್ಯದಿಂದಲೇ ಅನುಕಂಪೆ ಬೆಳೆಸಿಕೊಂಡು ಬಂದವರು. ಹಾಗಾಗಿಯೇ ಅವರು ಭದ್ರಾವತಿಯ ಬಿ. ಕೃಷ್ಣಪ್ಪನವರೊಂದಿಗೆ ಸಮಾಜವಾದಿ ಯುವಜನಾ ಸಭಾದಲ್ಲಿ ತಮ್ಮ ಹೋರಾಟದ ಬದುಕನ್ನು ಅರಂಭಿಸಿ, ನಂತರ ಅವರ ಜೊತೆಗೇ ದಲಿತ ಸಂಘರ್ಷ ಸಮಿತಿಯ ಹೋರಾಟಗಳಲ್ಲಿ ಭಾಗವಹಿಸಿದರು. ನಂತರದ ದಿನಗಳಲ್ಲಿ ಮೇಲ್ಜಾತಿಗಳಿಗೆ ಪಾರಂಪರಿಕ ರಕ್ಷಣೆ ಇದೆ;ಪರಿಶಿಷ್ಟ ಜಾತಿಗಳಿಗೆ ಸಂವಿಧಾನದ ರಕ್ಷಣೆ ಇದೆ; ಆದರೆ ಹಿಂದುಳಿದ ಜಾತಿಗಳು ತಬ್ಬಲಿಗಳಾಗಿವೆ ಎಂಬುದನ್ನು ಮನಗಂಡ ಅವರು ಹಿಂದುಳಿದ ಜಾತಿಗಳ ಚಳುವಳಿಯೊಂದಿಗೆ ತಮ್ಮನ್ನು ಗುರುತಿಸಿಕೊಂಡಿದ್ದರು.

ಬಟ್ಟೆ ವ್ಯಾಪಾರ ಮಾಡಿ ಕೈ ಸುಟ್ಟುಕೊಂಡಿದ್ದ ಹಾಲಪ್ಪ ರೈತರಾಗಿ ದುಡಿದ ಒಂದಷ್ಟು ಹಣದಲ್ಲೇ ಪ್ರತಿವರ್ಷ ಶಿವಮೊಗ್ಗದಲ್ಲಿ ಸಹಮನಸ್ಕ ಗೆಳೆಯರೊಂದಿಗೆ ದೇವರಾಜ ಅರಸರ ಹುಟ್ಟು ಹಬ್ಬ ಆಚರಿಸುತ್ತಿದ್ದರು. ಒಂದಷ್ಟು ವರ್ಷ ಹಿಂದುಳಿದ ವರ್ಗಗಳ ಶಿಕ್ಷಣಕ್ಕಾಗಿ 'ಬಹುಮತ' ಎಂಬ ವಾರಪತ್ರಿಕೆಯನ್ನೂ ನಡೆಸಿದ್ದರು. ಹಿಂದುಳಿದ ವರ್ಗಗಳ ಆಯೋಗಕ್ಕೆ ಮುನ್ನವೇ ಸ್ಥಳೀಯವಾಗಿ ಹಿಂದುಳಿದ ಜಾತಿಗಳ ಜನಗಣತಿಯನ್ನು ಸ್ವತಃ ತಾವೇ ಆರಂಭಿಸಿದ್ದ ಸಾಹಸಿಗರು ಇವರು!

ದಣಿವರಿಯದ ಈ ಹೋರಾಟಗಾರನಿಗೆ ನಮ್ಮ ನಮನಗಳು.

**–ಸಂಪಾದಕ**

## ನಮ್ಮ ಸಮಾಜವಾದಿಗಳು | ಸಮಾಜವಾದದ ಕಡು ವ್ಯಾಮೋಹಿ ಎಸ್. ಎಸ್ ಕುಮಟಾ



**ಸ**ಮಾಜವಾದದ ಸಿದ್ಧಾಂತವನ್ನು ತಮ್ಮ ಜೀವನದ ಉಸಿರು ಎನ್ನುವಂತೆ ಬದುಕಿದ ಅನೇಕ ಮಂದಿ ಸಾಗರ ಪ್ರಾಂತ್ಯದಲ್ಲಿ ಇದ್ದರು. ಇಂತಹವ ಪೈಕಿ ಪ್ರಮುಖವಾದ ಹೆಸರು ಎಸ್.ಎಸ್.ಕುಮಟಾ ಅವರದ್ದು. ಕಾಗೋಡು ಸತ್ಯಾಗ್ರಹದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದ ಕುಮಟಾ ಕರ್ನಾಟಕದ ಪ್ರಭಾವಿ ರಾಜಕಾರಣಿಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದರೂ ಅವರಿಂದ ಏನನ್ನೂ ನಿರೀಕ್ಷಿಸದೆ ಜೀವನದ ಕೊನೆಯವರೆಗೂ ಸ್ವಾಭಿಮಾನಿಯಾಗಿ ಬದುಕಿದವರು.

ಸತ್ಯಣ್ಣ ಎಂದೇ ಚಿರಪರಿಚಿತರಾಗಿದ್ದ ಎಸ್.ಎಸ್.ಕುಮಟಾ ಮೂಲತಃ ಉತ್ತರ ಕನ್ನಡ ಜಿಲ್ಲೆಯ ಕುಮಟಾದವರು. ಹಾಗಾಗಿ ಅವರ ಹೆಸರಿನೊಂದಿಗೆ ಕುಮಟಾ ಎನ್ನುವ ಹೆಸರು ಸೇರಿಕೊಂಡಿತ್ತು. ಅವರ ಕುಟುಂಬ ಚಿಕ್ಕವರಿರುವಾಗಲೇ ಸಾಗರಕ್ಕೆ ವಲಸೆ ಬಂದ ಕಾರಣ, ಕುಮಟಾ ಸಾಗರದವರೇ ಆದರು.

ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಸಾಗರದಲ್ಲಿ ಪೂರೈಸಿದ ಕುಮಟಾ ಕಾಲೇಜು ಶಿಕ್ಷಣಕ್ಕಾಗಿ ಶಿವಮೊಗ್ಗಕ್ಕೆ ಹೋದಾಗ ಯು.ಆರ್.ಅನಂತಮೂರ್ತಿ, ಜೆ.ಹೆಚ್.ಪಟೇಲ್ ಸೇರಿದಂತೆ ಹಲವರ ಪರಿಚಯವಾಯಿತು. ಅದೇ ಹೊತ್ತಿಗೆ ಸಾಗರದಲ್ಲಿ ಕಾಗೋಡು ಚಳವಳಿ ಕಾವು ಏರತೊಡಗಿತ್ತು.

ಕಾಲೇಜು ದಿನಗಳಲ್ಲಿ ವಿವಿಧ ರೀತಿಯ ಸತ್ಯಾಗ್ರಹಗಳಲ್ಲಿ ಪಾಲ್ಗೊಂಡು ಸಮಾಜದ ಶೋಷಿತ ವರ್ಗದವರ ಪರವಾಗಿ ಧ್ವನಿ ಎತ್ತುತ್ತಿದ್ದ ಕುಮಟಾ ಸಹಜವಾಗಿಯೇ ತಮ್ಮೂರಿನಲ್ಲಿ ಆರಂಭಗೊಂಡ ಕಾಗೋಡು ಸತ್ಯಾಗ್ರಹದ ಆಕರ್ಷಣೆಗೆ ಒಳಗಾದರು. ಸಾಮಾಜಿಕ ಹೋರಾಟವಾಗಿ ಅರಂಭವಾಗಿದ್ದ ಕಾಗೋಡು ಸತ್ಯಾಗ್ರಹಕ್ಕೆ ಸೈದ್ಧಾಂತಿಕ ನೆಲೆಗಟ್ಟು ಒದಗಿ ಬಂದದ್ದು ಸಮಾಜವಾದಿಗಳಿಂದಲೇ. ಅಂತಹ ಸಮಾಜವಾದಿಗಳ ಗುಂಪಿನಲ್ಲಿ ಕುಮಟಾ ಪ್ರಮುಖರಾಗಿದ್ದರು. ಚಳವಳಿಯ ಸಂಘಟನೆ, ಕರಪತ್ರ ಮುದ್ರಣ, ಭಾಷಣದ ತಯಾರಿ ಹೀಗೆ ಹಲವು ಕೆಲಸಗಳಲ್ಲಿ ಕುಮಟಾ ತಮ್ಮನ್ನು ತೊಡಗಿಸಿಕೊಂಡಿದ್ದರು.

ಅತ್ಯುತ್ತಮ ವಾಗ್ಮಿಯಾಗಿದ್ದ ಕುಮಟಾ ಭಾಷಣಕ್ಕೆ ನಿಂತರೂ ಎಂದರೆ ಎಂತಹ ಜಟಿಲ ವಿಷಯವನ್ನೂ ಸರಳವಾಗಿ ಸಾಮಾನ್ಯ ರೈತರಿಗೂ ಅರ್ಥವಾಗುವಂತೆ ವಿವರಿಸುತ್ತಿದ್ದರು ಎಂಬುದನ್ನು ಚಳವಳಿಯನ್ನು ಹತ್ತಿರದಿಂದ ಕಂಡವರು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಇದೇ ಹೊತ್ತಿಗೆ ವಿದ್ವಾಂಸರೇ ತುಂಬಿದ ಸಭೆಗಳಲ್ಲೂ ವಿದ್ವತ್‌ಪೂರ್ಣ ಭಾಷಣ ಮಾಡುವ ಶಕ್ತಿಯೂ ಅವರಲ್ಲಿತ್ತು.

ಡಾ.ರಾಮಮನೋಹರ ಲೋಹಿಯಾ ಅವರು ಕಾಗೋಡು ಚಳವಳಿ ಸಂದರ್ಭದಲ್ಲಿ ಸಾಗರಕ್ಕೆ ಬಂದಿದ್ದಾಗ ಅವರ ಹಿಂದಿಯ ಭಾಷಣವನ್ನು ಕನ್ನಡಕ್ಕೆ ಅನುವಾದ ಮಾಡಿದ್ದು ಕುಮಟಾ ಅವರೇ. ಹಲವು ಸಭೆಗಳಲ್ಲಿ ಪ್ರಮುಖ ನಾಯಕರು ಬರುವ ಮುನ್ನ ಕುಮಟಾ ತಮ್ಮ ಭಾಷಣದ ಮೂಲಕ ಜನರನ್ನು ಹಿಡಿದಿಡುತ್ತಿದ್ದರು. ಅದೆಷ್ಟೋ ರೈತರು ಕುಮಟಾ ಅವರ ಭಾಷಣ ಕೇಳಿ ಸ್ಫೂರ್ತಿಗೊಂಡು ಜೈಲು ಸೇರಿದ ಉದಾಹರಣೆಗಳಿವೆ ಎಂಬುದನ್ನು ಕಾಗೋಡು ಸತ್ಯಾಗ್ರಹದ ರೂವಾರಿ ಎಚ್.ಗಣಪತಿಯಪ್ಪ ಇಂದಿಗೂ ಸ್ಮರಿಸುತ್ತಾರೆ.

ತಮ್ಮ ವೈಯುಕ್ತಿಕ ಬದುಕು ಎಷ್ಟೇ ಕಷ್ಟದಲ್ಲಿದ್ದರೂ ಅದನ್ನು ಲೆಕ್ಕಿಸದೆ ಚಳವಳಿಯ ಬಗ್ಗೆ ಬದ್ದತೆಯಿಂದ ಕೆಲಸ ಮಾಡಿದವರ ಸಾಲಿಗೆ ಕುಮಟಾ ಸೇರುತ್ತಾರೆ. ಕಾಗೋಡು ಚಳವಳಿ ತೀವ್ರಗೊಂಡ ಸಂದರ್ಭದಲ್ಲಿ ಒಮ್ಮೆ ರೈತರು ಕಟಾವು ಮಾಡಿದ ಬತ್ತವನ್ನು ಸಮಾಜವಾದಿ ಪಕ್ಷದ ಕಚೇರಿಗೆ ತಂದು ಸಂಗ್ರಹಿಸಲು ಮುಂದಾಗಿದ್ದರು. ಈ ವೇಳೆ ಪೊಲೀಸರ ಲಾಟಿ ಏಟು ತಿಂದು ಈ ಕೆಲಸ ಸುಗಮವಾಗುವಂತೆ ನೋಡಿಕೊಂಡವರು ಕುಮಟಾ. ಇದೇ ಸಮಯದಲ್ಲಿ ಕುಮಟಾ ಅವರ ಮನೆಯಲ್ಲಿ ಅನ್ನ ಬೇಯಿಸಲು ಸಹ ಅಕ್ಕಿಯ ಕೊರತೆ ಇತ್ತು ಎಂಬುದನ್ನು ಗಮನಿಸಿದವರಿದ್ದಾರೆ.

ಹಾಗೆಂದು ತಮ್ಮ ಆರ್ಥಿಕ ಪರಿಸ್ಥಿತಿ ದುರ್ಬಲವಾಗಿದೆ, ಕುಟುಂಬ ಕಷ್ಟದಲ್ಲಿದೆ ಎಂಬುದನ್ನು ಯಾರ ಬಳಿಯೂ ಕುಮಟಾ ಹೇಳಿಕೊಂಡವರಲ್ಲ. ಬಡತನವನ್ನು ಗೇಲಿ ಮಾಡುತ್ತ ಅದನ್ನು ಒಂದು ಸವಾಲು ಎನ್ನುವಂತೆ ಬಾಳಿ ಬದುಕಿದ ಅಪರೂಪದ ವ್ಯಕ್ತಿ ಅವರು.

ಪ್ರಬಲ ಜಾತಿಗೆ ಸೇರದ ಕಾರಣಕ್ಕೆ ರಾಜಕೀಯವಾಗಿ ಕುಮಟಾ ಅವರಿಗೆ ದೊರೆಯಬೇಕಾದ ಮಾನ್ಯತೆ ದೊರಕಲಿಲ್ಲ. ಸಮಾಜವಾದಿ ಪಕ್ಷದಿಂದ ಸಾಗರ ವಿಧಾನಸಭಾ ಕ್ಷೇತ್ರಕ್ಕೆ ಕಾಗೋಡು ತಿಮ್ಮಪ್ಪ ಅವರನ್ನು ಅಭ್ಯರ್ಥಿಯಾಗಿ ನಿಲ್ಲಿಸುವ ಸಂದರ್ಭದಲ್ಲಿ ಮೊದಲು ಪ್ರಸ್ತಾಪವಾದ ಹೆಸರು ಕುಮಟಾ ಅವರದ್ದೇ ಆಗಿತ್ತಂತೆ. ಆದರೆ ಅವರ ಜಾತಿಯ ಜನರು ಸಾಗರ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲ ಎನ್ನುವ ಕಾರಣಕ್ಕೆ ಆ ಹೆಸರು ಹಿಂದಕ್ಕೆ ಹೋಗಿತ್ತು. ಜಾತಿ ವ್ಯವಸ್ಥೆ ವಿರುದ್ಧ ನಿರಂತರವಾಗಿ ಹೋರಾಡಿದ ಅಪ್ಪಟ ಜಾತ್ಯಾತೀತ ವ್ಯಕ್ತಿಗೆ ಜಾತಿಯೇ ಮುಳುವಾದದ್ದು ವಿಪರ್ಯಾಸದ ಸಂಗತಿ.

ಕುಮಟಾ ಅವರ ಹೋರಾಟ ಸಾಗರ ಅಥವಾ ಶಿವಮೊಗ್ಗ ಜಿಲ್ಲೆಗೆ ಸೀಮಿತವಾಗಿರಲಿಲ್ಲ. ರಾಜ್ಯದ ಎಲ್ಲೆ ಜನಪರ ಹೋರಾಟ ನಡೆದರೆ ಅಲ್ಲಿ ಅವರು ಹಾಜರಿರುತ್ತಿದ್ದರು. ಸಂಡೂರು ಸತ್ಯಾಗ್ರಹದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಮೂರು ತಿಂಗಳು ಜೈಲು ವಾಸ ಅನುಭವಿಸಿದವರು ಕುಮಟಾ.

ಸಾಗರದ ಗಜಾನನ ಸಾರಿಗೆ ಸಂಸ್ಥೆ ಕಾರ್ಮಿಕರ ಹೋರಾಟ, ತಾಳಗುಪ್ಪದ ಪ್ಲೈವುಡ್ ಫ್ಯಾಕ್ಟರಿಯ ಕಾರ್ಮಿಕರ ಸಂಘಟನೆ, ಹಮಾಲರ ಸಂಘ ಸ್ಥಾಪನೆ ಹೀಗೆ ಹತ್ತು ಹಲವು ಹೋರಾಟಗಳಲ್ಲಿ ಕುಮಟಾ ತಮ್ಮನ್ನು ತೊಡಗಿಸಿಕೊಂಡವರು.

ರಾಜಕಾರಣದ ಜೊತೆಗೆ ಕಲೆ, ಸಾಹಿತ್ಯ, ರಂಗಭೂಮಿ, ಸಿನೆಮಾ, ಕ್ರೀಡೆ, ಪತ್ರಿಕಾ ಬರವಣಿಗೆ ಹೀಗೆ ನಾನಾ ಕ್ಷೇತ್ರಗಳಲ್ಲಿ ಆಸಕ್ತಿ ಹೊಂದಿದ್ದ ಕುಮಟಾ ಅವರದ್ದು ಅಪ್ಪಟ ಸಾಂಸ್ಕೃತಿಕ ವ್ಯಕ್ತಿತ್ವ. ಸಾಹಿತ್ಯದ ಗಂಭೀರ ಓದುಗರಾಗಿದ್ದ ಕುಮಟಾ ಸಾಗರದಲ್ಲಿ ಕೆಲವು ಕಾಲ 'ದೊಂದಿ' ಎಂಬ ವಾರಪತ್ರಿಕೆಯನ್ನು ನಡೆಸಿದ್ದರು.

ತಮ್ಮ ವೈಯುಕ್ತಿಕ ಬದುಕಿಗಿಂತ ಸಮಾಜವನ್ನು ಅತಿಯಾಗಿ ಪ್ರೀತಿಸಿದ ಕುಮಟಾ ಸ್ವಸ್ಥ ಸಮಾಜಕ್ಕೆ ಬೇಕಾದ ಮಾನಸಿಕ ಸ್ಥಿತಿ ಮತ್ತು ಮಾನವೀಯತೆಯ ಔದಾರ್ಯಗಳ ಪ್ರತಿರೂಪದಂತಿದ್ದರು. ಇಷ್ಟಾಗಿಯೂ ವೈಯುಕ್ತಿಕ ಬದುಕಿನಲ್ಲಿ ಶಿಸ್ತನ್ನು ಕಾಪಾಡಿಕೊಳ್ಳದೆ ಕೆಲವು ದೌರ್ಬಲ್ಯಗಳನ್ನು ರೂಢಿಸಿಕೊಂಡ ಕಾರಣ 1993ರಲ್ಲಿ ತೀವ್ರ ಹೃದಯಾಘಾತದಿಂದ ಅವರು ಸಾವನ್ನಪ್ಪಿದರು. ಆಗ ಅವರಿಗೆ 62 ವರ್ಷ ವಯಸ್ಸು. ಅಲ್ಲಿಗೆ ಸಮಾಜವಾದಿ ಚಳವಳಿಯ ಸಾಂಸ್ಕೃತಿಕ ಚೈತನ್ಯದ ವ್ಯಕ್ತಿತ್ವವೊಂದು ನಮ್ಮಿಂದ ಮರೆಯಾದಂತಾಯಿತು.

**–ಎಂ. ರಾಘವೇಂದ್ರ**

ಇತ್ತೀಚೆಗೆ ನಿಧನರಾದ ರೈತ ಮುಖಂಡ, ದಲಿತಪರ ಮತ್ತು ಕನ್ನಡಪರ ಹೋರಾಟಗಾರ ಹಾಗೂ ದೊಡ್ಡಬಳ್ಳಾಪುರದ ಜನಪ್ರಿಯ ವೈದ್ಯ ಮತ್ತು ನವ ಮಾನವ ಮಾಸಿಕ'ದ ಅಭಿಮಾನ ಓದುಗರಲ್ಲಿ ಒಬ್ಬರಾಗಿದ್ದ ಡಾ. ಎನ್. ವೆಂಕಟರೆಡ್ಡಿಯವರ ನಿಧನಕ್ಕೆ 'ನವ ಮಾನವ ಮಾಸಿಕ' ಬಳಗ ತನ್ನ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ.–ಸಂ.

# ಅಂದ ಹಾಗೆ: ಕಿಡಿಗೇಡಿಯ ಕಾಲಹರಣದ ಟಿಪ್ಪಣಿಗಳು...



**ಕಾ**ಂಗ್ರೆಸ್ ಅಧ್ಯಕ್ಷೆ ಸೋನ್ಯಾ ಗಾಂಧಿ ಮೊನ್ನೆ ಮಂಗಳೂರಿನಲ್ಲಿ ರಾಜ್ಯ ಬಿಜೆಪಿ ಸರ್ಕಾರದ ಭ್ರಷ್ಟ ದುರಾಡಳಿತವನ್ನು ಕಿತ್ತೊಗೆಯುವಂತೆ ಕರ್ನಾಟಕದ ಜನತೆಗೆ ಕರೆ ನೀಡಿದ್ದನ್ನು ಕೇಳಿ ಪಕ್ಕದ ಉಡುಪಿಯ ಜನ ಗಹಗಹಿಸಿ ನಕ್ಕಿದ್ದು ಪಕ್ಕದಲ್ಲೇ ಕೂತಿದ್ದ ಉಡುಪಿಯವರೇ ಆದ ಆಸ್ಕರ್ ಫರ್ನಾಂಡೀಸರ ಕಿವಿಗೆ ಅಪ್ಪಳಿಸಿದಂತಾಗಿ ಪದೇ ಪದೇ ಹೆಗಲು ಮುಟ್ಟಿ ನೋಡಿಕೊಳ್ಳತೊಡಗಿದಾಗ, ಹಿಂದೆಯೇ ಕೂತು ಅವರ ಮೇಲೆ ಸದಾ ನಿಗಾ ಇಟ್ಟಿರುವ ಅವರ ಪತ್ನಿ ಆ ಕೈಗಳನ್ನು ಕೆಲಕ್ಕೆ ಇಳಿಸುತ್ತಾ ಕಿವಿಯಲ್ಲಿ 'ಅಯ್ಯೋ ಮಂಕೇ! ಉಡುಪಿ ನಮ್ಮದೊಬ್ಬರದೇ ಅಲ್ಲ. ಕಳ್ಳ ಲೆಕ್ಕದ ಸಲ್ಮಾನ್ ಖುರ್ಷೀದನ ಪತ್ನಿ ಲೂಯಿ ಫರ್ನಾಂಡೀಸಳೂ ಉಡುಪಿಯವಳೇ...' ಎನ್ನಲು ಆಸ್ಕರ್ ನೆಮ್ಮದಿಯ ನಿಟ್ಟುಸಿರಿಟ್ಟು 'ಮೆಲ್ಲ ಮೆಲ್ಲ...!' ಎಂದು ಪತ್ನಿಯನ್ನು ಎಚ್ಚರಿಸದರಂತಲ್ಲಾ!



ಇತ್ತ ಕರ್ನಾಟಕದ ಜನತೆ ಸೋನ್ಯಾರ ಕರೆ ಕೇಳಿ, 'ಅಯ್ಯೋ ನಾವು ಹಾದಿಯಲ್ಲಿ ಹೋಗುತ್ತಿದ್ದ ದಾಸಯ್ಯನಂತಿದ್ದ ಈ ಹಾಳು ಬಿಜೆಪಿಯನ್ನು ಅಧಿಕಾರಕ್ಕೆ ತಂದದ್ದೇ ಇವರ ಕಾಂಗ್ರೆಸ್ ಸರ್ಕಾರದ ದುರಾಡಳಿತವನ್ನು ಸಹಿಸಲಾಗದೇ ಎಂಬುದನ್ನು ಈಯಮ್ಮ ಮರೆತೇ ಬಿಟ್ಟಳೇ?' ಎಂದು ಬಾಯ ಮೇಲೆ ಬೆರಳಿಟ್ಟುಕೊಂಡು ಆಶ್ಚರ್ಯಪಡುತ್ತಿರಲು, ಅದೇ ಸಮಯದಲ್ಲಿ ಸೋನ್ಯಾರ ಅಳೀಮಯ್ಯ ರಾಬರ್ಟ್ ವಾಡ್ರಾನ ಕೋಟ್ಯಾಂತರ ರೂಪಾಯಿಗಳ ಭಾನಗಡಿ ಮಾಧ್ಯಮಗಳ ತುಂಬಾ ಸ್ಫೋಟಿಸಲು ಸೋನ್ಯಾ ಮುಖದ ತುಂಬಾ ಸೀರೆ ಸುತ್ತಿಕೊಂಡು ದೆಹಲಿಗೆ ವಾಪಸ್ಸಾಗಿಬಿಟ್ಟರಂತಲ್ಲಾ!



ಆದರೆ ಅತ್ತ ದೆಹಲಿಯಲ್ಲಿ ವಾಡ್ರಾನೆಂಬ ತಾಮ್ರದ ವ್ಯಾಪಾರಿ ಐದೇ ವರ್ಷಗಳಲ್ಲಿ ೫೦ ಲಕ್ಷ ರೂಪಾಯಿಗಳ ಹೂಡಿಕೆಯನ್ನು ೬೦೦ ಪಟ್ಟು ಹೆಚ್ಚಿಸಿಕೊಂಡು ೩೦೦ ಕೋಟಿಗಳಿಗೆ ತಲುಪಿರುವುದನ್ನು ಬೆಳಿಗ್ಗೆ ಎದ್ದೊಡನೆ ಪತ್ರಿಕೆಗಳಲ್ಲಿ ಓದಿ ಥಕಥಕನೆ ಕುಣಿದಾಡುವಷ್ಟು ಖುಷಿಪಟ್ಟ ಮನಮೋಹನ ಸಿಂಗ್ ತಮ್ಮ ಮುಕ್ತ ವ್ಯಾಪಾರ ನೀತಿಯನ್ನು ಸದ್ಬಳಕೆ ಮಾಡಿಕೊಂಡು ಒಮ್ಮೆಗೇ ಮೂರಂಕಿ ಪ್ರಗತಿ ಸಾಧಿಸಿದ ಸದರಿ ಉದ್ಯಮಿಯನ್ನು ಅಭಿನಂದಿಸಲು ಉಟ್ಟ ಬಟ್ಟೆಯಲ್ಲೇ ವಾಡ್ರಾನ ಮನೆ ಕಡೆ ಓಡಿ ನೋಡಿದರೆ, ಆ ಮನೆಯ ಸುತ್ತ ಸ್ಮಶಾನ ಮೌನ ಆವರಿಸಿರುವುದನ್ನು ಕಂಡು ಗಾಬರಿಯಾಗಿ, ತಮ್ಮ ಖುಷಿಯ ಉದ್ವಿಗ್ನತೆಯಲ್ಲಿ ಪತ್ರಿಕೆಯಲ್ಲಿನ ಯಾವುದಾದರೂ ಮುಖ್ಯ ಶೋಕ ವಾರ್ತೆಯನ್ನೇನಾದರೂ ಓದದೇ ಬಿಟ್ಟಿರುವೆನೇ ಎಂದು ಕಳವಳಪಡುತ್ತಾ ಬಿರಬಿರನೆ ತಮ್ಮ ಮನೆ ಕಡೆಗೆ ವಾಪಸ್ಸಾದರಂತಲ್ಲಾ!



ಇತ್ತ ಕೇಜ್ರಿವಾಲ್ ಎಂಬ ಹೋರಾಟಗಾರ ಹೊಸ ಪಕ್ಷ ಕಟ್ಟುವ ಹಾರಾಟದಲ್ಲಿ ನಿತ್ಯಕರ್ಮಗಳ ನಿಸೂರನಲ್ಲಿ ದಿನನಿತ್ಯ ಕಾಂಗ್ರೆಸ್ ನಾಯಕರ ತಲೆಗೆ ಗುರಿ ಇಡುತ್ತಾ ಗುಂಡು ಹಾರಿಸುತ್ತಿರುವವರೆಗೆ ಮಾಧ್ಯಮಗಳ ತುಂಬಾ ನಿರ್ಮಲಾ, ಮೀನಾಕ್ಷಿ, ಸ್ಮಿತಾ ಪಿಂಕಿ ಇತ್ಯಾದಿ ಬೊಂಬಾಟ್ ಇಂಗ್ಲಿಷ್ ಬಾಯಿಗಳ ಮೂಲಕ ಕಾಂಗ್ರಸ್ಸಿನ ಹುಡಿ ಹಾರಿಸುತ್ತಿದ್ದ ಬಿಜೆಪಿ, ಕೇಜ್ರಿವಾಲ್ ತನ್ನ ಬಂದೂಕನ್ನು ತಮ್ಮ ಅಧ್ಯಕ್ಷ ಗಡ್ಕರಿಯತ್ತ ತಿರುಗಿಸಿದ ಕೂಡಲೇ ಗಡಗಡನೆ ನಡುಗಿ ಈ ಎಲ್ಲ 'ಬಾಯಿ'ಗಳಿಗೂ ಭದ್ರವಾದ ಮುಚ್ಚಳ ಹಾಕಿ, ಸೂಕ್ತ ಉತ್ತರಗಳನ್ನು ಸಿದ್ಧಪಡಿಸಿಕೊಳ್ಳಲು ಮಾಧ್ಯಮ ಲೋಕದಿಂದಲೇ ಮಾಯವಾಯಿತಂತಲ್ಲಾ!

ಗಡ್ಕರಿಯ ದುರಾದೃಷ್ಟಕ್ಕೆ ಸರ್ಕಾರಿ ಜಮೀನಿಗಾಗಿ ಸೃಷ್ಟಿಸಿಕೊಂಡ ತಮ್ಮ ಹುಸಿ ವಿಳಾಸಗಳ ಹುಸಿ ಕಂಪನಿಗಳ ಹಗರಣ ಬಯಲಾದ ಮಾರನೆಯ ದಿವಸವೇ ಚೆಡ್ಡಿ ವೀರರ ಕವಾಯಿತು ಪ್ರದರ್ಶನದಲ್ಲಿ ಭಾಗವಹಿಸಬೇಕಾಗಿ ಬಂದು, ಅದರಲ್ಲಿ ಅವರು ಮೊದಲೇ ಊದಿಕೊಂಡಿದ್ದ ಮುಖವನ್ನು ಮತ್ತಷ್ಟು ಊದಿಸಿಕೊಂಡು, ಪದೇ ಪದೇ ಉದುರುತ್ತಿದ್ದ ಚೆಡ್ಡಿಯನ್ನು ಪದೇ ಪದೇ ಮೇಲೆ ಮೇಲೆ ಎಳೆದುಕೊಳ್ಳುತ್ತಾ ಇರುವುದನ್ನು ಕಂಡ ಚೆಡ್ಡಿಗಳ ಮಹಾಧಿಪತಿ ಮೋಹನ ಭಾಗವತರು ವಿಚಲಿತರಾಗಿ ತಾವೂ ಒಮ್ಮೆ ತಮ್ಮ ವಿಶಾಲ ಚೆಡ್ಡಿಯನ್ನು ಮೇಲೆಕ್ಕೆಳೆದುಕೊಂಡು ಭದ್ರವಾಗಿದೆ ಎಂದು ಖಚಿತಪಡಿಸಿಕೊಂಡಿದ್ದನ್ನು, ಇದಕ್ಕೆಂದೇ ಕಾಯುತ್ತಿದ್ದ ಟಿವಿ ಕ್ಯಾಮರಾಗಳು ಸೆರೆಹಿಡಿದೇಬಿಟ್ಟವಂತಲ್ಲಾ!



ಇನ್ನು ಇಲ್ಲಿ ಕರ್ನಾಟಕದಲ್ಲಿ ಪೂರ್ತಿ ಬಾಯಿ ಅಗಲಿಸಿ ಘರ್ಜಿಸಿದರೂ ಶಬ್ದವೇ ಹೊರ ಬರದಂತಾಗಿ ಸಿ.ಬಿ.ಐ. ಸ್ಥಿತಿಯಲ್ಲಿರುವ ಯಡ್ಯೂರಪ್ಪನನ್ನು 'ಪಾಪ' ಎಂದು ಹಾಗೇ ಬಿಟ್ಟು ಅವರ ಮುಖದ ಮೇಲೆ ಆಗಾಗ್ಗೆ ಬಂದು ಕೂರುತ್ತಿದ್ದ ನೊಣ ಓಡಿಸುವ ಕಾಯಕದಲ್ಲಿದ್ದ ಧನಂಜಯ ಕುಮಾರ್ ಎಂಬ ಪಡಪೋಶಿ ಜೈನ ವಟುವೊಬ್ಬನನ್ನು 'ಪುಣ್ಯ'ದ ಕೆಲಸವೆಂಬಂತೆ ಬಿಜೆಪಿಯಿಂದ ಹೊರಹಾಕಿದ ಚಿಲ್ಲರೆ ಕಾರ್ಯಾಚರಣೆಯ ಮೇಲೆ ಕನ್ನಡದ ಸುವಿಖ್ಯಾತ ಜಾತ್ಯತೀತ ಪತ್ರಿಕೆಯೊಂದರ (ಸಹ)ಸಂಪಾದಕ ಮಹಾಶಯರೊಬ್ಬರು ತಮ್ಮ ರಾಜಕೀಯ ವಿವೇಚನೆಯ ದುರ್ಬೀನಿನ ದೃಷ್ಟಿಯನ್ನು ಮೂರೂ ಮುಕ್ಕಾಲು ಕಾಲಂನಷ್ಟು ಆಳವಾಗಿ ಚೆಲ್ಲಿ ಅದರಲ್ಲಿ ಬಿಜೆಪಿಯ ಆತ್ಮದ್ರೋಹವೆಂಬ ಐದನೇ ಆಯಾಮವನ್ನು ಕಂಡು ಹಿಡಿದಿರುವುದನ್ನು ಅವರ ಮತ್ಸರಪೂರಿತ ಸಹೋದ್ಯೋಗಿಗಳು ಬೆಕ್ಕಸ ಬೆರಗಾಗಿ ನೋಡುತ್ತಾ, ಇದೇನಿದರ ಮರ್ಮ ಎಂದು ತನಖೆ ಮಾಡಲಾಗಿ ಆ ದುರ್ಬೀನು ಜೈನ ಮಠವೊಂದರ ಪ್ರಾಚ್ಯ ವಸ್ತುಸಂಗ್ರಹಾಲಯದಿಂದ ಕೊಡಮಾಡಿದ್ದು ಎಂಬುದು ಗೊತ್ತಾಯಿತಂತಲ್ಲಾ!

**ಕೊನೆ ಹನಿ:**



ಇದು ನಾನು ಅರವತ್ತರ ದಶಕದಲ್ಲಿ ನನ್ನ ಬಾಲ್ಯದಲ್ಲಿ ಕೇಳಿದ ನಗೆ ಹನಿ: ಒಮ್ಮೆ ನಮ್ಮ ಪ್ರಧಾನ ನೆಹ್ರೂ ಮತ್ತು ರಷ್ಯಾದ ಅಧ್ಯಕ್ಷ ಕ್ರುಶ್ಚೇವ್ ಒಂದು ಬೆಳಿಗ್ಗೆ ಭಾರತದ ಮೇಲೆ ವಿಮಾನದಲ್ಲಿ ಹೋಗುತ್ತಿದ್ದರಂತೆ. ಕ್ರುಶ್ಚೇವ್ ಒಮ್ಮೆ ಏಕೋ ಕೆಳಗೆ ನೋಡಿದಾಗ ಹಲವಾರು ಜನ ಬಯಲಿನಲ್ಲಿ ಶೌಚಕ್ಕೆ ಕೂತಿದ್ದನ್ನು ಕಂಡು ಗಾಬರಿಯಾಗಿ, 'ಇದೇನಿದು ನೆಹ್ರೂ, ನಿಮ್ಮ ದೇಶ ಸ್ವಾತಂತ್ರ್ಯಾನಂತರದ ಎರಡು ದಶಕಗಳ ನಂತರವೂ ಇಷ್ಟು ಹಿಂದುಳಿದ ಸ್ಥಿತಿಯಲ್ಲಿಯೇ ಇದೆಯಲ್ಲಾ!' ಎಂದು ಲಘುವಾಗಿ ಛೇಡಿಸದರಂತೆ. ಇದರಿಂದ ಮುಜುಗರಕ್ಕೊಳಗಾದ ನೆಹ್ರೂ ಏನೋ ವಿವರಣೆ ನೀಡಿ ಸರಿಯಾದ ಉತ್ತರ ಕೊಡಲು ಸಂದರ್ಭಕ್ಕಾಗಿ ಕಾಯುತ್ತಿದ್ದರಂತೆ.

ಆ ಸಂದರ್ಭ ಮರು ವರ್ಷ ಇದೇ ಈ ಇಬ್ಬರು ರಷ್ಯಾದ ಮಾಸ್ಕೋ ನಗರದ ಮೇಲೆ ವಿಮಾನ ಯಾನ ಮಾಡುವ ಸಮಯದಲ್ಲಿ ಒದಗಿ ಬಂದೇ ಬಿಟ್ಟಿತು. ನೆಹ್ರೂ ಕೆಳಗೆ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದ್ದಂತೆ ಅಲ್ಲಿಯೂ ಕೆಲವರು ಬಯಲಲ್ಲಿ ಶೌಚಕ್ಕೆ ಕೂತಿದ್ದು ಕಂಡು ಖುಷಿಯಿಂದ, 'ಕೆಳಗೆ ನೋಡಿ ಕ್ರುಶ್ಚೇವ್ ಸಾಹೇಬರೇ! ನಮ್ಮ ದೇಶದಲ್ಲಿ ಆ ದೃಶ್ಯ ಕಂಡದ್ದು ಗ್ರಾಮಾಂತರ ಪ್ರದೇಶದಲ್ಲಾದರೆ, ನಿಮ್ಮ ದೇಶದ ರಾಜಧಾನಿಯಲ್ಲೇ ಇದು ನಡೆದಿದೆಯಲ್ಲಾ!' ಎಂದು ಕೆಣಕಿದರಂತೆ. ಇದರಿಂದ ಗಾಬರಿಯಾದ ಕ್ರುಶ್ಚೇವ್ ಪ್ರಯಾಣ ರದ್ದು ಮಾಡಿ ಕಛೇರಿಗೆ ಬಂದು ತಾವು ಕಂಡ ದೃಶ್ಯದ ಬಗ್ಗೆ ಶೀಘ್ರ ಗತಿಯ ತನಿಖೆಗೆ ಆದೇಶಿಸದರಂತೆ. ಒಂದು ತಾಸಿನಲ್ಲೇ ಸಿದ್ಧವಾಗಿ ಬಂದ ತನಿಖಾ ವರದಿಯಲ್ಲಿ ಇದ್ದ ಸಂಗತಿ ಇದು: ಹಾಗೆ ಬಯಲಲ್ಲಿ ಶೌಚಕ್ಕೆ ಕೂತವರೆಲ್ಲಾ ಭಾರತದ ರಾಯಭಾರ ಕಛೇರಿಯ ಸಿಬ್ಬಂದಿ!

**–ಕಿಡಿಗೇಡಿ**

# ತಿಂಗಳ ವಿಶೇಷ ಕನ್ನಡ-ಕರ್ನಾಟಕ : ೨೦೧೨



ಮತ್ತೆ ನವೆಂಬರ್ ಬಂದಿದೆ. ಕನ್ನಡಮ್ಮನ ಭಜನೆ, ಉತ್ಸವಗಳು ಇನ್ನೊಂದು ತಿಂಗಳು ಎಡೆಬಿಡದೆ ಭರ್ಜರಿಯಾಗಿ ನಡೆಯಲಿವೆ. ಈ ಹಿಂದೆ ಸಹಜ ಸಂಭ್ರಮದಂತೆ ಕಾಣುತ್ತಿದ್ದ ಈ ಆಚರಣೆಗಳು ಈಗ ವ್ಯಂಗ್ಯ-ಕಟಕಿಗಳಂತೆ ಕಾಣತೊಡಗಿವೆ. ಕಾರಣ, ಇದೆಲ್ಲ ಶಕ್ತಿ ಪ್ರತಿಮೆಯೇ ಇಲ್ಲದ ಗುಡಿ ಮುಂದಿನ ಭಜನೆಯಾಗಿಬಿಟ್ಟಿದೆ. ಕರ್ನಾಟಕದಲ್ಲಿ ಕನ್ನಡ ಕಾಣೆಯಾಗತೊಡಗಿದೆ. ಇದು ಹುಸಿ ಕೂಗು;ಕನ್ನಡ ಎಂಬುದು ಬದಲಾಗುತ್ತಿದೆಯಷ್ಟೆ ಎನ್ನುವವರಿದ್ದಾರೆ. ಆದರೆ ಇದು ಅತ್ಯಾಚಾರ ಅನಿವಾರ್ಯವಾದಾಗ ಒಪ್ಪಿಕೊಂಡು ಹೊಂದಿಕೊಂಡು ಹೋಗಬೇಕೆನ್ನುವ ನಿರ್ಲಜ್ಜರ ಜಾಣ ಮಾತಿಗೆ ಸಮವಷ್ಟೆ.

ಕನ್ನಡ ತನ್ನ ದೀರ್ಘ ಇತಿಹಾಸ-ಪರಂಪರೆಯುದ್ದಕ್ಕೂ ಹೊಸ ಕಾಲ ಮತ್ತು ಸವಾಲುಗಳಿಗೆ ತನ್ನನ್ನು ದಿಟ್ಟವಾಗಿ ಒಡ್ಡಿಕೊಳ್ಳುತ್ತಲೇ ಬಂದಿದೆ. ಆ ಮೂಲಕ ಹೊಸ ಸತ್ವ ಮತ್ತು ಚೆಲುವುಗಳನ್ನು ಪಡೆದುಕೊಳ್ಳುತ್ತಾ ತನ್ನ ಬೇರುಗಳನ್ನು ಗಟ್ಟಿ ಮಾಡಿಕೊಳ್ಳುವ ವಿವೇಕ-ಜಾಣ್ಮೆಗಳನ್ನು ತೋರುತ್ತಾ ಬಂದಿದೆ. ಆದರೆ ಈಗ ಜಾಗತೀಕರಣವೆಂಬ ಮೋಹಿನಿಯ ವಯ್ಯಾರ-ಲಾವಣ್ಯಗಳ ಎದುರು ಅದು ತನ್ನ ಬೇರುಗಳನ್ನೇ ಸಡಿಲಿಸಿಕೊಳ್ಳುವಂತಹ ಶೀಲಹರಣದ ಅಪಾಯಕ್ಕೆ ಸಿಕ್ಕಿದೆ. ಎಂದೂ ಕಾಣದಂತಹ ಸುಖ-ಸಂಪತ್ತುಗಳು ಸುಲಭವಾಗಿ ಬೇಕೆಂದರೆ ನಿನ್ನ ಭಾಷೆಯನ್ನು ಬಿಟ್ಟು ಬಾ ಎಂದು ನೇರ ಮತ್ತು ಮುಕ್ತ ಆಹ್ವಾನ ನೀಡುತ್ತಿರುವ ಈ ಮೋಹಿನಿಯ ಮಾಯೆಗೆ ಸಿಕ್ಕ ಕನ್ನಡಿಗ ತನ್ನ ಭಾಷೆಯನ್ನು ಕಳೆದುಕೊಂಡ ಮನುಷ್ಯ ಅಂತಿಮವಾಗಿ ಏನಾಗುತ್ತಾನೆ, ಆ ಸುಖ-ಸಂಪತ್ತುಗಳ ಅನುಭೋಗ ಯಾವ ಗುಣಮಟ್ಟದ್ದಾಗಿರುತ್ತದೆ ಮತ್ತು ಇದರಿಂದುಂಟಾಗುವ ಅನಾಹುತಗಳ ವೈಯುಕ್ತಿಕ ಮತ್ತು ಸಾಮುದಾಯಿಕ ನೆಲೆಗಳಲ್ಲಿನ ಪರಿಣಾಮಗಳಾದರೂ ಎಂಬ ಪರಿವೆಯಿಲ್ಲದೆ 'ವಿಶ್ವ ಪ್ರಜೆ'ಯಾಗುವ ಉನ್ನತ ಮತ್ತು ಉದಾತ್ತವೆಂದು ಹೇಳಲಾಗುವ ಗುರಿಯತ್ತ ಧಾವಿಸುತ್ತಿದ್ದಾನೆ. ಆದರೆ ನೆಲ ಮತ್ತು ಅದರ ಬೇರು ಕಳೆದುಕೊಂಡ 'ವಿಶ್ವ ಪ್ರಜೆತನ' ಎಂದರೆ ಗಾಳಿ ಬಂದೆಡೆ ತೂರಿ ಹೋಗುವ ಕಸದ ರಾಶಿಯಷ್ಟೆ ಎಂಬುದು ಅವನಿಗೆ ಗೊತ್ತಿಲ್ಲವೆ?

ಇದೆಲ್ಲ ಬೆಂಗಳೂರಿನಂತಹ ನಗರಗಳನ್ನು ನೋಡಿ ಆಡುವ ಮಾತು; ಗ್ರಾಮಾಂತರ ಪ್ರದೇಶ ನೋಡಿ ಎನ್ನುವವರೂ ಇದ್ದಾರೆ. ಕರ್ನಾಟಕದ ಮೂರನೇ ಒಂದು ಭಾಗ ಇಂದು ಬೆಂಗಳೂರಿನಲ್ಲಿದೆ ಮತ್ತು ಅದು ಕರ್ನಾಟಕದ ಹೃದಯ ಭಾಗ ಎಂಬುದನ್ನು ನಾವು ಮರೆಯಬಾರದು. ಅದಕ್ಕಿಂತ ಮುಖ್ಯವಾಗಿ ಇಂದು ಗ್ರಾಮಾಂತರ ಎಂಬುದೂ ಏನಾಗಿದೆ, ಎತ್ತ ಮುಖ ಮಾಡಿದೆ ಎಂಬುದನ್ನು ನೋಡಬೇಕು. ಇದರ ಸೂಚಕವಾಗಿ ಅಲ್ಲಿನ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳು ಏನಾಗಿವೆ ನೋಡಿ. ನಗರಗಳಲ್ಲಿ ಆರಂಭವಾದ ಈ ಕನ್ನಡ ಶಾಲೆಗಳ ನಿರ್ನಾಮ ಈಗ ಗ್ರಾಮಾಂತರದಲ್ಲೂ ಆರಂಭವಾಗಿದೆ. ಪ್ರಾಥಮಿಕ ಕಲಿಕೆಯ ಹಂತದಲ್ಲಿ ಬೇಡವಾದ ಭಾಷೆ ಲೋಕ ಗ್ರಹಿಕೆಯ ಭಾಷೆಯಾಗಿ ಬೇಡವಾದ ಭಾಷೆಯೆನಿಸಿ ಕೊನೆಗೆ ಇಂದ್ರಿಯಗಳನ್ನು ಕಳೆದುಕೊಂಡ ಭಾಷೆಯಾಗುತ್ತದೆ. ಇಂದು ಕನ್ನಡ ಅಂಗವಿಕಲ ಭಾಷೆಯಾಗಿ ನಮ್ಮ ಆಧುನಿಕ ಮಾಧ್ಯಮಗಳಲ್ಲಿ, ನಮ್ಮ ಮಕ್ಕಳ ಬಾಯಲ್ಲಿ ಬಳಕೆಯಾಗುತ್ತಿರುವ ರೀತಿಗಳನ್ನು ನಾವು ನಿರ್ವಣ್ಣರಾಗಿ ನೋಡುತ್ತಿದ್ದೇವೆ. ಇದನ್ನೇ ನಮ್ಮ 'ಜಾಗತಿಕ'ಗೊಂಡ ಜಾಣ ಭಾಷಾ ತಜ್ಞರು 'ಕನ್ನಡ ಎಲ್ಲೂ ಹೋಗಿಲ್ಲ; ಬದಲಾಗಿದೆ ಅಷ್ಟೆ!' ಎಂದು ಹೇಳುತ್ತಿರುವುದು. ಅಂಗವಿಕಲತೆಯನ್ನೇ ಒಂದು ಹೊಸ ಸೌಂದರ್ಯವನ್ನಾಗಿ ನೋಡಬಲ್ಲ ಹೊಸ ಸೌಂದರ್ಯ ಮೀಮಾಂಸಕರಿವರು!

ಆದರೆ ನಮ್ಮ ಮಕ್ಕಳು ಇಂಗ್ಲಿಷ್ ಊರುಗೋಲುಗಳಲ್ಲಿ ಅದೇ ಸಹಜ ನಡಿಗೆಯೆಂಬಂತೆ ಸಂಭ್ರಮದಿಂದ ಓಡಾಡುತ್ತಿರುವುದನ್ನು ನೋಡುವುದು ಒಂದು ದಯನೀಯ ದೃಶ್ಯವೇ ಆಗಿದೆ. ಆದರೆ ಇದು ಕೆಲವರಿಗೆ ಹೆಮ್ಮೆಯ ವಿಷಯವೇ ಆಗಿಬಿಟ್ಟಿದೆ. ಅದೇ ಇಂದಿನ ದುರಂತವಾಗಿದೆ. ಹಳೆಯ ವಸಾಹತುಶಾಹಿ ಸೃಷ್ಟಿಸಿದ ವಿಸ್ಮೃತಿಗಿಂತ ಈ ನವ ವಸಾಹತುಶಾಹಿ ಸೃಷಿಸಿರುವ ಈ ವಿಸ್ಮೃತಿ ಭೀಕರವಾಗಿದೆ. ಏಕೆಂದರೆ ಇದು ಜನಸಾಮಾನ್ಯರನ್ನಷ್ಟೇ ಅಲ್ಲ, ನಮ್ಮ ಬಹುತೇಕ ಬುದ್ಧಿಜೀವಿ-ಚಿಂತಕರನ್ನೂ ಮರಳುಗೊಳಿಸಿದೆ. ಕಳೆದ ಐದು ವರ್ಷಗಳಲ್ಲಿ ಪ್ರಾಥಮಿಕ ಶಾಲಾ ಹಂತದಲ್ಲೇ ಇಂಗ್ಲಿಷ್ ಕಲಿಸುವ ಆಳುವ ವ್ಯವಸ್ಥೆಯ ಹುನ್ನಾರಕ್ಕೆ ಇವರು ಬಲಿಬಿದ್ದ ಪರಿಯೇ ಇದಕ್ಕೆ ಸಾಕ್ಷಿ. ಇದರ ಪರಿಣಾಮವಾಗಿ ಇಂದು ಹೋಬಳಿ ಮಟ್ಟದಲ್ಲೂ, ಯಾರಾದರೂ ತಮ್ಮ ಮಕ್ಕಳನ್ನು ಕನ್ನಡ ಶಾಲೆಗೆ ಕಳಿಸಲಿಚ್ಛಿಸಿದರೂ, ಒಂದು ಒಳ್ಳೆಯ ಕನ್ನಡ ಶಾಲೆ ಕಾಣದಂತಹ ಪರಿಸ್ಥಿತಿ ಕಳೆದೈದು ವರ್ಷಗಳಲ್ಲಿ ನಿರ್ಮಾಣವಾಗಿದೆ.

ಇ ದೃಷ್ಟಿಯಿಂದ ಇಂದು ಕನ್ನಡಪರ ಹೋರಾಟ ಎನ್ನುವುದೇ ಒಂದು ಹುಸಿ ಹೋರಾಟವೆನಿಸಿಬಿಟ್ಟಿದೆ. ಅದು, ಅಣಕು ಹೋರಾಟದಂತೆ ಕಾಣುತ್ತಾ ಕೆಲವರಲ್ಲಿ ಮರುಕವನ್ನೂ ಇನ್ನು ಕೆಲವರಲ್ಲಿ ನಗೆಯನ್ನೂ ಹುಟ್ಟಿಸುವಂತಾಗಿದೆ. ಕನ್ನಡ ಶಾಲೆಗಳ ನಿರ್ನಾಮವನ್ನು ಕುರುಡರಂತೆ ನೋಡುತ್ತಾ ಕೂತ ಹೋರಾಟಗಾರರು ಕನ್ನಡಪರ ಹೋರಾಟಗಾರರು ಹೇಗಾದಾರು? ಸದಾ ಅನ್ಯ ಭಾಷಾ ಸಮುದಾಯಗಳಲ್ಲೇ ಕನ್ನಡ ವಿರೋಧಿ ಪಿತೂರಿಗಳನ್ನು ಕಾಣುತ್ತಾ ಕೆಚ್ಚು ಹುಟ್ಟಿಸಿಕೊಳ್ಳುವ ಈ ವೃತ್ತಿಪರ ಹೋರಾಟಗಾರರಿಗೆ ತಮ್ಮ ಹೃದಯದಾಳದಲ್ಲೆ ಕನ್ನಡ ಚೈತನ್ಯ ಬತ್ತಿ ಹೋಗುತ್ತಿರುವುದು ಅನುಭವಕ್ಕೆ ಬರುವುದಾದರೂ ಹೇಗೆ? ಬರೀ ಹೊರನೋಟ ಒಳನೋಟವನ್ನೇ ಬತ್ತಿಸಿಬಿಡಬಲ್ಲುದು.

ಈ ಹೋರಾಟಗಾರರು ಮತ್ತು ಇವರನ್ನು ಎತ್ತಿಕಟ್ಟಿರುವ ಪುಢಾರಿಗಳು ನಡೆಸಿರುವ ಕಾವೇರಿ ಹೋರಾಟವನ್ನೇ ನೋಡಿ. ನಾವು ಒಂದು ಸಾಂವಿಧಾನಿಕ ಒಕ್ಕೂಟ ವ್ಯವಸ್ಥೆಯಲ್ಲಿ ಬದುಕುತ್ತಿದ್ದೇವೆ ಎಂಬುದರ ಪರಿವೆಯೇ ಇಲ್ಲದಂತೆ ತೋರುವ ಇವರಿಗೆ ಒಕ್ಕೂಟ ಮಟ್ಟದ ನ್ಯಾಯ ವೇದಿಕೆಗಳಲ್ಲಿ ನಮ್ಮ ವಾದವನ್ನು ರಾಜ್ಯದ ಹಿತಕ್ಕೆ ಕಟಿಬದ್ಧವಾಗಿ ಮಂಡಿಸಬಲ್ಲರೆಂಬ ನಂಬಿಕೆ ಹುಟ್ಟಿಸಬಲ್ಲ ಕನ್ನಡ ಅಧಿಕಾರಿ ಮತ್ತು ವಕೀಲ ವೃಂದವೊಂದನ್ನು ಕನ್ನಡ ರಾಜಕಾರಣ ಸೃಷ್ಟಿಸಲಾಗಿಲ್ಲವೇಕೆ ಎಂದು ಒಳನೋಡಿಕೊಳ್ಳುವ ವಿವೇಕವಾಗಲೀ, ವ್ಯವಧಾನವಾಗಲೀ ಇಲ್ಲದೇ ಹೋಗಿದೆ. ಬದಲಿಗೆ ಈ ಹತಾಶ ಅಸಹಾಯಕತೆಗಳ ಬಹಿರಂಗ ಪ್ರದರ್ಶನವಾಗಿ ತಮ್ಮ ರಾಜ್ಯದ ವಾದವನ್ನು ಸಮರ್ಥವಾಗಿ ಮಂಡಿಸಿ ನ್ಯಾಯ ಪಡೆದಿರುವ ತಮಿಳ್ನಾಡಿನ ಅಪ್ಪಟ ತಮಿಳು ರಾಜಕಾರಣದ ಪ್ರತೀಕವೆನಿಸಿರುವ ಆ ರಾಜ್ಯದ ಮುಖ್ಯಮಂತ್ರಿ ಪ್ರತಿಕೃತಿಯನ್ನು ದಹಿಸುತ್ತಿದ್ದಾರೆ. ಇಂತಹ ಅವಾಹಿತ ಆವೇಶದ ಭರದಲ್ಲಿ ಈ ವಿವಾದದ ಮೂಲದಲ್ಲಿರುವ ಮೂಲ ಸಮಸ್ಯೆಯೇ ಅರಿವಿಗೆ ಬಾರದೇ ಹೋಗಿದೆ: ನಮ್ಮ ಕಾವೇರಿ ಕೊಳ್ಳದಲ್ಲಿ ಇತ್ತೀಚಿನ ವರ್ಷಗಳಲ್ಲಿ ಮಳೆಯೇಕೆ ಕ್ರಮ ತಪ್ಪಿ ಅಸ್ತವ್ಯಸ್ತವಾಗಿದೆ ಎಂಬ ಪ್ರಶ್ನೆಯನ್ನೇ ಕೇಳಿಕೊಳ್ಳುವ ತಿಳುವಳಿಕೆಯೇ ಕನ್ನಡದ ಸಾಮುದಾಯಿಕ ಪ್ರಜ್ಞೆಯಲ್ಲಿ ಮೂಡಲಾಗದಂತಹ ಗರ ಕನ್ನಡ ಸಮಾಜಕ್ಕೆ ಬಡಿದಿದೆ. ಇದಕ್ಕೆ ಕನ್ನಡ ಸರ್ಕಾರ, ಕನ್ನಡ ಸಾಹಿತ್ಯ ಸಂಘ-ಸಂಸ್ಥೆ-ಪರಿಷತ್ತುಗಳು ಮತ್ತು ಬಿಟ್ಟಿ ಕೂಳು ತಿನ್ನುತ್ತಿರುವ ವಿವಿಧ ಪ್ರಾಧಿಕಾರ-ಅಕಾಡೆಮಿಗಳ ಹೊಣೆಗೇಡಿತನಗಳೂ ಕಾರಣವಾಗಿದೆ.

ಈ ದುರಂತಮಯ ಸನ್ನಿವೇಶದ ಹಿಂದಿರುವುದು ಕನ್ನಡ ಭಾಷೆಯ ಸೂಕ್ಷ್ಮತೆಗಳ ಮತ್ತು ಆ ಮೂಲಕ ಕನ್ನಡ ವ್ಯಕ್ತಿತ್ವ ಮತ್ತು ಪ್ರಜ್ಞೆಯ ಸೂಕ್ಷ್ಮತೆಗಳ ನಾಶದ ಪ್ರಶ್ನೆಗಳು. ಇವನ್ನು ನಮ್ಮ ಈ ಸಂಚಿಕೆಯಲ್ಲಿ ಕನ್ನಡ ಶಾಲೆ, ಶಿಕ್ಷಣಗಳ ಅವನತಿಯ ಪ್ರಶ್ನೆಯ ಮೇಲೆ ವಿಶೇಷ ಬೆಳಕು ಚೆಲ್ಲುವಂತಹ ಲೇಖನಗಳ ಮೂಲಕ ಚರ್ಚೆಗೆ ತೆರೆದಿಡುವ ಪ್ರಯತ್ನ ಮಾಡಲಾಗಿದೆ. ನಿಮ್ಮ ಅಭಿಪ್ರಾಯ ತಿಳಿಸಿ-ಸಂಪಾದಕ

# ಬಡ ಮಕ್ಕಳ ಶಿಕ್ಷಣಕ್ಕೆ ಶಾಶ್ವತ ವಿದಾಯ?(ಸಾಮಾಜಿಕ ಕಾರ್ಯಕರ್ತೆಯೊಬ್ಬಳ ಟಿಪ್ಪಣಿಗಳು)

**–ರೂಪ ಹಾಸನ**



ಗ್ರಾಮೀಣ ಪ್ರದೇಶದ ಪುಟ್ಟ ಪುಟ್ಟ ಮಕ್ಕಳು ರಸ್ತೆಗಳೇ ಇಲ್ಲದ ಕುಗ್ರಾಮಗಳಿಂದ ಗುಡ್ಡ, ನದಿ, ಕಾಡನ್ನು ದಾಟಿ ಮೈಲಿಗಟ್ಟಲೆ ನಡೆದು ದೂರದ ಶಾಲೆ ಸೇರುವ ಚಿತ್ರ, ಇಲ್ಲವೇ ಶಾಲೆ ಬಿಟ್ಟು ಮನೆಯ ಅಂಗಳದಲ್ಲಿ ಕಸ ಮುಸುರೆ ಮಾಡುತ್ತಿರುವ ಹೆಣ್ಣುಮಕ್ಕಳ ಹಾಗೂ ಬೀದಿಗಳಲ್ಲಿ ಚಿಂದಿ ಆಯುತ್ತಿರುವ ಮಕ್ಕಳ ಚಿತ್ರ ಇತ್ತೀಚೆಗೆ ಮನಸಿನಲ್ಲಿ ಮೂಡುತ್ತಿರುತ್ತದೆ.

ರಾಜ್ಯದಲ್ಲಿ ಶಿಕ್ಷಣ ಹಕ್ಕು ಕಾಯ್ದೆಯನ್ನು ಜಾರಿಗೆ ತಂದ ಈ ವರ್ಷವೇ ಇಂತಹ ಚಿತ್ರಗಳು ಕಾಡಲು ಕಾರಣವಿದೆ. ೨೦೧೧ರ ಜನಗಣತಿಯಂತೆ ರಾಜ್ಯದಲ್ಲಿ ಇನ್ನೂ ೧,೧೧,೦೦೦ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಇದು ಹೋಗಲಿ, ಶಿಕ್ಷಣ ಇಲಾಖೆಯ ಮಾಹಿತಿ ಪ್ರಕಾರವೇ ೨೦೧೦–೧೧ರಲ್ಲಿ ೫೯,೮೪೧ ಮಕ್ಕಳಿಗೆ ಶಾಲೆಯ ದಿಕ್ಕು ಕಂಡಿರಲಿಲ್ಲ. ಕಳೆದ ವರ್ಷದಿಂದ ಸರ್ಕಾರಿ ಶಾಲೆಗಳನ್ನು ಮುಚ್ಚುವ ಭರಾಟೆಯಿಂದಾಗಿ ೨೦೧೧–೧೨ರ ಮಾಹಿತಿಯಂತೆ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ ದ್ವಿಗುಣವಾಗಿ ೬೮,೩೦೧ರಷ್ಟಾಗಿದೆ! ಉಚಿತ–ಕಡ್ಡಾಯ ಶಿಕ್ಷಣದ ಡಂಗೂರ ಬಾರಿಸುತ್ತಿರುವ ಸರ್ಕಾರಕ್ಕೆ ಈ ಮಕ್ಕಳಿಗೆ ಶಿಕ್ಷಣ ಕೊಡಬೇಕೆಂಬುದು ಏಕೆ ಮರೆತು ಹೋಗಿದೆ?

ಶಾಲೆಯಿಂದ ಹೊರಗುಳಿದ ಮಕ್ಕಳ ಕುರಿತು ವಿಶೇಷ ಅಧ್ಯಯನ ನಡೆಸಿರುವ 'ಕೇಂದ್ರ ಸಂಪನ್ಮೂಲ ಸಚಿವಾಲಯ'ದ ಅಧಿಕಾರಿಗಳ ತಂಡ ಪೂರ್ಣ ಪ್ರಮಾಣದ ಶಾಲಾ ದಾಖಲಾತಿ ಸಾಧ್ಯವಾಗಬೇಕಾದರೆ ದೇಶಾದ್ಯಂತ ಇನ್ನೂ ಸುಮಾರು ೨೦ ಸಾವಿರ ಸರ್ಕಾರಿ ಶಾಲೆಗಳನ್ನು, ಅದರಲ್ಲೂ ಕರ್ನಾಟಕದಲ್ಲೇ ಮುಂದಿನ ೫ ವರ್ಷಗಳಲ್ಲಿ ಇನ್ನೂ ೧೨೪೧ ಶಾಲೆ ತೆರೆಯುವುದು ಅತ್ಯಂತ ಅವಶ್ಯಕವೆಂದು ಈ ವರ್ಷದ ಆರಂಭದಲ್ಲೇ ಕೇಂದ್ರ ಸರ್ಕಾರಕ್ಕೆ ವರದಿ ನೀಡಿದೆ. ಇತ್ತ ಶಾಲೆ ವಿಲೀನ ಹಾಗೂ ಪುನಾರಚನೆಯ ಹೆಸರಿನಲ್ಲಿ ದೆಹಲಿಯ ಪ್ರೊ. ಆರ್. ಗೋವಿಂದ ಅವರ ನೇತೃತ್ವದ ಸಮಿತಿ ಸರ್ಕಾರಿ ಶಾಲೆಯಲ್ಲಿ ಮಕ್ಕಳ ಪ್ರಮಾಣ ಕಡಿಮೆಯಾಗಲು 'ಜನನ ಪ್ರಮಾಣದಲ್ಲಿನ ಕುಸಿತ'ವೇ ಪ್ರಮುಖ ಕಾರಣವೆಂಬ ಅವೈಜ್ಞಾನಿಕ ವರದಿ ತಯಾರಿಸಿ, ಸದ್ಯ ೧೨,೬೪೦ ಶಾಲೆಗಳನ್ನು ಮುಚ್ಚಿ ಬಡ ಮಕ್ಕಳ ಶಿಕ್ಷಣಕ್ಕೆ ಎಳ್ಳುನೀರು ಬಿಡಲು ತಯಾರಾಗಿದೆ. ನಾವೀಗ ಯಾವ ವರದಿ ಒಪ್ಪಬೇಕು?

ನೆನಪು, ಕಳೆದ ವರ್ಷದ ಅಕ್ಟೋಬರ್ ತಿಂಗಳಿಗೆ ಓಡುತ್ತಿದೆ.... ಕಡಿಮೆ ಮಕ್ಕಳಿರುವ ಸುಮಾರು ೩೦೦೦ ಸರ್ಕಾರಿ ಶಾಲೆಗಳನ್ನು ವಿಲೀನಕ್ಕಾಗಿ ಗುರುತಿಸುವ ಆದೇಶ ಮಾಧ್ಯಮಗಳಲ್ಲಿಯೂ ಸುದ್ದಿಯಾಗದೇ ಸದ್ದಿಲ್ಲದೇ ಜಾರಿಯಾಗಿದ್ದು ಗಮನಕ್ಕೆ ಬಂದು, ಗ್ರಾಮೀಣ, ಅದರಲ್ಲೂ ಮುಖ್ಯವಾಗಿ ತಳ ಸಮುದಾಯ ಹಾಗೂ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಇದರಿಂದಾಗುವ ಹಿನ್ನೆಡೆಯನ್ನು ಯೋಚಿಸಿಯೇ ಆತಂಕವಾಗಿತ್ತು.

ತಕ್ಷಣ ದೇವನೂರ ಮಹಾದೇವ ಅವರನ್ನು ಸಂಪರ್ಕಿಸಿ ಸುದ್ದಿ ತಿಳಿಸಿದಾಗ, ಅವರು ಹಿರಿಯ ವಕೀಲರಾದ ಪ್ರೊ.ರವಿವರ್ಮ ಕುಮಾರ್ ಅವರೊಂದಿಗೆ ಚರ್ಚೆ ನಡೆಸಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿಯ ಕೇಸು ದಾಖಲಿಸಿದರು. ಶಿಕ್ಷಣ ಹಕ್ಕು ಕಾಯ್ದೆಯನ್ವಯ ಒಂದು ಕಿ.ಮೀ. ಅಂತರದಲ್ಲಿ ಕಿರಿಯ ಪ್ರಾಥಮಿಕ ಶಾಲೆ, ೩ ಕಿ.ಮಿ. ಅಂತರದಲ್ಲಿ ಹಿರಿಯ ಪ್ರಾಥಮಿಕ ಶಾಲೆ ಇರಬೇಕೆಂಬ ನಿಯಮವನ್ನು ನ್ಯಾಯಾಲಯ ಎತ್ತಿ ಹಿಡಿದು, "ಸರ್ಕಾರಿ ಶಾಲೆಯ ಮುಚ್ಚುವಿಕೆಯಿಂದ ಯಾವುದೇ ಕಾರಣಕ್ಕೂ ಮಕ್ಕಳ ಶಿಕ್ಷಣ ಹಕ್ಕು



ಕಾಯ್ದೆಯ ಉಲ್ಲಂಘನೆಯಾಗಬಾರದೆಂದು, ನಿಗದಿತ ಅಂತರಕ್ಕಿಂತ ದೂರವಿರುವ ಶಾಲೆಗಳಿಗೆ ಪ್ರಯಾಣಿಸಲು ಮಕ್ಕಳಿಗೆ 'ಉಚಿತ ಸಾರಿಗೆ ವ್ಯವಸ್ಥೆ' ಮಾಡಬೇಕೆಂದು" ಒತ್ತಿ ಹೇಳಿದೆ. ಜೊತೆಗೆ "ಗುಡ್ಡಗಾಡು ಹಾಗೂ ಭೌತಿಕ ಅಸಮತೋಲನಗಳಿರುವ ಪ್ರದೇಶಗಳಲ್ಲಿ ಶಾಲೆ ಮುಚ್ಚುವುದಿರಲಿ, ಮಕ್ಕಳ ವಾಸ ಸ್ಥಳದ ಹತ್ತಿರದಲ್ಲೇ ಶಾಲೆ ಪ್ರಾರಂಭಿಸಬೇಕೆಂದು, ಈ ನಿಯಮಗಳಿಗೆ ಬದ್ಧವಾಗದೇ ಶಾಲೆ ಮುಚ್ಚಿದರೆ ಅದು ನ್ಯಾಯಾಂಗ ನಿಂದನೆಯಾಗುತ್ತದೆ" ಎಂದು ಎಚ್ಚರಿಸಿದೆ. ಆದರೆ ಸರ್ಕಾರ ಇದುವರೆಗೆ ಮಕ್ಕಳಿಗೆ ಸಾರಿಗೆ ವ್ಯವಸ್ಥೆ ಕಲ್ಪಿಸದೆ, ಕಾಯ್ದೆ ಹಾಗೂ ತೀರ್ಪಿನಲ್ಲಿ ಉಲ್ಲೇಖಿತ ನಿಗದಿತ ಅಂತರವನ್ನೂ ಗಮನಿಸದೇ ಮನ ಬಂದಂತೆ ಶಾಲೆ ಮುಚ್ಚುತ್ತಿದೆ.

ಖಾಸಗಿ ವ್ಯಾಪಾರಿ ಶಿಕ್ಷಣಕ್ಕೆ ಹೂವಿನ ಹಾಸಿಗೆ ಹಾಸಿ, ತನ್ನದೇ ಸರ್ಕಾರಿ ವ್ಯವಸ್ಥೆಯನ್ನು ದುರ್ಬಲಗೊಳಿಸಿದ್ದರಿಂದಲೇ ಇಲ್ಲಿ ಮಕ್ಕಳು ಕಡಿಮೆಯಾಗುತ್ತಿದ್ದಾರೆಂದು ಸರ್ಕಾರ ಅರ್ಥ ಮಾಡಿಕೊಳ್ಳಬೇಕಿತ್ತು. ಶಿಕ್ಷಣ ಇಲಾಖೆಯ ದಾಖಲೆಗಳ ಪ್ರಕಾರವೇ ರಾಜ್ಯದಲ್ಲಿ ೧೩ಸಾವಿರ ಶಾಲೆಗಳಲ್ಲಿ ಶೌಚಾಲಯವಿಲ್ಲ. ೮೩೯೯ ಶಾಲೆಗಳಲ್ಲಿ ನೀರಿಲ್ಲ. ೨೯೧೦ ಶಾಲೆಗಳಿಗೆ ಆಟದ ಮೈದಾನವಿಲ್ಲ, ೬೬೩ಕ್ಕೂ ಹೆಚ್ಚು ಶಾಲೆಗಳಿಗೆ ಕಟ್ಟಡವೇ ಇಲ್ಲ. ೨೫೬ಕ್ಕೂ ಹೆಚ್ಚು ಶಾಲೆ ಶಿಥಿಲಾವಸ್ಥೆಯಲ್ಲಿವೆ. ಅರ್ಧದಷ್ಟೂ ಶಾಲೆಗಳಲ್ಲಿ ಮಕ್ಕಳು ಕುಳಿತುಕೊಳ್ಳುವ ಸಮರ್ಪಕ ಪೀಠೋಪಕರಣಗಳಿಲ್ಲ. ವರ್ಷಗಟ್ಟಲೆಯಿಂದ ಖಾಲಿ ಬಿದ್ದಿದ್ದ ೧೨,೦೦೦ ಶಿಕ್ಷಕರ ಹುದ್ದೆಗೆ ಮೊನ್ನೆಯಷ್ಟೇ ಸರ್ಕಾರ ಇದೇ ಮೊದಲ ಬಾರಿಗೆ ಅತಿಥಿ ಶಿಕ್ಷಕರನ್ನು ನೇಮಿಸಿಕೊಂಡು, ಇನ್ನೇನು ಸರ್ಕಾರಿ ಶಾಲೆಗಳನ್ನು ಶಾಶ್ವತವಾಗಿ ಮುಚ್ಚುವ ತನ್ನ ನಿರ್ಧಾರವನ್ನು ಅಧಿಕೃತಗೊಳಿಸಿದೆ! ಜೊತೆಗೆ ಪ್ರಾಥಮಿಕ ಶಾಲೆಗಳಲ್ಲಿ 'ಡಿ' ದರ್ಜೆ ನೌಕರರೂ ಇಲ್ಲದ್ದರಿಂದ, ಅವರು ಮಾಡಬೇಕಿದ್ದ ಎಲ್ಲ ಕೆಲಸಗಳ ಜೊತೆಗೆ ಶೌಚಾಲಯವನ್ನೂ ಮಕ್ಕಳೇ ಶುಚಿಗೊಳಿಸಬೇಕು! ಇಂಥಹ ಮೂಲಭೂತ ಸೌಕರ್ಯಗಳೂ ನೆಟ್ಟಗಿಲ್ಲದ ಶಾಲೆಗಳಿಗೆ ತೀರಾ ಅನಿವಾರ್ಯತೆ ಇಲ್ಲದೆ, ಒಂದಿಷ್ಟು ಅನುಕೂಲತೆ ಇರುವವರ್ಯಾರು ತಮ್ಮ ಮಕ್ಕಳನ್ನು ಸೇರಿಸಲು ಬಯಸುತ್ತಾರೆ?

ಇನ್ನೊಂದೆಡೆ, ದಶಕಗಳಿಂದ ನಮ್ಮ ಆಡಳಿತಶಾಹಿ ಹಾಗೂ ಅಧಿಕಾರಶಾಹಿ ತನ್ನನ್ನು ಒತ್ತೆ ಇಟ್ಟುಕೊಂಡು ಬಂದು ಬೃಹದಾಕಾರವಾಗಿ ಬೆಳೆಸಿರುವ ಖಾಸಗಿ ಶೈಕ್ಷಣಿಕ ವಲಯ! ಇದುವರೆಗೆ ಎಷ್ಟು ಅನುದಾನರಹಿತ ಪ್ರಾಥಮಿಕ ಖಾಸಗಿ ಶಾಲೆಗಳು ತಮ್ಮ 'ವ್ಯಾಪಾರ' ಪ್ರಾರಂಭಿಸಿವೆ ಎಂಬುದನ್ನು ಮಾಹಿತಿ ಹಕ್ಕು ಕಾಯ್ದೆಯ ಮೂಲಕ ವಿವರ ತರಿಸಿಕೊಂಡಾಗ... ೧೯೪ರಿಂದ ೨೦೦೩ರವರೆಗೆ ವರ್ಷಕ್ಕೆ ಸರಾಸರಿ ೩೦೦–೪೦೦ ಶಾಲೆಗಳು, ೨೦೦೪ರಿಂದ ೨೦೧೧ರವರೆಗೆ ೬೦೦–೭೦೦ ಶಾಲೆಗಳು ಹುಟ್ಟಿಕೊಂಡಿವೆ! ಸದ್ಯಕ್ಕೆ ೪೬,೪೦೦ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ೪೪, ೫೩, ೭೭೨ ಮಕ್ಕಳು ಕಲಿಯುತ್ತಿದ್ದರೆ, ಕೇವಲ ೧೨,೯೯ರಷ್ಟಿರುವ ಖಾಸಗಿ ಶಾಲೆಗಳಲ್ಲಿ ೨೯,೩೨,೩೦೬ ಮಕ್ಕಳು ಕಲಿಯುತ್ತಿದ್ದಾರೆ! ಒಂದು ಖಾಸಗಿ ಶಾಲೆಗೆ ಅನುಮತಿ ಪಡೆದು,

ಅಲ್ಲೇ ಪ್ರತಿಯೊಂದು ತರಗತಿಯ ೩-೪ ವಿಭಾಗಗಳನ್ನು ಮಾಡಿ 'ದಂಧೆ' ನಡೆಸುತ್ತಿರುವುದರಿಂದ ಅರ್ಧಕ್ಕೂ ಹೆಚ್ಚಿನ ಮಕ್ಕಳು ಖಾಸಗಿಯಲ್ಲಿ ಕಲಿಯುತ್ತಿದ್ದಾರೆ! ನಾವು ಸದ್ಯಕ್ಕೆ ಭರವಸೆ ಇಟ್ಟುಕೊಂಡಿರುವ ಶಿಕ್ಷಣ ಹಕ್ಕು ಕಾಯ್ದೆ-೨೦೦೯ ಕೂಡ ಖಾಸಗಿ ಪರವಾಗಿಯೇ ಇದ್ದು ಸರ್ಕಾರಿ ಶಾಲೆಗಳಿಗೆ ಆತಂಕಕಾರಿಯೇ ಆಗಿದೆ!

ಇದರೊಂದಿಗೆ ರಾಜ್ಯಾದ್ಯಂತ ಈಗಾಗಲೇ ೩೦೦೦ಕ್ಕೂ ಹೆಚ್ಚು ಅನಧಿಕೃತ ಶಾಲೆಗಳು ನಾಯಿಕೊಡೆಗಳಂತೆ ತಲೆ ಎತ್ತಿದ್ದು ಅಲ್ಲಿ ಕಲಿಯುತ್ತಿರುವ ಲಕ್ಷಕ್ಕೂ ಅಧಿಕ ಮಕ್ಕಳ ಕುರಿತು ಶಿಕ್ಷಣ ಇಲಾಖೆಯಲ್ಲಿ ಯಾವ ಮಾಹಿತಿಯೂ ಲಭ್ಯವಿಲ್ಲ. ಪ್ರತಿ ವರ್ಷ ಗುಟ್ಟಾಗಿ, ಇಂತಿಷ್ಟು ಎಂದು ನೈವೇದ್ಯ ಪಡೆಯುವುದನ್ನು ಬಿಟ್ಟು, ಪಾಪ ಇಲಾಖೆಗೆ ಇನ್ಯಾವ ನಿಯಂತ್ರಣವೂ ಇಲ್ಲ! ಪ್ರತಿ ಶೈಕ್ಷಣಿಕ ವರ್ಷದ ಆರಂಭದಲ್ಲಿ 'ಈ ಶಾಲೆಗಳು ಅನಧಿಕೃತ... ಇಲ್ಲಿಗೆ ಮಕ್ಕಳನ್ನು ಸೇರಿಸಬೇಡಿ.....' ಎಂದು ಶಾಲೆಗಳ ಪಟ್ಟಿಯನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡುವುದಷ್ಟೇ ಇಲಾಖೆಯ ಜವಾಬ್ದಾರಿ! ಸರಕಾರದ ಪರವಾನಗಿ ಪಡೆಯದೆ ಎಲ್ಲೆಂದರಲ್ಲಿ ತಲೆ ಎತ್ತುವ ಈ ಅನಧಿಕೃತ ಖಾಸಗಿ ಶಾಲೆಗಳು ಮನಬಂದಂತೆ ವಂತಿಗೆ-ಶುಲ್ಕ ವಸೂಲಿ ಮಾಡುತ್ತಾ, ಕಳಪೆ ಶಿಕ್ಷಣ ನೀಡುತ್ತಾ, ಯಾವುದೇ ಸರ್ಕಾರಿ ನಿಯಮಗಳಿಲ್ಲದೇ, ಶಿಕ್ಷಣ ಹಕ್ಕು ಕಾಯ್ದೆ-ಮೀಸಲಾತಿಯ ಗೊಡವೆ ಇಲ್ಲದೆ, ಭಾಷಾ ನೀತಿಯ ತಲೆಬಿಸಿಯೂ ಇಲ್ಲದೆ 'ದಂಧೆ' ನಡೆಸುತ್ತಿವೆ. ಇವುಗಳನ್ನು ಮುಟ್ಟುಗೋಲು ಹಾಕುವ ಇಚ್ಛೆ ಇಲ್ಲದೇ ಸರ್ಕಾರವೇ ಕೊಬ್ಬಿಸುತ್ತಿದೆ.

ಖಾಸಗಿ ಶಿಕ್ಷಣ ವ್ಯವಸ್ಥೆ ಇದ್ದರೂ ಸರ್ಕಾರಿ ನೀತಿ-ನಿಯಮಗಳ ನಿಯಂತ್ರಣಕ್ಕೆ ಒಳಪಟ್ಟು ಇರಬೇಕು. ಇಲ್ಲಿ ಖಾಸಗಿ ವಲಯವೇ ಸರ್ಕಾರಿ ಶಾಲೆಗಳನ್ನು ನುಂಗಿ ನೊಣೆಯುವ ಹಂತ ತಲುಪಿದೆ. ರಾಜ್ಯದಲ್ಲಿ ಖಾಸಗಿ ಶೈಕ್ಷಣಿಕ 'ವಲಯದ ಪಾಲುದಾರಿಕೆ ಎಷ್ಟು ಪ್ರಮಾಣದಲ್ಲಿರಬೇಕು? ಯಾವ ಸ್ವರೂಪದಲ್ಲಿರಬೇಕು? ಅದರ ಮೇಲೆ ಸರ್ಕಾರದ ಹಿಡಿತ ಹೇಗಿರಬೇಕು? ಎಷ್ಟಿರಬೇಕು? ಉಹುಃ... ಹುಡುಕಿದರೂ ಇದಕ್ಕೆ ಸಂಬಂಧಿಸಿದ ನೀತಿ ನಿಯಮವಾಗಲಿ, ಕಾಯ್ದೆಯಾಗಲಿ ರಾಜ್ಯದಲ್ಲಿ ಇಲ್ಲ. ನಿಜಕ್ಕೂ ಸರ್ಕಾರ ಜೀವಂತವಾಗಿದೆಯೇ?

ಮತ್ತೊಂದೆಡೆ, ಭಾಷಾ ನೀತಿಗೆ ಸಂಬಂಧಿಸಿದ ಕೇಸು ಹೈಕೋರ್ಟಿನಲ್ಲಿ ೮ ವರ್ಷಗಳನ್ನು ಸವೆಸಿ, ಕನ್ನಡ ಮಾಧ್ಯಮಕ್ಕೆಂದು ಪರವಾನಗಿ ಪಡೆದು ಆಂಗ್ಲಮಾಧ್ಯಮ ಬೋಧಿಸುವ ಖಾಸಗಿ ಶಿಕ್ಷಣ ಸಂಸ್ಥೆಗಳ ಪರವಾಗಿ ತೀರ್ಪಾಗಿದೆ.... ೨೦೦೮ರಲ್ಲಿ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟಿಗೆ ಕೇಸು ದಾಖಲಿಸಿದ್ದರೂ ೩ ವರ್ಷಗಳಿಂದ ತಾನೇ ವಕೀಲರನ್ನು ನೇಮಿಸದೇ ತನ್ನ ಭಾಷಾ ಪ್ರೀತಿಯನ್ನು ಮರೆದಿತ್ತು! ಈ ಬಾರಿ, ಹೋದ ತಿಂಗಳಷ್ಟೇ ವಾದ-ಪ್ರತಿವಾದಗಳು ಮುಗಿದಿದ್ದು, ಇದು ಎಲ್ಲಾ ಭಾರತೀಯ ಪ್ರಾದೇಶಿಕ ಭಾಷೆಗಳ ಮೇಲೆಯೂ ಪರಿಣಾಮ ಬೀರುವುದರಿಂದ ಕೇಂದ್ರ ಸರ್ಕಾರ ತನ್ನ ನಿಲುವು ವ್ಯಕ್ತಪಡಿಸಿದ ನಂತರ ತೀರ್ಪು ನೀಡಲು ಸುಪ್ರೀಂ ಕೋರ್ಟ್ ಕಾಯುತ್ತಿದೆ. ತೀರ್ಪು ಮಾತೃಭಾಷೆಯ ಪರವಾಗಿ ಬಂದರೆ, ಶಿಕ್ಷಣ ಕ್ಷೇತ್ರದಲ್ಲಿ ಗುರುತರ ಬದಲಾವಣೆಯಾಗಿ ಶಾಲೆಗಳ ಜೊತೆಗೇ ಕನ್ನಡವೂ ಕೊಂಚ ಉಸಿರಾಡಬಹುದೇನೋ!

ಆದರೆ ಸರ್ಕಾರದ ಈ ಸದ್ಯದ 'ಮುಚ್ಚಾಟ'ದ ವೇಗ ನೋಡಿದರೆ, ಬಡ ಮಕ್ಕಳ ಶಿಕ್ಷಣದಲ್ಲಿ ಉಚಿತ, ಕಡ್ಡಾಯವೆನ್ನುವುದು ಶಾಶ್ವತವಾಗಿ 'ಗೋವಿಂದ' ಆಗುತ್ತದೇನೋ!?

---

# ಕನ್ನಡ ವಿದ್ಯಾರ್ಥಿಯ ಹೆಮ್ಮೆಯ ಕಥನ!

-ಬಿ. ಜಯವಂತ ಕಾಮತ್

**ನಾ**ನು ಹುಟ್ಟಿದ್ದು ಆಗಿನ ದಕ್ಷಿಣ ಕನ್ನಡ ಜಿಲ್ಲೆಯ ಬೇಲಾಡಿಯೆಂಬ ಕುಗ್ರಾಮದಲ್ಲಿ. ಕಳೆದ ಎಪ್ಪತ್ತರ ದಶಕದಲ್ಲಿ ಕರಾವಳಿ ಪತ್ರಿಕೆಯೊಂದರ ಸಮೀಕ್ಷೆಯ ಪ್ರಕಾರ ಈ ಹಳ್ಳಿಯು ದಕ್ಷಿಣ ಕನ್ನಡ ಜಿಲ್ಲೆಯ ತೀರಾ ಹಿಂದುಳಿದ ೨೦ ಹಳ್ಳಿಗಳಲ್ಲಿ ಒಂದಾಗಿತ್ತು. ಯಾವುದೇ ಮೂಲಭೂತ ಸೌಕರ್ಯಗಳಿಲ್ಲದ ಈ ಗ್ರಾಮೀಣ ಪ್ರದೇಶದಲ್ಲಿ, ಮನೆಯಿಂದ ಸುಮಾರು ೨ ಕಿ. ಮಿ. ದೂರದಲ್ಲಿ ತಲೆಯೆತ್ತಿದ್ದ ಪ್ರಾಥಮಿಕ ಶಾಲೆಯಲ್ಲಿ ನಾನು ವಿದ್ಯಾಭ್ಯಾಸವನ್ನು ಪಡೆದೆ. ಚಿಮಿಣೀ ದೀಪ, ಮೊಂಬತ್ತಿಗಳಲ್ಲಿ ನನ್ನ ಶಿಕ್ಷಣ ನಡೆಯಿತು. ಮಳೆಗಾಲದಲ್ಲಂತು ಅಹೋರಾತ್ರಿ ಸುರಿಯುತ್ತಿದ್ದ ಜಡಿಮಳೆಗೆ ಮನೆಯಿಂದ ಹೊರಗೆ ಕಾಲಿಡುವುದೇ ದುಸ್ತರ. ಅಲ್ಪ ಸ್ವಲ್ಪ ಕಲಿತಿದ್ದ ನನ್ನ ತಂದೆ, ತಾಯಂದಿರಿಗೆ ಸಹಜವಾಗಿಯೇ ತಮ್ಮ ಮಕ್ಕಳು ಉತ್ತಮ ಶಿಕ್ಷಣ ಪಡೆಯಬೇಕೆಂಬ ಆಸೆಯಿತ್ತು.

ಬೇಲಾಡಿ ಶಾಲೆಯಲ್ಲಿದ್ದಾಗಲೇ ಪಾಠದೊಂದಿಗೆ ಯಕ್ಷಗಾನ, ನಾಟಕ, ಕನ್ನಡ ಸಾಹಿತ್ಯದ ಪರಿಚಯ, ಸಾಹಿತಿಗಳ ಒಡನಾಟದ ಅನುಭವ ಪಡೆದೆ. ಕಾರಂತ, ಅಡಿಗ, ಸಿಪಿಕೆ, ನಾವಡ, ಕಯ್ಯಾರ, ಗುಲ್ವಾಡಿ, ಚೊಕ್ಕಾಡಿ, ಉಪಾಧ್ಯ, ಸೇಡಿಯಾಪು, ಬೊಳುವಾರು, ರಾಮಚಂದ್ರ, ಮೊಗಸಾಲೆಯರನ್ನು ಕಂಡದ್ದು ಇಲ್ಲಿಯೇ. ಪುಸ್ತಕಗಳು ನಮಗೆ ಬಹುಮಾನದ ರೂಪದಲ್ಲಿ ದೊರೆಯುತ್ತಿದ್ದವು. ಮುಂದೆ ಹೈಸ್ಕೂಲು, ಪಿಯುಸಿ ಶಿಕ್ಷಣ, ಪಡೆಯಲು ೨೦ ಕಿಮೀ ದೂರದ ಕಾರ್ಕಳಕ್ಕೆ ಹೋಗಬೇಕಾದ ಪರಿಸ್ಥಿತಿ. ಬಸ್ ವ್ಯವಸ್ಥೆಗಳಿಲ್ಲದ ಅಂದಿನ ದಿನಗಳಲ್ಲಿ ಸಂಬಂಧಿಕರ ಮನೆಯಲ್ಲಿ ವಾಸ್ತವ್ಯ ಹೂಡುವ ಅನಿವಾರ್ಯತೆ ಒದಗಿ ಬಂತು. ಮತ್ತೆ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಮುಂದುವರೆಯಿತು. ಇಲ್ಲಿ ಮಾಸ್ತಿ, ರಾಜರತ್ನಂ, ಅನಂತ ಮೂರ್ತಿ, ನಿಸಾರ್ ಅಹಮದ್‌ರನ್ನು ನೊಡುವ ಭಾಗ್ಯ ದೊರೆಯಿತು. ಶಿಕ್ಷಣದ ಬಹುತೇಕ ವೆಚ್ಚವನ್ನು ಸ್ಕಾಲರ್‌ಶಿಪ್ ಮೂಲಕ ನಿರ್ವಹಿಸಿದೆ.

ಮುಂದೆ ಮಣಿಪಾಲದಲ್ಲಿ ತಾಂತ್ರಿಕ ಶಿಕ್ಷಣ ಪಡೆದುಕೊಂಡೆ. ಕಾಲೇಜಿನ ಕನ್ನಡ ಸಂಘದಲ್ಲಿ ಸಕ್ರಿಯವಾಗಿ ಭಾಗವಹಿಸುವ ಅವಕಾಶಗಳು ದೊರಕಿದವು. ಯಕ್ಷಗಾನದ ಹುಚ್ಚು ಇಲ್ಲೂ ಮುಂದುವರೆಯಿತು. ಮತ್ತೆ ಕಲಿಯುವ ಮನಸ್ಸಿದ್ದರೂ ಮನೆ ಕಡೆಯ ಆರ್ಥಿಕ ಸಮಸ್ಯೆಯ ಕಾರಣ ಕೆಲಸ ಹುಡುಕಿಕೊಳ್ಳ ಬೇಕಾಯಿತು. ಅದು ಮಾಹಿತಿ ತಂತ್ರಜ್ಞಾನದ ಉದ್ಯಮದ ಏರುಗಾಲವಾದ್ದರಿಂದ ಒಳ್ಳೆಯ ಸಂಬಳದ ಕೆಲಸವೂ ಸಿಕ್ಕಿತು. ಈ ಸುಮಾರು ಎರಡು ದಶಕಗಳಲ್ಲಿ ನಾನು ವಿವಿಧ ಸಂಸ್ಥೆಗಳಲ್ಲಿ (ಐಟಿನೂ ಸೇರಿ) ಕಾರ್ಯ ನಿರ್ವಹಿಸಿ, ಇತ್ತೀಚೆಗೆ ನನ್ನದೇ ಆದ ಕನ್ಸಲ್ಟೆನ್ಸಿ ಉದ್ಯಮವನ್ನು ನಡೆಸುತ್ತಿದ್ದೇನೆ. ಇದರಿಂದ ಸುಮಾರು ೨೦ ಯುವಜನರಿಗೆ ಉದ್ಯೋಗಾವಕಾಶ ದೊರೆತಿದೆ. ಹತ್ತಾರು ಬಾರಿ ಅಮೇರಿಕಾ, ಯುರೋಪು ರಾಷ್ಟ್ರಗಳಿಗೆ ಭೇಟಿಯಿತ್ತರೂ, ಅಲ್ಲಿಯೇ ವಾಸವಾಗುವ ಅವಕಾಶಗಳು ಲಭ್ಯವಾದರೂ ಅವೆಲ್ಲವನ್ನೂ ಬಿಟ್ಟು ಬಿಡಲು ನಿರ್ಧರಿಸಿದೆ. ಶಾಲಾ ದಿನಗಳಲ್ಲಿ ಕಟ್ಟಿಕೊಂಡ ಕುವೆಂಪುರವರ ವಿಶ್ವ ಮಾನವತ್ವದ ಕನಸು ಇಂದಿನ ವ್ಯಾವಹಾರಿಕ ಜಗತ್ತಿನಲ್ಲಿಯೂ ನನ್ನಲ್ಲಿ ಜೀವಂತವಾಗಿದೆ. ಗ್ರಾಮೀಣ ಪ್ರದೇಶದಲ್ಲಿ, ಕನ್ನಡ ಮಾಧ್ಯಮದಲ್ಲಿ ಕಲಿತ ನನ್ನಂತಹ ಹಳ್ಳಿ ಹೈದನಿಗೆ ಇವೆಲ್ಲಾ ಹೇಗೆ ಕೂಡಿ ಬಂತು? ಎರಡು ದಶಕಗಳ ನೆನಪುಗಳನ್ನು ಈಗ ಮೆಲುಕು ಹಾಕಿದಾಗ ಈ ಕೆಲವು ವಾಸ್ತವಗಳ ಚಿಂತನೆ ನಡೆಸುವುದು ಸರಿಯೆನಿಸುತ್ತದೆ.



- ನಾವು ಪ್ರಾಥಮಿಕ ಶಾಲೆಗೆ ಹೋಗುವಾಗ ನಮ್ಮ ಮೇಲೆ ಯಾವುದೇ ಒತ್ತಡವಿರಲಿಲ್ಲ. ಪಾಠದೊಂದಿಗೆ ಪಾಠೇತರ ಚಟುವಟಿಕೆಗಳಲ್ಲಿ ನಿರಂತರವಾಗಿ ಶಿಕ್ಷಣ ದೊರೆಯುತ್ತಿತ್ತು. ನಮ್ಮ ಶಿಕ್ಷಕರು ವಿಶೇಷವಾಗಿ ಕನ್ನಡ ಭಾಷೆ ಕಲಿಕೆಯ ಬಗ್ಗೆ ನಮ್ಮ ಗಮನ ಸೆಳೆಯುತ್ತಿದ್ದರು. ಗದುಗಿನ ಭಾರತದ ಪಠಣ, ಮುದ್ದಣ-ಮನೋರಮೆಯ ಸಲ್ಲಾಪದ ಮೇಲೆ



**ಹಲವು ವಿಜ್ಞಾನಿಗಳು-ತಂತ್ರಜ್ಞರು ಮತ್ತು ಸಾಹಿತಿ-ವಿದ್ವಾಂಸರನ್ನು ನೀಡಿದ ಈ ಬೇಲಾಡಿ ಶಾಲೆ ಇಂದು ಮುಚ್ಚಿ ಹೋಗುವ ಸ್ಥಿತಿಯಲ್ಲಿದೆ...**

ವಿಮರ್ಶೆ, ಕನ್ನಡ ಭಿತ್ತಿ ಪತ್ರಗಳ ಕಂಠಪಾಠ ನಡೆಸುತ್ತಿದ್ದೆವು. ನಮ್ಮ ಶಿಕ್ಷಕರು ಸ್ವತ: ಕಾವ್ಯ ವಾಚನ, ಪ್ರಸಿದ್ಧ ಸಾಹಿತಿಗಳ ಜೀವನ ಪರಿಚಯ ಮಾಡುತ್ತಿದ್ದರು. ಸಾವಿರಾರು ಹೊತ್ತಿಗೆಗಳಿಂದ ಕೂಡಿದ್ದ ವಾಚನಾಲಯದಲ್ಲಿ ನಿರಂತರ ಓದುತ್ತಿದ್ದೆವು. "ವಾಣಿ" ಎಂಬ ಮಾಸ ಪತ್ರಿಕೆಗೆ ಚುಟುಕು, ಕವನ, ಕತೆಗಳನ್ನು ಬರೆಯುತ್ತಿದ್ದೆವು. ನಾಡಿನ ಸಾಹಿತಿಗಳನ್ನು ಕರೆಯಿಸಿ ಕನ್ನಡ ಕಮ್ಮಟಗಳನ್ನು ನೆರವೇರಿಸುತ್ತಿದ್ದರು. ನವೋದಯ, ನವ್ಯ, ಬಂಡಾಯ ಸಾಹಿತ್ಯದ ಪ್ರಕಾರಗಳ ಮೇಲೆ ಗೋಷ್ಠಿಗಳು ನಮ್ಮ ಕುತೂಹಲ ಕೆರಳಿಸುತ್ತಿದ್ದವು. ಇದರ ಜೊತೆಯಲಿಯ್ಲೇ ವಿವಿಧ ಧರ್ಮ, ಜಾತಿ, ಪಂಗಡಗಳ ನಾವೆಲ್ಲರೂ ಒಂದೇ ಎಂಬ ಸಾಮಾಜಿಕ ಸಂದೇಶವೂ ನಮ್ಮ ಶಿಕ್ಷಕರಿಂದ ನಮಗೆ ದೊರಕುತ್ತಿತ್ತು. ಸಮವಸ್ತ್ರ, ಸಹ ಭೋಜನ, ಸಾಮೂಹಿಕ ಪ್ರಾರ್ಥನೆಗಳ ಮೂಲಕ ಅರ್ಥಿಕ, ಸಾಮಾಜಿಕ ವೈಪರೀತ್ಯಗಳ ನಿರ್ಮೂಲನ ದ ಪ್ರಾಮಾಣಿಕ ಪ್ರಯತ್ನ ಶಾಲೆಯಲ್ಲಿ ನಡೆಯುತ್ತಿತ್ತು. ಇದರೊಂದಿಗೆ ಸತತ ಎರಡು ದಶಕಗಳಲ್ಲಿ ನೂರಕ್ಕೆ ನೂರು ಫಲಿತಾಂಶ ದಾಖಲೆ ಪಡೆದಿದ್ದ ಈ ಕುಗ್ರಾಮದ ಶಾಲೆಯ ಮುಖ್ಯ ಅಧ್ಯಾಪಕರಿಗೆ ರಾಜ್ಯ ಹಾಗೂ ರಾಷ್ಟ್ರ ಪ್ರಶಸ್ತಿಗಳು ಅರಸಿ ಬಂದಿದ್ದವು. ಇಂದು ಈ ಶಾಲೆಯ ದುಸ್ಥಿತಿಯನ್ನು ಕಂಡಾಗ ಮನ ಕರಗುತ್ತದೆ. ಶಿಕ್ಷಕರ ಕೊರತೆಯಿಂದ, ಮಕ್ಕಳ ಸಂಖ್ಯೆ ಕ್ಷೀಣಿಸುತ್ತಾ ಮುಚ್ಚುವ ಹಂತಕ್ಕೆ ಬಂದಿದೆ. ಪಕ್ಕದ ಹಳ್ಳಿಯಲ್ಲಿ ಇಂಗ್ಲಿಷ್ ಮಾಧ್ಯಮ ಶಾಲೆಯ ಉದಯವಾಗಿ ಇಲ್ಲಿಯ ಮಕ್ಕಳು ವಲಸೆ ಹೋಗುತ್ತಿದ್ದಾರೆ. ನಾವು ಕನ್ನಡಿಗರು, ಸರಕಾರ, ವಿದ್ಯಾ ಇಲಾಖೆ ಎಚ್ಚೆತ್ತು ಕೊಳ್ಳದಿರುವುದರಿಂದ ಹಳ್ಳಿಗಳಲ್ಲೂ ಕನ್ನಡ ಶಿಕ್ಷಣ ಆಪತ್ತಿನಲ್ಲಿದೆ. ಗುಣಮಟ್ಟದ ಶಿಕ್ಷಣ ದೊಂದಿಗೆ ನೈತಿಕ, ಸಾಮಾಜಿಕ ನೆಲೆಗಟ್ಟಿನಲ್ಲಿ ಸಾಹಿತ್ಯ, ಸಾಂಸ್ಕೃತಿಕ ಆರಾಧನೆಯಿಂದ ಸಾವಿರಾರು ವಿದ್ಯಾರ್ಥಿಗಳನ್ನು ಸೃಷ್ಟಿಸಿದ ಈ ಶಾಲೆ ಇಂದು ಏಕೋಪಾಧ್ಯಾಯ ಸ್ಥಿತಿಗೆ ಬಂದು ತಲುಪಿದೆ. ಆಂಗ್ಲ ಮಾಧ್ಯಮದ ಮೇಲಿನ ನಮ್ಮ ವಿಪರೀತ ಮೋಹ ನಮ್ಮ ಸ್ವಂತಿಕೆಯ ಮೇಲೆ ಗಧಾಪ್ರಹಾರ ಕಂಡಿದೆ.

- ನಾನು ಪ್ರಾಥಮಿಕ ಹಂತದಿಂದ ಪಿಯುಸಿವರೆಗೆ ಕನ್ನಡ ಮಾಧ್ಯಮದಲ್ಲಿಯೇ ಶಿಕ್ಷಣ ಪಡೆದರೂ ಮುಂದೆ ತಾಂತ್ರಿಕ ಶಿಕ್ಷಣ ಪಡೆಯುವಾಗ ಅಥವಾ ಉದ್ಯೋಗದಲ್ಲಿ ಯಾವುದೇ ಅಡಚಣೆಗಳು ಕಂಡು ಬಂದಿಲ್ಲ. ಈಗ ನನ್ನ ಬಹುತೇಕ ವ್ಯವಹಾರಗಳು ಇಂಗ್ಲೀಷ್‌ನಲ್ಲಿ ನಡೆಯುತ್ತವೆ. ನನ್ನ ಗ್ರಾಹಕರು ಬಹುತೇಕ ಐರೋಪ್ಯ ದೇಶಗಳಾದ ಜರ್ಮನಿ ಫ್ರಾನ್ಸ್, ಡೆನ್ಮಾರ್ಕ್‌ನವರು. ನಾವು ಅಲ್ಲಿಗೆ ಭೇಟಿ ಕೊಟ್ಟಾಗ ತಮ್ಮ ಮನೆಗಳಿಗೆ ಆಮಂತ್ರಿಸುತ್ತಾರೆ. ಅವರ ನಡೆನುಡಿಗಳನ್ನು ಗಮನಿಸಿದಾಗ ಮಾತೃಭಾಷೆಗೇನೇ ಸಹಜ ಪ್ರಾಶಸ್ತ್ಯ. ಅಂಗಡಿ, ಹೋಟೆಲುಗಳಲ್ಲಂತೂ ಆಂಗ್ಲ ಭಾಷೆಯ ಬಗ್ಗೆ ತೀವ್ರ ಅನಾದರ ಕಾಣುತ್ತೇವೆ. ಇವುಗಳೆಲ್ಲ ಆರ್ಥಿಕವಾಗಿ ಮುಂದುವರಿದ ದೇಶಗಳಲ್ಲವೆ?
- ಗಾಂಧೀಜಿಯವರು ಪ್ರಾಥಮಿಕ ಶಿಕ್ಷಣ ಮಾತೃ ಭಾಷೆಯಲ್ಲಿಯೆ ದೊರೆಯಬೇಕೆಂದು ಪ್ರತಿಪಾದಿಸುತ್ತಿದ್ದರು. ಇದರಿಂದ ಮನೆಯ ಪರಿಸರ ಮತ್ತು ಶಾಲೆಯ ವಾತಾವರಣದೊಂದಿಗೆ ನೇರ ಸಂಪರ್ಕ ದೊರೆಯಲು ಸಾಧ್ಯವಾಗುತ್ತದೆ. ನಾನು ಕನ್ನಡದಲ್ಲಿ ಕಲಿತಿದ್ದರಿಂದ ನನಗೆ ಸುತ್ತಲಿನ ಜಗತ್ತಿನ ಜೊತೆಯಲ್ಲಿ ಸುಲಭವಾಗಿ ಬೆರೆಯಲು ಸಾಧ್ಯವಾಯಿತು. ಚಮ್ಮಾರ, ಕ್ಷೌರಿಕ, ಹಾಲು ಮಾರುವವ, ತರಕಾರಿ ಅಂಗಡಿಯವ, ಹಮಾಲಿ, ಬೆಸ್ತ ಇತ್ಯಾದಿ ಪಾತ್ರಗಳೊಂದಿಗಿನ ನನ್ನ ಸಹಜ ಸಂಭಾಷಣೆಗಳು ನನ್ನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ನೆರವಾದವು. ನಾವು ಸಮಾಜದ ಒಂದು ಅಂಗವೆಂಬುದು ನಮಗೆ ಮನವರಿಕೆಯಾಗುತ್ತಿತ್ತು. ಇಂದಿನ ಆಂಗ್ಲ ಭಾಷಾ ಶಿಕ್ಷಣದ ಮಕ್ಕಳು ಕೇವಲ ಕಂಪ್ಯೂಟರ್, ಐಪಾಡ್‌ಗಳಲ್ಲಿ ಸಮಯ ಕಳೆಯುವುದರಿಂದ ಇವರು ಸಾಮಾನ್ಯ ಜ್ಞಾನದ ಕೊರತೆ ಜೊತೆಗೆ ಒಂಟಿತನದಿಂದ ನರಳುತ್ತಾ ದುರ್ಬಲ ವ್ಯಕ್ತಿತ್ವಗಳಾಗಿ ಮೂಡಿ ಹಲವು ರೀತಿಯ ಮಾನಸಿಕ ಕ್ಲೇಶಗಳಿಗೆ ಎಲ್ಲೆಲ್ಲೋ ಪರಿಹಾರ ಹುಡುಕಿಕೊಂಡು ಅಲೆಯುತ್ತಿರುವುದನ್ನು ನಾವಿಂದು ಕಾಣುತ್ತಿದ್ದೇವೆ.

ಕವಿವಾಣಿಯಂತೆ ಕನ್ನಡ ನಾಡಿಗೆ ಕನ್ನಡ ನುಡಿಯೇ ಗತಿ. ಬೇರೆ ಯಾವ ಭಾಷೆಯೂ ನಮ್ಮಲ್ಲಿ ಸೃಜನಶೀಲತೆಯನ್ನು ಬೆಳೆಸುವುದಿಲ್ಲ. ನಮ್ಮ ಅಸ್ತಿತ್ವಕ್ಕೆ ನಾವು ಕನ್ನಡಮ್ಮನ ಮೊರೆ ಹೋಗುವುದು ನಮಗೆ ಅನಿವಾರ್ಯ. ಇದು ಅಭಿಮಾನದ ಅಥವಾ ಭಾವನಾತ್ಮಕ ಮಾತಲ್ಲ. ನೀರು, ವಿದ್ಯುಚ್ಛಕ್ತಿ, ವಸತಿ, ರಸ್ತೆ, ಉದ್ಯೋಗ, ನೈರ್ಮಲ್ಯದಂತಹ ಮೂಲಭೂತ ಅವಶ್ಯಕತೆಗಳೊಂದಿಗೆ ಕನ್ನಡವೂ ಸೇರ್ಪಡೆಯಾಗಬೇಕು. ಈ ನಿಟ್ಟಿನಲ್ಲಿ ಈಗಲಾದರೂ ನಾವೆಲ್ಲರೂ ಎಚ್ಚರಗೊಳ್ಳೋಣ ಎಂಬುದೇ ನನ್ನ ಹರಕೆ, ಹಾರೈಕೆ!

---

# ಬದುಕಿಗೆ ದಾರಿದೀಪವಾದ ಕನ್ನಡ ಮಾಧ್ಯಮ

**-ಸ್ನೇಹಾ ಎನ್. ಆರ್.**

ಎಂಬತ್ತರ ದಶಕದ ಆರಂಭದಲ್ಲಿ ನನ್ನನ್ನು ಶಾಲೆಗೆ ಸೇರಿಸುವ ಸಂದರ್ಭ ನನ್ನ ಅಪ್ಪ ಅಮ್ಮನಿಗೆ ಶೈಕ್ಷಣಿಕ ಮಾಧ್ಯಮದ ವಿಷಯದಲ್ಲಿ ಗೊಂದಲಗಳೇ ಇದ್ದಂತಿರಲಿಲ್ಲ. 'ಮಾತೃಭಾಷೆ ಕನ್ನಡದಲ್ಲಿಯೇ ಪ್ರಾಥಮಿಕ ಶಿಕ್ಷಣ' ಎನ್ನುವುದು ಅವರಿಗೆ ಸ್ಪಷ್ಟವಾಗಿತ್ತು. ಅವರ ಅನೇಕಾನೇಕ ಸ್ನೇಹಿತರೂ ತಮ್ಮ ಮಕ್ಕಳನ್ನು ಕನ್ನಡ ಮಾಧ್ಯಮದ ಶಾಲೆಗೇ ದಾಖಲಿಸಿದ್ದರು. ಕಲಿಕೆ ಮುಖ್ಯವಾಗಿತ್ತು, ಕನ್ನಡ ಮಾಧ್ಯಮ ಅದಕ್ಕೆ ಪೂರಕವಾಗಿಯೂ ಇತ್ತು.

ನಾನು ಓದಿದ ಮೈಸೂರಿನ ಮಾನಸ ಗಂಗೋತ್ರಿ ಶಾಲೆಯಲ್ಲಿಯೂ ಆಗ ಆಂಗ್ಲ ಮಾಧ್ಯಮವಿತ್ತು. ಆದರೆ, ಕೆಲ ಸಮಯದಲ್ಲಿ ಹಲವರ ಹೋರಾಟದ ಫಲವಾಗಿ ನಮ್ಮ ಶಾಲೆಯನ್ನು ಸಂಪೂರ್ಣವಾಗಿ ಕನ್ನಡ ಮಾಧ್ಯಮ ಶಾಲೆಯೆಂದು ಘೋಷಿಸಲಾಯಿತು. ಹಲವು ಸಹಪಾಠಿಗಳು ಶಾಲೆ ತೊರೆದು ಅಲ್ಲೇ ಹತ್ತಿರದಲ್ಲಿದ್ದ ಕೇಂದ್ರ ಸರಕಾರದ ಆಂಗ್ಲ ಮಾಧ್ಯಮ ಶಾಲೆಗೆ ಸೇರಿದ್ದು ನೆನಪಿದೆ. ಹೀಗೆ ಘೋಷಿತವಾದ ಸಂದರ್ಭದಲ್ಲಿ ನಮಗೆಲ್ಲ ಶುಭ ಹಾರೈಸಲು ರಾಷ್ಟ್ರಕವಿ ಕುವೆಂಪು ನಮ್ಮ ಶಾಲೆಗೆ ಆಗಮಿಸಿದ್ದರು. ಅವರು ಮೊಮ್ಮಗಳೂ ನಮ್ಮ ಶಾಲೆಯ ವಿದ್ಯಾರ್ಥಿನಿಯೇ. ಅಂದು ಹಿರಿಯ ವಿದ್ಯಾರ್ಥಿಗಳು ಕುವೆಂಪು ಅವರ "ಜೈ ಭಾರತ ಜನನಿಯ ತನುಜಾತೆ' ಹಾಡಿಗೆ ದೀಪ ಹಿಡಿದು ನೃತ್ಯ ಮಾಡಿದ್ದು ಅಚ್ಚಳಿಯದೆ ನನ್ನ ನೆನಪಿನಲ್ಲಿ ಅಚ್ಚೊತ್ತಿದೆ.



ಅಕ್ಕಪಕ್ಕದಲ್ಲಿ ಎರಡೂ ಮಾಧ್ಯಮದ ಶಾಲೆಗಳು. ವಿದ್ಯಾರ್ಥಿಗಳಲ್ಲಿ ಯಾವ ವ್ಯತ್ಯಾಸವೂ ಇದ್ದಿದ್ದು ನೆನಪಿಲ್ಲ. ಅವರಂತೆ ನಾವು-ನಮ್ಮಂತೆ

ಅವರು. ಒಂದು ದಿನ ನಮ್ಮ ಶಾಲೆಯ ಮಕ್ಕಳೆಲ್ಲ ಪಕ್ಕದ ಆ ಶಾಲೆಗೆ ಶೈಕ್ಷಣಿಕ ಪ್ರದರ್ಶನವೊಂದನ್ನು ನೋಡಲು ತೆರಳಿದ್ದೆವು. ಪ್ರದರ್ಶನದ ಜತೆಗೆ ನಮ್ಮನ್ನು ಅಲ್ಲಿ ಆಕರ್ಷಿಸಿದ ಮತ್ತೊಂದು ಅಂಶ, ಆ ಶಾಲೆಯ ವಿಶಾಲ ಆವರಣ ಮತ್ತು ಸುಸಜ್ಜಿತ ಕೊಠಡಿಗಳು. ನಮ್ಮ ಶಾಲೆಯೂ ಸುಂದರವಾಗಿಯೇ ಇತ್ತಾದರೂ ಏನೋ ಒಂದು ಸಣ್ಣ ಕೊರತೆ ಭಾಸವಾಗಿತ್ತು! ಆದರೆ, ಅದು 'ಮಾಧ್ಯಮ'ದ ಕೊರತೆ ಖಂಡಿತವಾಗಿಯೂ ಆಗಿರಲಿಲ್ಲ. ಹಿತವಾದ ವಾತಾವರಣ, ಆಡುಭಾಷೆಯಲ್ಲೇ ಕಲಿಕೆ ಮತ್ತು ಮುತುವರ್ಜಿಯಿಂದ ನಮ್ಮಲ್ಲಿ ಆತ್ಮಸ್ಥೈರ್ಯ ಮೂಡಿಸುತ್ತಿದ್ದ ಶಿಕ್ಷಕ ವೃಂದ. ಕಲಿಕೆಗೆ ಇಷ್ಟಲ್ಲದೆ ಮತ್ತೇನು ಬೇಕಿತ್ತು?

ಶಿಕ್ಷಣದ ಮೂಲ ಉದ್ದೇಶ ವೈಚಾರಿಕತೆಯೊಂದಿಗೆ ಬದುಕಿನೆಡೆಗೆ ಬೇಕಾಗುವ ಆತ್ಮವಿಶ್ವಾಸವನ್ನು ರೂಪಿಸುವುದು. ಕನ್ನಡ ಮಾಧ್ಯಮದಲ್ಲಿ ಕಲಿಯುತ್ತಾ ನಮ್ಮೊಳಗೆ ಇಂಥದೊಂದು ಆತ್ಮವಿಶ್ವಾಸ ಮೂಡಿತ್ತು. ಇದು ಇಂಗ್ಲಿಷ್ ಕಲಿತ ಮಾತ್ರಕ್ಕೆ ದಕ್ಕುವಂತದ್ದಲ್ಲ. ಕಲಿಕೆಯ ಪ್ರಕ್ರಿಯೆಯಿಂದ ಮತ್ತು ಸುತ್ತಲಿನ ಜೀವನಾನುಭವಕ್ಕೆ ನಾವು ತೆರೆದುಕೊಳ್ಳುವ ಬಗೆಯಿಂದ ಬರುವಂತಹದ್ದು. ಕನ್ನಡ ಮಾಧ್ಯಮದಲ್ಲಿ ಕಲಿತಿದ್ದರಿಂದ ನಮ್ಮ ತತ್‌ಕ್ಷಣದ ಪರಿಸರದೊಂದಿಗೆ, ಸಾಮಾಜಿಕ ಸನ್ನಿವೇಶಗಳೊಂದಿಗೆ ನಮ್ಮನ್ನು ನಾವು ಗುರುತಿಸಿಕೊಳ್ಳಲು ಸಾಧ್ಯವಾಯಿತು. ನಾವು 'ಎಲ್ಲಿಂದಲೋ ಬಂದವ'ರಂತಾಗದೆ ಇಲ್ಲಿ ನಿಜವಾಗಿ ಸಲ್ಲುವಂತಾಗಲು ಸಾಧ್ಯವಾಯಿತು. ಬೇರೆ ಬೇರೆ ಸ್ತರಗಳಲ್ಲಿ ನಮ್ಮ ಸಮಾಜದಲ್ಲಿ ಏಳತೊಡಗುವ ತಾರತಮ್ಯತೆಗಳ ಅಲೆಯಿಂದ ದೂರ ಕಾಯ್ದುಕೊಳ್ಳಲು–ಸಮಾನತೆಯ ಆನಂದವನ್ನು ಸವಿಯಲು–ಸಾಧ್ಯವಾಯಿತು. ಮನುಷ್ಯ ಸಹಜ ಸೂಕ್ಷ್ಮತೆಗಳನ್ನು ಗ್ರಹಿಸುವುದು ಸುಲಭವಾಯಿತು. ಈ ಇಡೀ ಪ್ರಕ್ರಿಯೆ ನಾನು ಬದುಕಿನಲ್ಲಿ ಸಾಗುವ ಹಾದಿಗೆ ದೀವಿಗೆಯಾಗಿ ದಾರಿ ಸ್ಪಷ್ಟವಾಗಿ ಕಾಣುವಂತೆ ಮಾಡಿತು. ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಯ ಹೋಗಿದ್ದರೆ ಈ ಸೂಕ್ಷ್ಮತೆಗಳೆಲ್ಲ ಅಷ್ಟು ಸುಲಭವಾಗಿ ಕಾಣುತ್ತಿರಲಿಲ್ಲವೇನೋ ಎಂದು ಆ ಮಾಧ್ಯಮದಲ್ಲಿ ಕಲಿತ ಹಲವರನ್ನು ಕಂಡಾಗ ಅನ್ನಿಸುತ್ತದೆ.

ಕನ್ನಡ ಮಾಧ್ಯಮ, ನಮ್ಮ ಅರಿವಿನ ವಿಸ್ತಾರ ಕೇವಲ ಪಠ್ಯದ ಪ್ರಶ್ನೆಗಳಿಗೆ ಉತ್ತರ ಹುಡುಕಲಷ್ಟೆ ಸೀಮಿತವಾಗದೆ ಹೆಚ್ಚೆಚ್ಚು ಗ್ರಹಿಸಲು ಅನುವು, ಆಸ್ಪದ ಮಾಡಿಕೊಟ್ಟಿತು. ಒಟ್ಟಾರೆ ವಿಷಯದ ಸೂಕ್ಷ್ಮ ನೋಟಕ್ಕೆ ನಾವು ತೆರೆದುಕೊಂಡಂತೆ ಅನ್ನಿಸುತ್ತದೆ. ಕನ್ನಡದ ಕಲಿಕೆ ನಮ್ಮ ಇಡೀ ವ್ಯಕ್ತಿತ್ವ ರೂಪುಗೊಳ್ಳುವಲ್ಲಿ ಒತ್ತಾಸೆಯಾಗಿತ್ತು. ನನ್ನ ಮತ್ತು ನನ್ನ ಅನೇಕ ಸಹಪಾಠಿಗಳ ಶಾಲಾ ದಿನಗಳು ಅತ್ಯಂತ ನೆಮ್ಮದಿಯ ಮತ್ತು ಆತಂಕ ರಹಿತವಾಗಿ ಮುಕ್ತಾಯವಾಯಿತು.

ಕನ್ನಡ ಮಾಧ್ಯಮ ಅಂದು ನಮಗೆ ಎಲ್ಲಕ್ಕಿಂತ ಮಿಗಿಲಾಗಿ ಕೊಟ್ಟ ಬಳುವಳಿಯೆಂದರೆ ಅದು 'ಆತ್ಮ ವಿಶ್ವಾಸ'. ಕಾಲೇಜು ಹಂತದಲ್ಲಿ ಇಂಗ್ಲಿಷ್ ಮಾಧ್ಯಮವನ್ನು ಆಯ್ಕೆ ಮಾಡಿಕೊಂಡಾಗ ಕೆಲ ಸಮಯ ಭಾಷೆ ತೊಡಕೆನಿಸಿತ್ತು. ಆದರೆ ನಮ್ಮೊಳಗಿನ ಆತ್ಮವಿಶ್ವಾಸ ಅದನ್ನು ಮೀರಿ ಕಲಿಯಲು ಸಾಧ್ಯವಾಗಿಸಿತು. ಬಿಎ ಪದವಿಯಲ್ಲಿ ಆಂಗ್ಲ ಸಾಹಿತ್ಯವನ್ನು ಆಯ್ಕೆ ಮಾಡಿಕೊಂಡಾಗ ಭಾಷೆಗೂ ಮೀರಿದ ಸಾಹಿತ್ಯದ ಸೂಕ್ಷ್ಮತೆಯನ್ನು ಅನುಭವಿಸುವುದು ಸಾಧ್ಯವಾದದ್ದೂ ಬಹುಶಃ "ಕನ್ನಡ' ಮಾಧ್ಯಮದಿಂದಲೇ.

ಆದರೆ, ಈಗ ನಾನು ಕಲಿತ ಅದೇ ಶಾಲೆ ಆಂಗ್ಲ ಮಾಧ್ಯಮ ಶಾಲೆಗಳ ಅಬ್ಬರದ ಎದುರಲೆಯ ವಿರುದ್ಧ ಈಜಿ ಸುಸ್ತಾಗಿ ಬಸವಳಿದಂತೆ ಕಾಣುತ್ತಿದೆ. ಇದು ನನ್ನ ಶಾಲೆಯ ಸ್ಥಿತಿಯಷ್ಟೇ ಅಲ್ಲ. ಸುಣ್ಣ ಬಣ್ಣ ಕಾಣದ, ಮುರಿದ ಚಾವಣಿಗಳ ಕರ್ನಾಟಕದ ಅದೆಷ್ಟೋ ಕನ್ನಡ ಶಾಲೆಗಳ ವ್ಯಥೆಯೂ ಹೌದು. ಕನ್ನಡ ಮಾಧ್ಯಮದಲ್ಲೇ ಓದಿದ ನನ್ನ ತಂದೆ, ತಾಯಿ ಮತ್ತು ನನಗೆ ಯಾವ ಶಾಲೆಗಳು ಆತ್ಮವಿಶ್ವಾಸವನ್ನು ತುಂಬಿದ್ದವೋ ಅವುಗಳ ಭವಿಷ್ಯವೇ ಮಸುಕಾಗಿದೆ. ಹಾಗಂತ, ಮಾಧ್ಯಮವಾಗಿ ಕನ್ನಡ ಸೋತಿದೆ ಎಂದಲ್ಲ. ಇಡೀ ಶೈಕ್ಷಣಿಕ ವಿದ್ಯಮಾನದಲ್ಲಾಗಿರುವ ಪಲ್ಲಟ ಇದನ್ನು ಹಾಗೆ ಕಾಣುವಂತೆ ಮಾಡಿದೆಯಷ್ಟೆ.

ನನ್ನ ವಾರಿಗೆಯ ಅನೇಕರು ಕನ್ನಡ ಮಾಧ್ಯಮದಲ್ಲಿ ಓದಿ ಸಮಾಜದ ವಿವಿಧ ಸ್ತರಗಳಲ್ಲಿ, ವಿಭಿನ್ನ ವೃತ್ತಿಗಳಲ್ಲಿ ತೊಡಗಿಸಿಕೊಂಡು ತಮ್ಮ ಛಾಪು ಮೂಡಿಸುತ್ತಿದ್ದಾರೆ. ನಮಗ್ಯಾರಿಗೂ ಕನ್ನಡ ಮಾಧ್ಯಮದಲ್ಲಿ ಕಲಿತದ್ದು ಯಾವತ್ತೂ ತೊಡಕೆನಿಸಲಿಲ್ಲ. ಭಾಷೆಯಾಗಿ ಇಂಗ್ಲಿಷ್‌ನ ಅನಿವಾರ್ಯತೆ ಇದ್ದಾಗ ಅದನ್ನೂ ಅಷ್ಟೇ ಆಸ್ಥೆಯಿಂದ ಕಲಿತಿದ್ದೇವೆ, ಬಳಸುತ್ತಿದ್ದೇವೆ.

ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿ, ಇಂಗ್ಲಿಷನ್ನು ಭಾಷೆಯಾಗಿ ಕಲಿಯುವುದು ಹೆಚ್ಚು ಫಲಕಾರಿ ಎನ್ನಿಸುತ್ತೆ. ಇಂಗ್ಲಿಷ್ ಮಾಧ್ಯಮಕ್ಕೇ ಜೋತು ಬಿದ್ದು ಕನ್ನಡ ಮಾಧ್ಯಮ ಮತ್ತು ಅದರ ಬೆನ್ನಲ್ಲೇ ಇರುವ ಈ ನಾಡಿನ ಸಂಸ್ಕೃತಿಯಿಂದ ದೂರ ಉಳಿದ ಅನೇಕರು ವಿದ್ಯಾಭ್ಯಾಸದ ನಂತರದ ತಮ್ಮ ವೃತ್ತಿಯಲ್ಲಿ ಬಹಳಷ್ಟು ಸವಾಲುಗಳನ್ನು ಎದುರಿಸಿದ್ದನ್ನು ನಾನು ಕಂಡಿದ್ದೇನೆ. ಯಾವುದೇ ವೃತ್ತಿಯಲ್ಲಿ ಯಶಸ್ಸು ಕಾಣಲು, ಗಟ್ಟಿಯಾಗಿ ನೆಲೆಗೊಳ್ಳಲು ಇಂಗ್ಲಿಷ್ ಪ್ರೌಢಿಮೆಯೊಂದೇ ಉಪಯೋಗಕ್ಕೆ ಬರುವುದಿಲ್ಲ ಎನ್ನುವ ಸತ್ಯವನ್ನು ನಾನು ಅನೇಕ ಉದಾಹರಣೆಗಳಲ್ಲಿ ಕಂಡಿದ್ದೇನೆ. ಅಂತೆಯೇ, ಕನ್ನಡ ಮಾಧ್ಯಮದಲ್ಲೇ ಪ್ರಾಥಮಿಕ, ಪ್ರೌಢಶಿಕ್ಷಣ ಮುಗಿಸಿ ನಂತರದ ಓದು–ವೃತ್ತಿಯ ಪಯಣದಲ್ಲಿ ಸ್ಪಷ್ಟ ಹೆಜ್ಜೆ ಗುರುತು ಮೂಡಿಸಿದವರ ಹಲವಾರು ಉದಾಹರಣೆಗಳೂ ನಮ್ಮ ಕಣ್ಣಳತೆಯಲ್ಲಿವೆ.

ಕನ್ನಡ ಮಾಧ್ಯಮ ಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ಮುಗಿಸಿ, ಆಂಗ್ಲ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದು ಅತಿ ಹಿಂದುಳಿದ ತಾಲೂಕಿನ ಹಳ್ಳಿಯೊಂದರ ಕಾಲೇಜಿನಲ್ಲಿ ಇಂಗ್ಲಿಷ್ ಉಪನ್ಯಾಸಕಿಯಾಗಿ ಕೆಲಸ ಮಾಡುತ್ತಿರುವ ನನಗೆ ಹೆಮ್ಮೆಯಿದೆ. ನಾನು ಬೆಳೆದ ಬಗೆಗೆ ಮತ್ತು ಬದುಕನ್ನು ರೂಪಿಸಿಕೊಂಡ ರೀತಿಗೆ. ಆದರೆ, ಎರಡೂವರೆ ದಶಕದ ಹಿಂದೆ ನನ್ನನ್ನು ಶಾಲೆಗೆ ಸೇರಿಸುವಾಗ ಅಪ್ಪ ಅಮ್ಮನಿಗೆ "ಮಾಧ್ಯಮ' ಗೊಂದಲ ಇರಲಿಲ್ಲ. ಈಗ ಅಪ್ಪ–ಅಪ್ಪನಾಗಿ ನಮಗೆ, ನಮ್ಮ ಮಗಳನ್ನು ಶಾಲೆಗೆ ಸೇರಿಸುವ ಸಂದರ್ಭದಲ್ಲಿ ಗೊಂದಲಗಳಿಂದ ಆಚೆ ಉಳಿಯಲು ಸಾಧ್ಯವಾಗಿಲ್ಲ. ಇದಕ್ಕೆ ಕನ್ನಡ ಮಾಧ್ಯಮ ಶಾಲೆಗಳ ಸ್ಥಿತಿ–ಗತಿ ಕಾರಣವೋ; ಇಂಗ್ಲಿಷ್ ಸಮೂಹ ಸನ್ನಿ ನಮ್ಮನ್ನೂ ಸೆಳೆಯುತ್ತಿದೆ ಎಂದರ್ಥವೋ;ಅಥವಾ ಈ ಎರಡೂ ಕಾರಣವೋ... ಏನು ಹೇಳಿದರೂ ಅದು 'ನೆಪ'ವಾಗುವ ಅಪಾಯ ನನ್ನಂತ ಹಿನ್ನೆಲೆಯ ಎಲ್ಲರನ್ನೂ ಕಾಡುತ್ತಿದೆ.

---

## ಇದು ಭಾರತ! ಇದು ಭಾರತ!!

ಮೊನ್ನೆ ತಾನೇ 'ಹಣ ಗಿಡದಲ್ಲಿ ಬಿಡುವುದಿಲ್ಲ' ಎಂದು ರಾಷ್ಟ್ರಕ್ಕೆ ಪಾಠ ಹೇಳಿ ತಮ್ಮ ಎರಡಂಕಿ ಪ್ರಗತಿಯ ಮುಂಗಡ ಪತ್ರದಲ್ಲಿ ಹಣಕಾಸಿನ ಕೊರತೆ ತುಂಬಿಕೊಳ್ಳಲು ಜನ ಸಾಮಾನ್ಯರ ಅಡುಗೆ ಅನಿಲದ ಮೇಲಿನ ಸಹಾಯ ಧನವನ್ನು ಖೋತಾಗೊಳಿಸಿ, ಡೀಸಲ್ ಬೆಲೆ ಏರಿಸಿ ಶೇ. ೫೧ರಷ್ಟು ನೇರ ವಿದೇಶಿ ಬಂಡವಾಳಕ್ಕೆ ಅನುಮತಿ ನೀಡಿದ ಪ್ರಧಾನಿ ಮನಮೋಹನ ಸಿಂಗ್‌ರು ತಮ್ಮ ಯುಪಿಎ–೨ ಸರ್ಕಾರದ ಮೂರನೇ ವಾರ್ಷಿಕೋತ್ಸವದ ಅಂಗವಾಗಿ ಏರ್ಪಡಿಸಿದ ಭೋಜನ ಕೂಟದಲ್ಲಿ ಪ್ರತಿ ಅತಿಥಿಯ ಒಂದು ಊಟದ ಮೇಲೆ ಖರ್ಚು ಮಾಡಿದ ಹಣ ಎಷ್ಟು ಗೊತ್ತೆ? ಬರೋಬರಿ ೭೭೨೦ ರೂಪಾಯಿಗಳು! ಬಹು ಭಕ್ಷ್ಯಗಳ ಈ ಭರ್ಜರಿ ಈ ಭೋಜನಕ್ಕೆ ಆಹ್ವಾನಿತರಾಗಿದ್ದ ೬೦೬ ಜನರ ಪೈಕಿ ಬಂದವರು ಮಾತ್ರ ೩೭೫ ಜನ!

'ಆಂ ಆದ್ಮಿ'ಯ ಹಿತ ಕಾಯಲು ಸ್ವಲ್ಪ ತ್ಯಾಗ ಅಗತ್ಯ ಎಂದು ಮಧ್ಯಮ ವರ್ಗದವರಿಗೆ ಬುದ್ಧಿ ಹೇಳುತ್ತಿರುವಾಗಲೇ ಅತಿ ದೊಡ್ಡ ಸಚಿವ ಸಂಪುಟದ ದಾಖಲೆಯನ್ನೂ ನಿರ್ಮಿಸಿರುವ ಮನಮೋಹನರು ಪ್ರಧಾನಿಯಾದ ಮೇಲೆ ಸರ್ಕಾರಿ ನೌಕರರ(ರಕ್ಷಣಾ ಖಾತೆಯನ್ನು ಬಿಟ್ಟು) ಸಂಬಳದ ಬಿಲ್ ೩೬೯೭೨ ಕೋಟಿಗಳಿಂದ ೧೧೫, ೩೫೧ ಕೋಟಿ ರೂಪಾಯಿಗಳಿಗೆ ತಲುಪಿದೆ!

ಇವರ ಎರಡಂಕಿ ಬೆಳವಣಿಗೆಯ ದಿನಗಳು ಬಂದ ಮೇಲಂತೂ ಪ್ರಗತಿಯ ಹಾದಿಯಲ್ಲಿ ದಾಪುಗಾಲು ಹಾಕಿ ಓಡಿ ಮೊದಲ ಸ್ಥಾನದಲ್ಲಿರುವ ಪಂಜಾಬ್‌ನಲ್ಲಿ ಪ್ರತಿ ಹತ್ತು ಜನರಲ್ಲಿ ೭ ಜನ ಮಾದಕ ವಸ್ತು ವ್ಯಸನಿಗಳು! ಎರಡನೇ ಸ್ಥಾನದಲ್ಲಿರುವ ಹರ್‍ಯಾಣ, ಹೆಣ್ಣು ಮಕ್ಕಳ ಮೇಲಿನ ದಿನವಹಿಅತ್ಯಾಚಾರಗಳ ದರದಲ್ಲಿ ರಾಷ್ಟ್ರದಲ್ಲೇ ಮೊದಲ ಸ್ಥಾನದಲ್ಲಿದೆ! ಇನ್ನು ಪ್ರಗತಿ ನಕ್ಷೆಯ ಮೂರನೇ ಸ್ಥಾನದಲ್ಲಿರುವ ಗುಜರಾತ್‌ನಲ್ಲಿ ಹೆಣ್ಣು ಮಕ್ಕಳಿಗೆ ಸಿಗುತ್ತಿರುವ ಪೌಷ್ಠಿಕಾಂಶ ರಾಷ್ಟ್ರದಲ್ಲೇ ಅತಿ ಕಡಿಮೆ!

ಜಾಗತಿಕ ಶಕ್ತಿಯಾಗುವ ದಾಪುಗಾಲಿನ ಪ್ರಗತಿ ಅಂದರೆ ಇದೇ ಏನೋ!

# ಮಾಧ್ಯಮ ಪ್ರಶ್ನೆಯಿಂದ ಬಾಧಿತವಾಗದ ನಾನೂ, ನನ್ನ ಮಕ್ಕಳೂ!



**ನಾ**ವು ೧೯೮೫-೮೬ರ ಸುಮಾರಿಗೆ ಬೆಳಗಾವಿಯಲ್ಲಿದ್ದಾಗ ನನ್ನ ಸಹೋದ್ಯೋಗಿಗಳ ಮಕ್ಕಳೆಲ್ಲರೂ ಇಂಗ್ಲಿಷ್ ಮಾಧ್ಯಮದಲ್ಲೇ ಓದುತ್ತಿದ್ದರು. ನನ್ನ ಹೆಂಡತಿಯ ಅಕ್ಕಂದಿರ ಮಕ್ಕಳೂ ಇಂಗ್ಲಿಷ್ ಶಾಲೆಗೆ ಹೋಗುತ್ತಿದ್ದರು. ಆದರೆ ನನ್ನ ಅಣ್ಣಂದಿರ ಮಕ್ಕಳೂ ಅಕ್ಕಂದಿರ ಮಕ್ಕಳೂ ಓದುತ್ತಿದ್ದುದು ಕನ್ನಡದಲ್ಲೇ ಆಗಿತ್ತು. ನನ್ನ ದೊಡ್ಡ ಮಗನಿಗೆ ಮೂರೂವರೆ ವರ್ಷವಾಗುತ್ತಿದ್ದಂತೆ ಹೆಂಡತಿ ಕಾಲಧರ್ಮ ತಿಳಿದು ಇಂಗ್ಲಿಷ್ ಶಾಲೆಗೆ ಸೇರಿಸುವಂತೆ ಒತ್ತಾಯದ ಸಲಹೆ ಕೊಟ್ಟಳು. ಅವಳನ್ನು ಹೇಗೋ ಸಂಭಾಳಿಸಿದೆ. ಮರುದಿನ ಗದುಗಿನಿಂದ ಅವಳ ಅಣ್ಣ ಬಂದು ತಮ್ಮ ಅಕ್ಕಂದಿರ ಮಕ್ಕಳ ಇಂಗ್ಲಿಷ್ ಓದಿನ ಮುಂದೆ ತಂಗಿಯ ಹುಡುಗರ ಕನ್ನಡ ಓದು ತಕ್ಷಣದಲ್ಲೂ ಭವಿಷ್ಯದಲ್ಲೂ ಒಂದು ಹಿನ್ನಡೆಯನ್ನು ತಂದೇ ತರುತ್ತದೆಂದೂ, ಅಂತೆಯೇ ವಾಸ್ತವಿಕತೆಯನ್ನು ಅವಲಕ್ಷಿಸಿ ತಾತ್ವಿಕತೆ ಅಥವಾ ಹಠ ಇಲ್ಲವೇ ಭಾವುಕತೆ ಈ ಎಲ್ಲವನ್ನೂ ಕಡಿಮೆ ಮಾಡಿ ಇಂಗ್ಲಿಷ್ ಶಾಲೆಗೇ ಸೇರಿಸುವಂತೆ ಒತ್ತಾಯಿಸಿದರು. ಅಲ್ಲದೇ ಸರೀಕರ ಮುಂದೆ ಅಪಮಾನವಾಗಬಾರದೆಂಬ ಕಾಳಜಿಯನ್ನೂ ವ್ಯಕ್ತಪಡಿಸಿದರು. ಹೀಗಾಗಿ ಶಾಲೆಗೆ ಸೇರಿಸುವಾಗ ಒಂದಿಷ್ಟು ತತ್ವ-ಗಿತ್ವ ಎಂಬ ವಾದ ಉಂಟಾಗಿ ಕನ್ನಡ ಶಾಲೆಗೆ ಸೇರಿಸಲೇಬೇಕೆಂಬ ಹಠ ಬೆಳೆದು, ಮನೆ ಮಾತಿನ ಶಾಲೆಗೆ ಸೇರಿಸುವ ಸಹಜ ಪ್ರಕ್ರಿಯೆ ಕೂಡ ಕೊಂಚ ಮಾನಸಿಕ ಕಿರಿಕಿರಿಗೆ ಕಾರಣವಾಯಿತು. ಕಡೆಗೂ ಶಹಪುರದ ಮನೆ ಹತ್ತಿರದ ಕನ್ನಡ ಅಂಗನವಾಡಿಗೆ ಮಕ್ಕಳು ಹೋಗಹತ್ತಿದರು. ಮಾರನೆಯ ವರ್ಷ ನಮ್ಮೂರು ಬೆಟಗೇರಿಗೆ ಬಂದು ನಿಂತಾಗ ದೊಡ್ಡವನನನ್ನು ನೇರವಾಗಿ ಸರಕಾರೀ ಶಾಲೆಯ ಒಂದನೇ ಇಯತ್ತೆಗೆ ಸೇರಿಸುವುದಾಯ್ತು.

ವರ್ಗಾವಣೆಗೊಂಡಲ್ಲೆಲ್ಲ ನನ್ನ ಸಹೋದ್ಯೋಗಿಗಳು ಆಗಲೇ ಇಂಗ್ಲಿಷ್ ಶಾಲೆಗೆ ಕೊಟ್ಟ ದೇಣಿಗೆ ಹಾಗೂ ಶುಲ್ಕವನ್ನು ನೆನೆದುಕೊಂಡು ಮುಂದಿನ ಊರಿಗೆ ತಾವೊಬ್ಬರೇ ಹೊರಟು ಹೋಗುತ್ತಿದ್ದರು. ಹೆಂಡತಿ-ಮಕ್ಕಳೊಂದು ಕಡೆ, ಇವರೊಂದು ಕಡೆ. ಕೆಲವರು ಪದೋನ್ನತಿ ನಿರಾಕರಿಸಿ ಇದ್ದಲ್ಲಿಯೇ ಇರುತ್ತಿದ್ದರು. ನನಗೆ ಈ ಸಮಸ್ಯೆ ಇರಲಿಲ್ಲ. ವರ್ಷ-ಎರಡು ವರ್ಷಗಳಿಗೊಮ್ಮೆ ವರ್ಗವಾದರೂ ಕುಟುಂಬ ಸಮೇತ ನಾನು ಹೊಸ ಊರಿಗೆ ಹೊರಟು ಬಿಡುತ್ತಿದ್ದೆ. ಹೋದಾಕ್ಷಣ ಕನ್ನಡ ಶಾಲೆಯಲ್ಲಿ ಮಕ್ಕಳನ್ನು ಕೂಡ್ರಿಸಿದರೆ ಆಯಿತು. ಅವರೇ ಹಳೆಯ ಶಾಲೆಗೆ ಬರೆದು ವರ್ಗಾವಣೆ ಪ್ರಮಾಣಪತ್ರ ತರಿಸಿಕೊಂಡು ಮಕ್ಕಳ ಹೆಸರುಗಳನ್ನು ನೋಂದಾಯಿಸಿಕೊಳ್ಳುತ್ತಿದ್ದರು. ಎಲ್ಲ ಅತ್ಯಂತ ಸರಳ ಹಾಗೂ ಸುಲಭ! ಇಬ್ಬರು ಮಕ್ಕಳು SSLC ಮುಗಿಸುವವರೆಗೆ ಅವರು ಏಳು ಶಾಲೆಗಳಲ್ಲಿ ಓದಿದಂತಾಗಿತ್ತು.

ನನ್ನ ಈ ರೀತಿಯ ಊರು ಸುತ್ತುವಿಕೆ, ಸರಕಾರೀ ಶಾಲೆಗಳಿಗೆ ಮಕ್ಕಳನ್ನು ಸುಲಭವಾಗಿ ಸೇರಿಸಿ ಆರಾಮಾಗಿರುವುದು ಕೆಲ ಸಹೋದ್ಯೋಗಿಗಳಿಗೆ ಬೇಜವಾಬ್ದಾರಿತನದಂತೆ ಕಂಡುಬರುತ್ತಿತ್ತು. ಆದರೆ ವಿಷಯ ಹಾಗಿರಲಿಲ್ಲ. ಮಕ್ಕಳ ವಿದ್ಯಾಭ್ಯಾಸದ ಬಗೆಗೆ ನಾವು ಗಂಭೀರರಾಗಿದ್ದೆವು. ಅವರಿಗೆ ಒಳ್ಳೆಯ ಇಂಗ್ಲಿಷ್ ಬೇಕಾಗುತ್ತದೆಂದು ನಾವು ತಿಳಿದವರಾಗಿದ್ದೆವು. ನಮ್ಮ ಬ್ಯಾಂಕು ಒದಗಿಸುವ ರಜಾವಿಹಾರ ಸಂದರ್ಭದಲ್ಲಿ ದಿಲ್ಲಿಗೆ ಹೋದಾಗ ೩ರಿಂದ ೧೦ನೆಯ ತರಗತಿಯವರೆಗಿನ NCERT, CBSEಯ ಎಲ್ಲ ಪುಸ್ತಕಗಳನ್ನು ಹೊತ್ತು ತಂದಿದ್ದೆವು. ಸಾಲದ್ದಕ್ಕೆ ಮಕ್ಕಳ ಶಿಕ್ಷಣದ ಬಗೆಗೆ ಅತ್ಯಂತ ಕಾಳಜಿಯಿದ್ದ ನಮ್ಮ ಭಾವನವರೊಬ್ಬರು ಹೊಸ-ಹಳೆಯ ಗಣಿತ-ವಿಜ್ಞಾನಗಳ ಪುಸ್ತಕಗಳನ್ನು ಸಂಗ್ರಹಿಸುತ್ತಿದ್ದರು. ಅವು ನಮಗೂ ಆಗುತ್ತಿದ್ದುವು. ಮನೆಯಲ್ಲಿ ಮಕ್ಕಳ ಸಾಹಿತ್ಯ ಪುಸ್ತಕಗಳಿದ್ದುವು. ದಿನ-ವಾರ-ಮಾಸ ಪತ್ರಿಕೆಗಳಂತೂ ಇದ್ದೇ ಇರುತ್ತಿದ್ದುವು. ಕನ್ನಡ ಪಠ್ಯಗಳ ಜೊತೆಗೆ ಇಂಗ್ಲಿಷ್ ಮಾಧ್ಯಮಗಳಲ್ಲೂ ಓದಿಸುತ್ತಿದ್ದೆವು. ನಿಧಾನವಾಗಿ ಅದೂ ಅರ್ಥವಾಗುತ್ತಿತ್ತು. ಈ ಓದು ಐಚ್ಛಿಕವಾಗಿ ಇರುತ್ತಿದ್ದುದರಿಂದ ಮಕ್ಕಳು ಅದನ್ನು ಸಂತೋಷದಿಂದ ಓದುತ್ತಿದ್ದರು. ತಪ್ಪಾದರೇನೆಂಬ ಭಯ-ಒತ್ತಡವಿರುತ್ತಿರಲಿಲ್ಲ. ನಾವಿಬ್ಬರೂ ಮನೆಯಲ್ಲಿ ಅಗತ್ಯಕ್ಕನುಗುಣವಾಗಿ ಕೆಲವು ಸಲ ವಿಸ್ತೃತವಾಗಿ ಪಾಠ ಹೇಳುತ್ತಿದ್ದೆವು.

ನನಗೆ ಎಂದಾದರೂ ೪-೬ ದಿನಗಳ ರಜೆ ಸಿಕ್ಕರೆ ಮಕ್ಕಳ ಶಾಲೆ ಬಿಡಿಸಿ ಪ್ರವಾಸಕ್ಕೆಂದು ಹೊರಟುಬಿಡುತ್ತಿದ್ದೆವು. ಶಾಲೆ ತಪ್ಪಿಸುವ ಅವರ ಆತಂಕವನ್ನು 'ತಿಳಿದ ಭಾಷೆಯ ಓದಲ್ಲವೆ? ಒಂದೇ ದಿನದಲ್ಲಿ ಸರಿದೂಗಿಸಿಕೊಳ್ಳುತ್ತೀರಿ,' ಎಂದು ಹೇಳುವ ಮೂಲಕ ದೂರಮಾಡುತ್ತಿದ್ದೆವು. ಹೀಗೆ ಮಕ್ಕಳ ಶಾಲೆ ಒತ್ತಡದಿಂದ ಮುಕ್ತವಾಗುವುದಕ್ಕೆ ಸಾಧ್ಯವಾಯಿತು. ಮಡಿಕೇರಿಯ ಸರಕಾರಿ ಶಾಲೆಯ ಶಿಕ್ಷಕಿ, ಅವರ ಮಕ್ಕಳು ಇಂಗ್ಲಿಷ್ ಶಾಲೆಯಲ್ಲಿ ಓದುತ್ತಿದ್ದರು ನನ್ನ ಚಿಕ್ಕ ಮಗನಿಗೆ ಕೇಳುತ್ತಿದ್ದರು, 'ನಿಮ್ಮಪ್ಪ ಬ್ಯಾಂಕಿನಲ್ಲಿದ್ದರೂ ಎಷ್ಟೊಂದು ಜಿಪುಣ. ನಿಮ್ಮನ್ನು ಸರಕಾರೀ ಶಾಲೆಯಲ್ಲಿ ಓದಿಸುತ್ತಿದ್ದಾರೆ!' ನಿಜ. ಇಂಗ್ಲಿಷ್ ಶಾಲೆಯ ಮಕ್ಕಳಂತೆ ಹೆಚ್ಚಿನ ಶುಲ್ಕ, ಮನೆಪಾಠ ಖರ್ಚುಗಳು ಇರಲಿಲ್ಲ. ಅದರಿಂದ ಉಳಿದ ಹಣ ಹಾಗೂ ಸಮಯವನ್ನು ನಾವು ಪುಸ್ತಕ-ಪ್ರವಾಸಗಳಿಗೆ ಬಳಸುತ್ತಿದ್ದೆವು.

ಮುಗಿಸುವ ಮುನ್ನ: ಮಾತೃಭಾಷೆಯ ಮಾಧ್ಯಮ ತಾಯ ಎದೆ ಹಾಲಿನಂತೆ ಸಹಜವಾದ ಆರಂಭ ಪಡೆಯಬೇಕು. ಮಗು ಕೊಂಚ ದೊಡ್ಡದಾದಾಗ ಕೊಡಬೇಕಾದ ಗಟ್ಟಿ ಆಹಾರದಂತೆ ಇಂಗ್ಲಿಷನ್ನೂ ಅದರೊಂದಿಗೆ ಸೇವಿಸಬೇಕು. ಅಂದ ಹಾಗೆ ನನ್ನ ಮೊದಲ ಮಗ ಸಂಕೇತ. ಒಂಬತ್ತನೆಯ ತರಗತಿಯವರೆಗೆ ಕನ್ನಡದಲ್ಲಿ ಓದಿದವ. ಈಗ ಎಂ.ಟೆಕ್., ಪಿಎಚ್.ಡಿ. ಮಾಡಿ ಡಾ। ಸಂಕೇತ ಪಾಟೀಲ ಆಗಿದ್ದಾನೆ. ಸೀಮೆನ್ಸ್‌ನಲ್ಲಿ ಒಳ್ಳೆಯ ಕೆಲಸದಲ್ಲಿದ್ದಾನೆ. ಚಿಕ್ಕವ ನಿಕ್ಷೇಪ. ಬಿ.ಎಂ.ಎಸ್.ಕಾಲೇಜಿನಲ್ಲಿ ಬಿ.ಇ. ಮುಗಿಸಿ ಅಮೇರಿಕದ ಟೆಕ್ಸಸ್ ಯುನಿವರ್ಸಿಟಿಯಲ್ಲಿ ಎಂ.ಎಸ್. ಮಾಡಿದ್ದಾನೆ. ಸದ್ಯ ಅಲ್ಲೇ ಒಳ್ಳೆಯ ಕೆಲಸದಲ್ಲಿದ್ದಾನೆ. ಇಬ್ಬರಿಗೂ ಓದುವ ಹವ್ಯಾಸವಿದೆ. ಸಂಕೇತ ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ಸಾಹಿತ್ಯ ಪರಿಷತ್ತಿನ ರಾಜ್ಯಮಟ್ಟದ ಕಥಾಸ್ಪರ್ಧೆಯಲ್ಲಿ ಬಹುಮಾನ ಪಡೆದಿದ್ದ. ಕನ್ನಡ-ಇಂಗ್ಲಿಷ್‌ಗಳೆರಡರಲ್ಲೂ ಕವಿತೆ ಬರೆಯುತ್ತಾನೆ. ಇಬ್ಬರಿಗೂ ಎರಡೂ ಭಾಷೆಯ ಪುಸ್ತಕ ಖರೀದಿಸುವ ಹವ್ಯಾಸವಿದೆ. ನನ್ನ ಪುಟ್ಟ ಪುಸ್ತಕ ಸಂಗ್ರಹ ಬೆಳೆಸಿದ್ದೂ ಅಲ್ಲದೇ ವಾರಸುದಾರರೂ ಆಗಿದ್ದಾರೆಂಬ ಸಂತೋಷ ನನಗಿದೆ.

**-ವಿಜಯೇಂದ್ರ ಪಾಟೀಲ**

---

ಪ್ರಿಯ ಓದುಗರೇ,

ಪತ್ರಿಕೆ ನವ ಮಾನ ಮಾಸಿಕದ ಹೆಸರಲ್ಲೇ ಮುಂದುವರೆಯಬೇಕೇ ಅಥವಾ ಅಂಚೆ ದರ ಮತ್ತು ಸರ್ಕಾರಿ ಜಾಹೀರಾತುಗಳಿಗೆ ಅರ್ಹತೆ ಒದಗಿಸುವ 'ಹೊಸ ಮನುಷ್ಯ' ಎಂಬ ಅಧಿಕೃತವಾಗಿ ನೋಂದಿತವಾಗಿರುವ ಹೆಸರಿನಲ್ಲಿ ಬಂದರೆ ಚೆನ್ನವೋ ಎಂಬ ನಮ್ಮ ಪ್ರಶ್ನೆಗೆ ಕೆಲವೇ ಕೆಲವು ಓದುಗರು ಮಾತ್ರ ಪ್ರತಿಕ್ರಿಯಿಸಿದ್ದಾರೆ. ಇವರಲ್ಲಿ ಬಹುಪಾಲು ಜನ ಪತ್ರಿಕೆಯು 'ನವ ಮಾನ ಮಾಸಿಕ' ಎಂಬ ಹೆಸರಲ್ಲೇ ಮುಂದುವರಿಯಲಿ ಎಂದು ಅಭಿಪ್ರಾಯಪಟ್ಟಿದ್ದಾರೆ. ಇದು ಸಾಧ್ಯವಾಗಬೇಕಾದರೆ ಅಂಚೆ ವೆಚ್ಚ ಸರಿದೂಗಿಸಲು ಪ್ರತಿ ಸಂಚಿಕೆಗೂ ಒಂದೂ ಮುಕ್ಕಾಲು ಪುಟದಷ್ಟು ಜಾಹೀರಾತು ಅಗತ್ಯವಾಗುತ್ತದೆ. ನಮ್ಮದು ಸುಲಭ ಜಾಹೀರಾತು ದರ:

**ಒಂದು ಒಳ ಪೂರ್ಣ ಪುಟ: ರೂ.೧೦೦೦/- ಅರ್ಧ ಒಳಪುಟ : ರೂ. ೫೦೦/- ಅರ್ಧ ಹೊರ ಪುಟ: ರೂ. ೬೦೦/- ಕಾಲು ಹೊರ ಪುಟ: ರೂ. ೩೦೦/-**

ಓದುಗರು ತಮ್ಮ ಸಂಪರ್ಕ ಬಳಸಿ ಜಾಹೀರಾತು ಒದಗಿಸಲು ಕೋರುತ್ತೇವೆ.-**ಸಂಪಾದಕ.**

# ಕಲೆ-ಸಾಹಿತ್ಯ-ಸಂಸ್ಕೃತಿ ಇತ್ಯಾದಿ



**ಗೆ**ಳೆಯ ಜಯಂತ ಕಾಯ್ಕಿಣಿ ಕಳೆದ ತಿಂಗಳು ತಮ್ಮ ತಂದೆ ಗೌರೀಶ ಕಾಯ್ಕಿಣಿಯವರ ಶತಮಾನೋತ್ಸವ ಆಚರಣೆಯ ಮುಕ್ತಾಯ ಸಮಾರಂಭದ ಆಹ್ವಾನ ಪತ್ರ ಕಳಿಸಿದಾಗ ನನ್ನ ಗಮನ ಸೆಳೆದದ್ದು, ಆ ಆಹ್ವಾನ ಪತ್ರದ ವಿವರಗಳಿಗಿಂತ ಹೆಚ್ಚಾಗಿ ಅದರ ಹಿಂಬದಿಯಲ್ಲಿ ಮುದ್ರಿತವಾಗಿದ್ದ ಈ ಮೇಲಿನ ಛಾಯಾ ಚಿತ್ರ.. ಸುಮಾರು ಅರವತ್ತು ವರ್ಷಗಳ ಹಿಂದಿನ ಈ ಚಿತ್ರವನ್ನು ಈಗ ಸಂಸ್ಕರಿಸಿ ಮುದ್ರಿಸಿ ಹಂಚಿರುವವುದರ ಹಿಂದೆ ಒಂದು ಸೂಕ್ಷ್ಮ ಭಾವನಾತ್ಮಕತೆ ಮತ್ತು ಅದಕ್ಕಿಂತ ಹೆಚ್ಚಾಗಿ ಒಂದು ವಿಶಿಷ್ಟ ಸಾಂಸ್ಕೃತಿಕ ಕಾಳಜಿ ಇದೆ. ಅದು ಈ ಚಿತ್ರವನ್ನು ನೋಡಿದವರೆಲ್ಲರಿಗೂ ತಾಕುವಷ್ಟು ಜೀವಂತವಾಗಿದೆಯಾದರೂ, (ಈ ಚಿತ್ರ ಈ ಪತ್ರಿಕೆಯಲ್ಲಿ ಹೇಗೆ ಮೂಡುವುದೋ ಎಂಬ ಆತಂಕ ನನಗಂತೂ ಇದ್ದೇ ಇದೆ!) ಇಲ್ಲಿ ಜಯಂತ್ ನನ್ನ ಕೋರಿಕೆಯ ಮೇರೆಗೆ ಅದನ್ನು ತಮ್ಮದೇ ವಿಶಿಷ್ಟ ಶೈಲಿಯಲ್ಲಿ ವಿಸ್ತೃತವಾಗಿ ನಿರೂಪಿಸಿದ್ದಾರೆ-**ಸಂ.**

ಗೆಶಿಳ-ಶಿಶಿರ ಆಸುಪಾಸಿನ ಈ ಕಪ್ಪು ಬಿಳುಪು ಗ್ರೂಪ್ ಫೋಟೋ ತನ್ನ ಇಡಿಯಲ್ಲಿಯೂ, ಬಿಡಿಯಲ್ಲಿಯೂ ವಿಶಿಷ್ಟವೊಂದನ್ನು ಉದ್ದೀಪಿಸುವಂತಿದೆ. ಇದು ಗೋಕರ್ಣದಲ್ಲಿ ನಮ್ಮ ಮನೆಯ ಪಕ್ಕದಲ್ಲಿರುವ ಮೂಳೆ ಶೇಷಂಭಟ್ಟರ ಮನೆಯ ಹಿಂಗಡೆ ಬಾವಿ ಕಟ್ಟೆಯ ಬಳಿ ತೆಗೆದದ್ದು. ಈ ಶೇಷಂ ಭಟ್ಟರು ಬಿಷಪ್ಪರಿಗೆ ಹಸ್ತೋದಕ ಕೊಟ್ಟು ಉದ್ದಂಡ ನಮನ ಮಾಡಿದ ಧೀಮಂತ. ಈ ಮನೆಗೆ ಮೂಲೆ ಮನೆ ಅಂತಲೂ ಹೇಳುತ್ತೇವೆ. ನಾನು ನನ್ನ ಬಾಲ್ಯದ ಗೆಳೆಯ ನೀಲಕಂಠ, ಪನ್ಮೇಚ ಇದೇ ಬಾವಿಕಟ್ಟೆಯಲ್ಲಿ ಆಡುತ್ತಿದ್ದೆವು. ಅದರ ಹಿಂದಿನ ತೆಂಗಿನ ಮಡ್ಲಿನ ಪರ್ಣಕುಟಿಯಲ್ಲಿ ಕೊಟ್ಟಿಗೆ ಇದ್ದ ನೆನಪು. ಆ ಬಾವಿ ಕಟ್ಟೆಯ ಮೇಲೆ ಈ ಕನ್ನಡದ ಕಣ್ಮಣಿಗಳು ಕೂತಿರುವ ಈ ಚಿತ್ರವನ್ನು ಇತ್ತೀಚೆಗೆ ನೋಡಿದ್ದೇ ಮೈ ಜುಮ್ಮೆಂದಿತು. ಇದನ್ನು ತೆಗೆದವರು ಗಂಗಾರಾಂ ರಜಪೂತ ಎಂಬ ಛಾಯಾಗ್ರಾಹಕ. ಅವರು ಆ ದಿನಗಳಲ್ಲಿ ಗೋಕರ್ಣದಲ್ಲಿದ್ದರು. ನಂತರ ಆತ ದಾಂಡೇಲಿಗೆ ಪೇಪರ್ ಮಿಲ್‌ನಲ್ಲಿ ಛಾಯಾಗ್ರಾಹಕರಾಗಿ ಸೇರಿಕೊಂಡಿದ್ದರು. ಅವರ ಮಗ ಅಜಿತ್ ಈಗ ದಾಂಡೇಲಿಯಲ್ಲಿ 'ಗೀತಾ ಸ್ಟುಡಿಯೋ' ಅಂತ ಇಟ್ಟುಕೊಂಡಿದ್ದಾನೆ. ಅವನು ಎರಡು ವರ್ಷಗಳ ಹಿಂದೆ ನನಗೆ ಉಡುಗೊರೆಯಾಗಿ ಈ ಚಿತ್ರ ಕೊಟ್ಟ.

ಇಲ್ಲಿ ಮುಂದಿನ ಸಾಲಿನಲ್ಲಿ ತೀರ ಎಡಕ್ಕೆ ಇದ್ದವರು ಬಿ.ಎಚ್.ಶ್ರೀಧರ ಮತ್ತು ವೈಯೆನ್ಕೆ ಎಂದು ನನಗೆ ಅನುಮಾನ . ಬೇಂದ್ರೆಯವರ ಪಕ್ಕ ತೊಡೆಗೆ ತೊಡೆ ಕೊಟ್ಟು ಆಪ್ತರಾಗಿ ಕೂತ ತರಾಸು, ಗೌರೀಶ ಕಾಯ್ಕಿಣಿ, ಎಕ್ಕುಂಡಿ(ಗದ್ದ ಮೇಲೆ ಕೈ ನೋಡಿ!), ರಾಮಚಂದ್ರ ಶರ್ಮ ಮತ್ತು ವಟುವಿನಂತೆ ಕಾಣುವ ಎಳೆ ಗೋಪಾಲಕೃಷ್ಣ ಅಡಿಗ! ತಮ್ಮ ತಮ್ಮ ಸಾಹಿತಿಗಳ ಗಂಡಂದಿರ ಹಿಂದೆ ಕೂತ ಆಯಾ ಹೆಂಡತಿಯರ ಬದ್ಧ ಭೂಮಿಕೆಯೂ ಚೆಂದ. ಗೌರೀಶರ ಹಿಂದೆ ನನ್ನ ತಾಯಿ ಶಾಂತಾ ಇದ್ದಾರೆ.(ಮತ್ತೆ ಗದ್ದಕ್ಕೆ ಸ್ಟೈಲಿಶ್ ಆಗಿ ಕೈಯಿಟ್ಟುಕೊಂಡು) ಶಾಂತಾರ ಬಲಕ್ಕೆ ಹಿರಿಯರಾದ ದಾಮೋದರ ಚಿತ್ತಾಲ ಇದ್ದಾರೆ. (ಕನ್ನಡಕ, ಕೋಟು) ಇವರ ಬಗ್ಗೆ ದಾಮಣ್ಣ ಎಂಬ ವಿಖ್ಯಾತ ಕವಿತೆಯೊಂದನ್ನು ಗಂಗಾಧರ ಚಿತ್ತಾಲರು ಬರೆದಿದ್ದಾರೆ. ಈ ದಾಮೋದರ ಚಿತ್ತಾಲರ ಹಿಂಬದಿಗೆ ಬಲಕಟ್ಟೆಯ ಮೆಲೆ ಕೂತ ನೀಳ ಕಾಯದವರು ವಿಖ್ಯಾತ ಗಾಯಕ, ಸಂಗೀತ ತಜ್ಞ ರಮೇಶ ನಾಡಕರ್ಣಿ. ಇವರು ಬೇಂದ್ರೆಯವರ 'ಕಲ್ಪವೃಕ್ಷ' ಒಳಗೊಂಡು ಎಕ್ಕುಂಡಿಯವರ ಅನೇಕ ಗೀತೆಗಳನ್ನು ಆಕಾಶವಾಣಿಯಲ್ಲಿ ಹಾಡಿ ಜನಪ್ರಿಯಗೊಳಿಸಿದ್ದಾರೆ. ನಂತರ ಮುಂಬೈಯಲ್ಲಿ ಬಹುಕಾಲ ರೇಡಿಯೋದಲ್ಲಿ ಸಂಗೀತ ತಜ್ಞರಾಗಿ ದುಡಿದವರು. ಮಲ್ಲಿಕಾರ್ಜುನ ಮನ್ಸೂರರ ಆಪ್ತವರ್ತಿ. ಹಿಂದಿನ ಸಾಲಿನಲ್ಲಿ ಮೂಲೆ ಮಧ್ಯದಲ್ಲಿ

ಬಾವಿಕಟ್ಟೆಯ ಗಡಗಡೆಯ ಕೆಳಗೆ ಅಧ್ಯಕ್ಷನಂತೆ ಎರಡೂ ಕೈಗಳನ್ನು ಎರಡೂ ತೊಡೆಗಳ ಮೇಲೆ ಇಟ್ಟು ಕೂತವರು ಖ್ಯಾತ ಬೆಳಗಾಂ ವಕೀಲ, ಲೇಖಕ ರಂಗರಾವ ತಲಚೋರಕರ್. ಇವರು ವಿಶಿಷ್ಟ ವಕೀಲಿ ಕೇಸುಗಳನ್ನು ಆಧರಿಸಿ ಕಥೆಗಳನ್ನು ಬರೆಯುತ್ತಿದ್ದರು. ತಕ್ಷಣ ಹೊಳೆಯುವ ವಿಷಾದದ ಸಂಗತಿ ಎಂದರೆ, ಮುಂದಿನ ಸಾಲಿನಲ್ಲಿ ಕೂತವರ ತೊಡೆಯ ಮೇಲಿರುವ ಅನಾಮಿಕ ಮಗು ಮತ್ತು ಈಗ ಗೋಕರ್ಣದ ಮನೆಯಲ್ಲಿ ಬಹುಪಾಲು ಮಗುವಿನಂತೆಯೇ ಆಗಿರುವ ಶಾಂತಾರನ್ನು ಬಿಟ್ಟರೆ ಈ ವೃಂದದ ಯಾರೂ ಈ ಉಪಗ್ರಹದ ಮೇಲೆ ಈಗ ಇದ್ದಂತಿಲ್ಲ.

ವ್ಯಕ್ತಿಗತವಾಗಿ ವಿಭಿನ್ನ ಹುಡುಕಾಟ, ನೋಟ, ನಿಲುವುಗಳಿದ್ದರೂ, ಒಟ್ಟಾರೆ ಸೇರಿ ಏನೋ ಒಂದು ಒಳ್ಳೆಯದರಲ್ಲಿ ತೊಡಗಿರುವ ಭಾವವೊಂದು ಇಲ್ಲಿ ನಿಚ್ಚಳವಾಗಿದೆ. 'ಬೇಂದ್ರೆ–ತರಾಸು ತೊಡೆನಾಟ' ಇದಕ್ಕೆ ಸೊಗಸಾದ ಸಾಕ್ಷಿ. ಬೇಂದ್ರೆ ಮತ್ತು ಅಡಿಗರ ನಡುವೆ ಕಾಯ್ಕಿಣಿ, ಎಕ್ಕುಂಡಿ, ಶರ್ಮ ಇರುವುದೇ ಒಂದು ರೂಪಕ. ಬಹುಶಃ ಇದು ಆಗ ನಡೆದಿದ್ದ ಕುಮುಟಾ ಸಾಹಿತ್ಯ ಸಮ್ಮೇಳನಕ್ಕೆ ಬಂದ ಕೆಲವು ಅತಿಥಿಗಳು ಗೋಕರ್ಣವನ್ನೂ ನೋಡಿಕೊಂಡು ಹೋಗಲು ಬಂದಾಗ ನಡೆದ ಕೂಟ ಕಲಾಪ. ಬಾವಿಯಲ್ಲಿ ಹಾರುವುದು ಹೇಗೆ ಅಥವಾ 'ಹಾರಲೇ ಬೇಕೆ?' ಎಂಬ ಕುರಿತು ತಲಸ್ಪರ್ಶಿ ಅಧ್ಯಯನ ನಡೆದಿರಬಹುದೆಂಬ ವಕ್ರ ನೋಟವನ್ನೂ ಹೊಳೆಸುವಂತಿದೆ! ಕೃಷ್ಣಾಜಿನದ ಮೇಲೆ ಸಿವಿಲ್ ಡ್ರೆಸ್ಸಿನಲ್ಲಿರುವ ಸ್ವಾಮಿಯಂತೆ ಕೂತಿರುವ ಬೇಂದ್ರೆಯವರ ನಗುವೂ– " ಇದೂ ಒಂದು ಆಗಿ ಹೋಗಲಪ್ಪಾ" ಎನ್ನುವಂತಿದೆ. ಅಡಿಗರು ಮಾತ್ರ ಆಗಷ್ಟೇ ಅವರು ಮೊಳಗಿಸಿದ್ದ ಚಂಡೆ ಮದ್ದಳೆಯ ಅನುರಣದ ಸೂಕ್ಷ್ಮ ಸುಪ್ತ ಬಂಡಾಯದ ಸೌಮ್ಯ ಆವೃತ್ತಿಯಲ್ಲಿ, ಇನ್ನೂ ಹಚ್ಚದಿರುವ ಸಿಗರೇಟಿನಂತೆ ಕಾಣುತ್ತಿದ್ದಾರೆ. ಕುಮುಟಾ ಸಮ್ಮೇಳನದಲ್ಲಿ ಬೇಂದ್ರೆ ಮತ್ತು ನವ್ಯದ ನಡುವಣ ಯುದ್ಧ ಘೋಷಣೆ ಅದಾಗಲೇ ಆಗಿತ್ತಂತೆ! ರಮ್ಯ, ಪ್ರಗತಿಶೀಲ, ನವ್ಯಗಳ 'ಶಾರ್ಟ್ ಸರ್ಕೀಟ್' ಆಗುವಷ್ಟರ ಮಟ್ಟಿಗಿನ ವಿದ್ಯುದಾಲಿಂಗನ ಇಲ್ಲಿದೆ! ಇಷ್ಟೆಲ್ಲ ಬಿಡಿಗಳನ್ನು ಒಂದಾಗಿಸುವ ಸಂಯುಕ್ತವಾದ ಒಂದು ಇಡಿ ಮನಸ್ಸಿನ ಹಾಜರಿಯೇ ಈ ಚಿತ್ರವನ್ನು ಮತ್ತೆ ಮತ್ತೆ ನೋಡಲು ನಮ್ಮನ್ನು ಒತ್ತಾಯಿಸುವಂತಿದೆ. ಸ್ವಲ್ಪ ಪ್ರಯತ್ನಪಟ್ಟರೂ ಆ ಮನಸ್ಸನ್ನು ನಾವು ಎಟುಕಬಹುದಾಗಿದೆ ಎಂಬುದೇ ಖುಷಿಯ ಸಂಗತಿಯಾಗಿದೆ.

ಈ ಫೋಟೋ ನೋಡುತ್ತಿದ್ದರೆ ಹಳೆಯ ಕಪಾಟಿನ ಹಳೆಯ ಪುಸ್ತಕದ ಪುಟಗಳ ಗಂಧ, ತಲತ್ ಮಹಮೂದನ ಕಂಪಿತ ಸ್ವರಗಳ ಹಾಡುಗಳು ಜಾತ್ರೆಗೆ ಬಂದ ನಾಟಕ ಕಂಪನಿಯ ಡೈನಮೋ ಸದ್ದು ಎಲ್ಲ ಸೇರಿದ ಅಭಿನಯವೊಂದನ್ನು ಉಕ್ಕಿಸುವ ಸಣ್ಣ ಗದ್ಯದ ಭಾವದ ಜೊತೆಗೆ 'ಸತ್ಯಾರ್ಥಿ'ಗಳ ದಾರಿಯ ವಿನಯ ಮತ್ತು ಮುಕ್ತಗೊಳಿಸಬಲ್ಲ ಭಂಗುರತೆಯೂ ಆವರಿಸಿಕೊಳ್ಳುತ್ತದೆ.

–ಜಯಂತ ಕಾಯ್ಕಿಣಿ

---

ನೂರರ ನೆನಪು

# ಕನ್ನಡವೇ ಸರ್ವಸ್ವವಾಗಿದ್ದ ಜಯದೇವಿ ತಾಯಿ ಲಿಗಾಡೆ

**ಎದೆ ತುಂಬಿ ಹಾಡಿದರೆ ಹಾಲ–ಹಳ್ಳವೆ ಹರಿದು**
**ಮುಳ್ಳು ಕಂಟಿಗಳೆದೆಯ ಕೊಳ್ಳವೂ ತುಂಬುವುದು**
**ತುಳುಕುವುದು ಸೊನ್ನಲಾಪುರದ ಸಿದ್ಧರಾಮನ ಕೆರೆ**

**ಜ**ಯದೇವಿ ತಾಯಿ ಲಿಗಾಡೆಯವರ ಬರವಣಿಗೆಯನ್ನು ಹೀಗೆ ಬಣ್ಣಿಸಿದ್ದಾರೆ, ಹಿರಿಯ ಕವಿ ಚೆನ್ನವೀರ ಕಣವಿ. ಡಾ. ಜಯದೇವಿ ಲಿಗಾಡೆ ಒಬ್ಬ ವ್ಯಕ್ತಿಯಲ್ಲ;ಪ್ರಚಂಡ ಶಕ್ತಿ ಎನ್ನುವುದು ಖಂಡಿತ ಕ್ಲೀಶೆಯ ಮಾತಲ್ಲ. ಅವರ ಸಾಧನೆ ಅನುಪಮ ಹಗೂ ಅಮೋಘ ಎಂಬುದು ಅವರ ಜೀವನವನ್ನೊಮ್ಮೆ ಅವಲೋಕಿಸಿದರೆ ತಿಳಿದುಬರುತ್ತದೆ. ವಿಕ್ಟೋರಿಯಾ ರಾಣಿಯ ಆಡಳಿತದ ಅವಧಿಯಲ್ಲಿ ಭಾರತದ ಹನ್ನೆರಡು ಮಂದಿ ಪ್ರತಿಷ್ಠಿತ ಶ್ರೀಮಂತರಲ್ಲಿ ಒಬ್ಬರಾಗಿದ್ದ ಸೊನ್ನಲಿಗೆ(ಈಗಿನ ಸೊಲ್ಲಾಪುರ) ವಾರದ ಮಲ್ಲಪ್ಪ ಇವರ ಅಜ್ಜ 'ಇಂದ್ರ ಭವನ'ದಲ್ಲಿ ೧೯೧೨ರ ಜೂನ್ ೨೩ರಂದು ಜನಿಸಿದ ಜಯದೇವಿಯವರ ತವರು ಮನೆ ಮಡಕಿ ಮನೆತನದ್ದಾದರೆ, ಲಿಗಾಡೆ ಮನೆತನ ಇವರ ಗಂಡನ ಮನೆ. ಹೀಗೆ ಸೊಲ್ಲಾಪುರದ ಮೂರು ಪ್ರತಿಷ್ಠಿತ ಮನೆತನಗಳ ಅಂಗಳದಲ್ಲಿ ಅರಳಿದ ಕುಸುಮ ಜಯದೇವಿ.

ಇಷ್ಟೇ ಆಗಿದ್ದರೆ, ನಾವು ಅವರನ್ನು ಸ್ಮರಿಸುವ ಅಗತ್ಯವಿರಲಿಲ್ಲ. ಅಗಾಧ ಶ್ರೀಮಂತಿಕೆಯಿದ್ದರೂ ಅವರು ನಿರ್ಮೋಹಿಯಾಗಿದ್ದರು. ವಸ್ತು ಒಡವೆಗಳನ್ನು ತ್ಯಜಿಸಿ ಪರಿಶುಭ್ರ ಖಾದಿ, ಕೈ ಕೊರಳಲ್ಲಿ ರುದ್ರಾಕ್ಷಿ ಧರಿಸುತ್ತಿದ್ದರು. ತಾತ್ವಿಕವಾಗಿ ಬಸವಣ್ಣ, ಅಧ್ಯಾತ್ಮಿಕವಾಗಿ ಸಿದ್ಧರಾಮ, ರಾಷ್ಟ್ರೀಯತೆಗಾಗಿ ಗಾಂಧೀಜಿಯಿಂದ ಪ್ರಭಾವಿತರಾಗಿದ್ದರು. ಮೌಲ್ಯಗಳನ್ನು ಸಾಹಿತ್ಯಕವಾಗಿ ಅಭಿವ್ಯಕ್ತಿಸಿದರಲ್ಲದೆ, ವೈಯುಕ್ತಿಕವಾಗಿ ಅವನ್ನು ಬದುಕಿ ಸಾಮಾಜಿಕವಾಗಿ ಆಚರಣೆಯಲ್ಲಿ ತಂದರು. ಮೂರು ಮಕ್ಕಳ ತಾಯಿಯಾದ ನಂತರ ಕನ್ನಡ ಕಲಿತು(ಇವರಿಗೆ ಬಾಲ್ಯದಲ್ಲಿ ಕನ್ನಡ ಕಲಿಯಲು ಅವಕಾಶಗಳಿರಲಿಲ್ಲ.) ಜಯಗೀತೆ, ತಾಯಿಯ ಪದಗಳು, ತಾರಕ ತಂಬೂರಿ, ಸಾವಿರದ ಪದಗಳು, ಬಂದೇವ ಕಲ್ಯಾಣಕೆ, ಅರಿವಿನಾಗರದಲ್ಲಿ ಮೊದಲಾದ ಕೃತಿಗಳನ್ನು ರಚಿಸಿದರು. ಕನ್ನಡದ್ದೇ ಆದ ಅಚ್ಚ ದೇಶಿ ಛಂದಸ್ಸಿನಲ್ಲಿ ೪೧ ಸಂಧಿಗಳ, ೪೧೦೦ ಪದ್ಯಗಳುಳ್ಳ ಶ್ರೀ ಸಿದ್ಧರಾಮೇಶ್ವರ ಪುರಾಣ ಎಂಬ ಮಹಾಕಾವ್ಯ ರಚಿಸಿದರು. ಮಹಿಳಾ ಹೃದಯದ ರಸಾನುಭೂತಿಯೆಲ್ಲ ಈ ಕೃತಿಯಲ್ಲಿ ಒಡಮೂಡಿದೆ ಎಂಬ ವಿ.ಕೃ. ಗೋಕಾಕರು ಬಣ್ಣಿಸಿದ್ದಾರೆ. ಜಯದೇವಿಯವರು ಕನ್ನಡ–ಮರಾಠಿ ಭಾಷೆಗಳಲ್ಲಿ ಒಟ್ಟು ಹದಿನಾರು ಕೃತಿಗಳನ್ನು ರಚಿಸಿದ್ದಾರೆ.



ಆ ಕಾಲಕ್ಕೆ ಸೊಲ್ಲಾಪುರ ದಕ್ಷಿಣ ಭಾರತದಲ್ಲೇ ಅತಿ ಹೆಚ್ಚಿನ ಕಾರ್ಖಾನೆಗಳುಳ್ಳ (ಮುಖ್ಯವಾಗಿ ಬಟ್ಟೆ ಗಿರಣಿಗಳು) ನಗರವಾಗಿತ್ತು. ಅವುಗಳಲ್ಲಿನ ಮುವ್ವತ್ತು ಸಾವಿರ ಕಾರ್ಮಿಕರ ಮಕ್ಕಳಿಗಾಗಿ ತಾಯಿ ಲಿಗಾಡೆಯವರು ಕನ್ನಡ ಶಾಲೆ ತೆರೆದರು. ಶಾಲೆ ತೆರೆದ ಎರಡನೇ ವರ್ಷವೇ ೨೫ ವರ್ಗಗಳಿಗೆ ಬೇಡಿಕೆ ಬಂತು! ಹೀಗೆ ಕಾರ್ಮಿಕರ ಪರ, ಕನ್ನಡ ಪರ ನಿಲ್ಲುವ ಮೂಲಕ ಕಾರ್ಮಿಕರ ಮಕ್ಕಳು ಕಾರ್ಮಿಕರೇ ಆಗುವ ಅಗತ್ಯವಿಲ್ಲವೆಂಬುದನ್ನು ಆ ಸಮುದಾಯಕ್ಕೆ ಮನಗಾಣಿಸಿದರು. ಸೊಲ್ಲಾಪುರದ ಹರಿಜನ ಕೇರಿಗಳಿಗೆ ನೆರವು ನೀಡಿ, ಶಿಸ್ತು, ಸ್ವಚ್ಛತೆ, ಶಿಕ್ಷಣ ಮತ್ತು ಛಲದಿಂದ ಮಾತ್ರ ದಲಿತರು ಮುಂಬರಲು ಸಾಧ್ಯ ಎಂದು ತಿಳಿಹೇಳಿದರು. ರಜಾಕಾರರ ಹಾವಳಿಗೆ ರೋಸಿ ಹೈದ್ರಾಬಾದ ಸಂಸ್ಥಾನದಿಂದ ಓಡಿ ಬಂದ ನಿರಾಶ್ರಿತರಿಗೆ ತಮ್ಮ ೪೦ ಎಕರೆ ಹೊಲದಲ್ಲಿ ಶಿಬಿರಗಳನ್ನು ಪ್ರಾರಂಭಿಸಿ ಆಶ್ರಯ ನೀಡಿದರು. ಶಿಬಿರದಲ್ಲಿದ್ದ ಗರ್ಭಿಣಿಯರ ಬಾಣಂತನ ಮಾಡಿ ತಾಯ್ತನ ಮೆರೆದರು. ಇದೇ ಸಂದರ್ಭದಲ್ಲಿ ಭಾಲ್ಕಿ ಹಿರೇಮಠದ ಚನ್ನಬಸವ ಪಟ್ಟದೇವರು ಕಳಿಸಿದ ಕನ್ನಡ ಶಾಲೆ ಮಕ್ಕಳಿಗೂ ಆಶ್ರಯ ನೀಡಿದ್ದಲ್ಲದೆ, ಪ್ರಭುರಾವ ಕಂಬಳಿವಾಲಾರ ಕರೆಗೆ ಓಗೊಟ್ಟು ಬೀದರಿಗೆ ೪೦೦ ಜನ ಕನ್ನಡ ಶಿಕ್ಷಕರನ್ನು ಕಳುಹಿಸಿಕೊಟ್ಟದ್ದು ತಾಯಿಯವರ ಬಹು ದೊಡ್ಡ ಸಾಧನೆ.

ಜಯದೇವಿ ತಾಯಿಯವರು ಬರೀ ಕನ್ನಡ ಸಾಹಿತಿ–ಹೋರಾಟಗಾರ್ತಿಯಾಗಿರಲಿಲ್ಲ. ಕನ್ನಡವೇ ಅವರ ಜೀವನದ ಸರ್ವಸ್ವವಾಗಿತ್ತು. ತಾವು ಅಧ್ಯಕ್ಷತೆ ವಹಿಸಿದ್ದ ಮಂಡ್ಯ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡಿಗರ ಅಭಿಮಾನ ಶೂನ್ಯತೆಗಾಗಿ ಅಕ್ಷರಶಃ ಅವರು ಕಣ್ಣೀರು

ಸುರಿಸಿದರು. ತಾಯಿಯವರ ಕಣ್ಣೀರನ್ನು ನೋಡಿ ಸಾಕ್ಷಾತ್ ಕನ್ನಡ ತಾಯಿಯೇ ಕಣ್ಣೀರು ಸುರಿಸಿದಳೆಂದು ಹಿರೇಮಲ್ಲೂರು ಈಶ್ವರನ್ ಬರೆದಿದ್ದಾರೆ. ಏಕೀಕರಣದ ನಂತರವೂ ಸಹ ಸಿದ್ಧರಾಮನಿಲ್ಲದ (ಅಂದರೆ ಸೊಲ್ಲಾಪುರವಿಲ್ಲದ) ಕರ್ನಾಟಕ ಅದು ಹೇಗೆ ಕರ್ನಾಟಕವಾದೀತೆಂದು ಎರಡೂವರೆ ದಶಕಗಳ ಕಾಲ ಅದರ ಸೇರ್ಪಡೆಗಾಗಿ ನಿರಂತರ ಹೋರಾಡಿದರು. ಬಿಟ್ಟುಹೋದ ಕನ್ನಡ ಭಾಗಗಳ ಸೇರ್ಪಡೆಯ ಈ ಹೋರಾಟವನ್ನು ಅವರು 'ಬೇಕೀಕರಣ' ಹೋರಾಟವೆಂದು ಕರೆದರು. ಹೋರಾಟ ಫಲಪ್ರದ ಆಗದ ಕಾರಣ ೧೯೮೦ರಲ್ಲಿ ಶರಣರ ಕಾಯಕ ಭೂಮಿ ಬಸವ ಕಲ್ಯಾಣಕ್ಕೆ ಬಂದು ನೆಲೆಸಿ ೧೯೮೯ರ ಜುಲೈ ೨೪ರಂದು ಕೊನೆಯುಸಿರೆಳೆದರು. ಅವರನ್ನು ಕುರಿತು ಒಬ್ಬ ಅನಾಮಿಕ ಕವಿ ಮನದುಂಬಿ ಹೀಗೆ ನುಡಿದಿದ್ದಾನೆ:

**ಹೇಗೆ ತೀರಿಸಬೇಕು ತಾಯಿ**
**ನಿನ್ನ ಋಣವ ಒಟ್ಟು**
**ನೆನೆದು ಹಡೆದ ಮಕ್ಕಳಿಗೆ**
**ನಿನ್ನ ಹೆಸರನಿಟ್ಟು**

ಉಪಕಾರ ಸ್ಮರಣೆಗೆ ಜನಪದರ ಈ ನುಡಿಗಿಂತ ದೊಡ್ಡ ಪ್ರಶಸ್ತಿ ಮತ್ತೊಂದಿಲ್ಲ. ಆ ತಾಯಿಗಿದೋ ನಮ್ಮ ನೂರರ ನುಡಿ ನಮನ

**–ಸಿ. ಚನ್ನಬಸವಣ್ಣ**

## ಪುಸ್ತಕಾವಲೋಕನ

**ಪು: ಕನ್ನಡ–ಕರ್ನಾಟಕ ಸಂಕಥನಗಳು ಲೇ: ಡಿ.ಎಸ್. ನಾಗಭೂಷಣ ಪ್ರ: ವಿಸ್ಮಯ ಪ್ರಕಾಶನ, ಮೈಸೂರು ಪು: ೨೨೪ ಬೆಲೆ: ರೂ.೧೬೦/–**

# ನಾಡು ನುಡಿಗಳ ಕುರಿತ ಆರ್ದ್ರ ಚಿಂತನೆ




**ಸ**ಮಾಜವಾದಿ ಚಿಂತಕರೂ, ಸಾಹಿತ್ಯ ವಿಮರ್ಶಕರೂ ಆಗಿರುವ ಡಿ.ಎಸ್. ನಾಗಭೂಷಣ ನಮ್ಮ ನಡುವಿನ ಸಂಸ್ಕೃತಿ ಚಿಂತಕರೂ ಹೌದು. ಇವರು ವರ್ತಮಾನದ ಬಿಕ್ಕಟ್ಟುಗಳಿಗೆ, ತುರ್ತುಗಳಿಗೆ ಮೊದಲಿನಿಂದಲೂ ತಮ್ಮ ಪ್ರಖರ ಮತ್ತು ನಿರ್ದಾಕ್ಷಿಣ್ಯ ಶೈಲಿಯ ಬರಹಗಳ ಮೂಲಕ ಆರ್ದ್ರವಾಗಿ ಸ್ಪಂದಿಸುತ್ತಾ ಬಂದಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ 'ಕನ್ನಡ–ಕರ್ನಾಟಕ ಸಂಕಥನಗಳು' (೨೦೦೯) ಕೃತಿಯನ್ನು ನೋಡಿದಾಗ ನಮ್ಮ ವರ್ತಮಾನದ ಅನೇಕ ಅಧ್ವಾನಗಳನ್ನು ಕಂಡು ಆತಂಕಗೊಂಡ ಮನಸ್ಸು ಪ್ರತಿಕ್ರಿಯಿಸಿದ ಬರಹಗಳ ಸಂಕಲನವಿದು ಎಂಬುದು ಗೊತ್ತಾಗುತ್ತದೆ. ಮೂವತ್ತು ಲೇಖನಗಳಿರುವ ಈ ಕೃತಿಯಲ್ಲಿ ಹೆಚ್ಚಿನವು ಕನ್ನಡ–ಕರ್ನಾಟಕಕ್ಕೆ ಸಂಬಂಧಿಸಿದ ಸಾಂಸ್ಕೃತಿಕ ಲೇಖನಗಳಾದರೆ, ಮಿಕ್ಕವು ರಾಜ್ಯದಲ್ಲಿ ಮಠಗಳು ಮತ್ತು ಮಠಾಧೀಶರು, ಕಲ್ಯಾಣ ಕ್ರಾಂತಿ, ನಕ್ಸಲ್ ಚಳುವಳಿ, ಶೂದ್ರ ರಾಜಕಾರಣದ ದುರಂತ ನಾಯಕರನ್ನು ಕುರಿತ ವಿಶ್ಲೇಷಣೆಗಳಾಗಿವೆ. ಕೊನೆಯಲ್ಲಿ ತಾವು ಮೆಚ್ಚಿದ ಸ್ಕೂಲ್ ಮಾಸ್ಟರ್ ಚಿತ್ರ, ರಾಜಕುಮಾರ್ ಮತ್ತು ಕುವೆಂಪು ಬಗಿಗಿನ ಮೆಚ್ಚುಗೆಯ ಬರಹಗಳಿವೆ.

ಇಲ್ಲಿನ ಅನೇಕ ಬರಹಗಳು ೨೦೦೫–೦೬ರಿಂದ ೨೦೧೨ರವರೆಗೆ ವಿವಿಧ ಪತ್ರಿಕೆಗಳಿಗೆ, ವಿಶೇಷಾಂಕಗಳಿಗೆ, ವಿಚಾರ ಸಂಕಿರಣಗಳಿಗೆ ಬರೆದ ಲೇಖನಗಳಾಗಿವೆ. ಹೀಗಾಗಿ ಇಲ್ಲಿನ ಸುಮಾರು ಲೇಖನಗಳು ಸಾಂದರ್ಭಿಕ ಬರಹಗಳಾಗಿರುವುದು ವಿಶೇಷ. ಹಾಗಾಗಿ ಲೇಖನಗಳನ್ನು ಬರೆದ ಸಂದರ್ಭ, ಹಿನ್ನೆಲೆ–ಮುನ್ನೆಲೆ ತಿಳಿಯದಿದ್ದರೆ ಬರಹಗಳ ಆಶಯ ತಿಳಿಯಲಾರದು.

ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ತನ್ನ ಅಸ್ಮಿತೆಯನ್ನೇ ಕಳೆದು ಕೊಂಡ ಕರ್ನಾಟಕ; ಕರ್ನಾಟಕದಲ್ಲಿ ಕನ್ನಡ ಕಟ್ಟುವ ಕಾಯಕಕ್ಕೆ ನಿರೀಕ್ಷಿತ ಫಲ ದೊರೆಯದಿರುವುದು; ಮೂಲ ಆಶಯಗಳನ್ನೇ ಮರೆತು ಸ್ಥೂಲ ಹೋರಾಟಗಳಲ್ಲಿ ತೊಡಗಿರುವ ಕನ್ನಡ ಪರ ಸಂಘಟನೆಗಳು; ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿ ಆಡಳಿತದಲ್ಲಿ ಕನ್ನಡ, ಮಾತೃಭಾಷಾ ಶಿಕ್ಷಣ ಮೊದಲಾದ ಜ್ವಲಂತ ಸಮಸ್ಯೆಗಳನ್ನು ಬಿಟ್ಟು ಕೇವಲ ಸಮ್ಮೇಳನಗಳು, ಸಾಹಿತ್ಯೋತ್ಸವಗಳನ್ನು ಏರ್ಪಡಿಸುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತು, ಒಂದನೇ ತರಗತಿಯಿಂದಲೇ ಇಂಗ್ಲಿಷ್ ಮಾಧ್ಯಮವನ್ನು ತರಲು ಹೊರಟ ಸರ್ಕಾರ ಮಾಡಿರುವ ಶೈಕ್ಷಣಿಕ ಅನಾಹುತಗಳು, ಇದರ ಪರವಾಗಿ ನಿಂತ ಬಂಡವಾಳಶಾಹಿ ಉದ್ಯಮಿ–ರಾಜಕಾರಣಿಗಳು, ಸಿನಿಕ ಸಾಹಿತಿಗಳು, ಮಧ್ಯಮ ವರ್ಗದವರು; ಸೀಮಿತ ವರ್ಗವೊಂದನ್ನು ತೃಪ್ತಿಪಡಿಸಲು ಅನಗತ್ಯವಾದ ಸಂಸ್ಕೃತ–ವೇದ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಿದ ಸರ್ಕಾರದ ಕ್ರಮ; ಜಾತಿ ರಾಜಕಾರಣದಲ್ಲಿ ಮುಳುಗಿರುವ ಮಠಗಳು ಹಾಗೂ ಮಠಾಧೀಶರು, ಕರ್ನಾಟಕವನ್ನು ಕೇಸರೀಕರಣ ಮಾಡಲು ಹೊರಟಿರುವ ಪಟ್ಟಭದ್ರ ಹಿತಾಸಕ್ತಿಗಳು ಮತ್ತು ಅದಕ್ಕೆ ಕುಮ್ಮಕ್ಕು ಕೊಡುತ್ತಿರುವ ಸರ್ಕಾರ– ಇಂಥ ಅನೇಕ ವಿಷಯಗಳು ಲೇಖಕರಲ್ಲಿ ಆತಂಕ ಮೂಡಿಸಿವೆ. ಅವು ಬರೀ ಲೇಖಕರ ಆತಂಕಗಳಾಗಿರದೇ ಪ್ರಜ್ಞಾವಂತ ಕನ್ನಡಿಗರೆಲ್ಲರ ಆತಂಕಗಳೂ ಆಗಿರುವುದರಿಂದ ಕೃತಿ ಓದಿ ಮುಗಿಸಿದಾಗ ಸಂಕಟದ, ವಿಷಾದದ ಛಾಯೆ ನಮ್ಮ ಮನಸ್ಸನ್ನು ಮುತ್ತುತ್ತದೆ.

ಭಾತರದ ಒಕ್ಕೂಟದ ವ್ಯವಸ್ಥೆಯಲ್ಲಿ ತಮಿಳು ಭಾಷೆ ಮತ್ತು ಸಂಸ್ಕೃತಿ ತನ್ನ ಅಸ್ಮಿತೆಯನ್ನು ತಮಿಳು ಕುಲಪ್ರಜ್ಞೆ ಕಟ್ಟಿರುವ ರಾಜಕಾರಣದ ಮೂಲಕ ಉಳಿಸಿಕೊಂಡು ಬಂದಿದೆ. ಆದರೆ ಕನ್ನಡ ಕುಲಪ್ರಜ್ಞೆ ಎಂಬುದೇ ಬತ್ತಿ ಹೋಗಿ ಕನ್ನಡದ ಅಸ್ಮಿತೆ ಎಂಬುದೇ ಕಾಣೆಯಾಗುತ್ತಿದೆ. ಹೀಗಾಗಿ ಕನ್ನಡ ಕಟ್ಟುವ ಚಳುವಳಿಗೆ ಆಲೂರರ ಶಿಷ್ಟ ಮಾದರಿ, ಬಿ.ಎಂ. ಶ್ರೀ.ಯವರ ಸಮನ್ವಯ ಮಾದರಿ ಮತ್ತು ಕುವೆಂಪುರವರ ಭಾವನಾತ್ಮಕ ಮಾದರಿಗಳು ಜಾಗತೀಕರಣದ ಈ ಹೊತ್ತಿನಲ್ಲಿ ಸ್ಫೂರ್ತಿಯಾಗಲಾರವು ಎನ್ನುವ ಲೇಖಕರು ಸೂಚಿಸುವುದು ಬಸವಣ್ಣನವರ ಸಾಮಾಜಿಕ, ಆರ್ಥಿಕ, ರಾಜಕೀಯ ಆಯಾಮಗಳನ್ನೊಳಗೊಂಡ ಹೊಸ ಮಾದರಿಯನ್ನು.

ಈ ಹಿನ್ನೆಲೆಯಲ್ಲಿಯೇ ಮಾತೃಭಾಷಾ ಶಿಕ್ಷಣ ಪ್ರಾಥಮಿಕ ಹಂತದಲ್ಲದರೂ ಕಡ್ಡಾಯವಾಗಬೇಕಿದೆ. ಕನ್ನಡವನ್ನು ಎಲ್ಲ ಹಂತಗಳಲ್ಲಿ ಆಡಳಿತ ಭಾಷೆಯಾಗಿ, ಶಿಕ್ಷಣ ಮಾಧ್ಯಮವಾಗಿ ಬಳಸುವುದರ ಜೊತೆಗೆ ಗಣಕ ಯಂತ್ರಗಳ ಭಾಷೆಯಾಗಿ ರೂಪಿಸಿ ದುಡಿಸಿಕೊಳ್ಳಬೇಕಾಗಿದೆ. ಬೆಂಗಳೂರು ನಗರದ ಸರ್ಕಾರಿ ಶಾಲೆಗಳನ್ನು ಮೊದಲು ಪುನರುಜ್ಜೀವನ ಗೊಳಿಸಬೇಕಿದೆ. ಇಂಗ್ಲಿಷನ್ನು ಪೂರಕ ಭಾಷೆಯಾಗಿ ಕಲಿಸಬೇಕೇ ಹೊರತು ಕನ್ನಡದ ಸಮಾನಾಂತರ ಭಾಷೆಯಾಗಿ ಅಲ್ಲ. ಕೇವಲ ಸಂಸ್ಕೃತ–ವೇದ ವಿ.ವಿ. ಸ್ಥಾಪನೆಯಾಗದೆ ನಮ್ಮ ಪರಂಪರೆಯನ್ನು ಕಟ್ಟಿದ ಪಾಳಿ–ಪ್ರಾಕೃತ, ಪರ್ಷಿಯನ್ ಮೊದಲಾದ ಪ್ರಾಚೀನ ಭಾಷೆಗಳ ಅಧ್ಯಯನ ಕೈಗೊಳ್ಳುವ ರೀತಿಯಲ್ಲಿ ಆ ವಿಶ್ವವಿದ್ಯಾಲಯ ಸ್ಥಾಪನೆಯಾಗಬೇಕು. ಕರ್ನಾಟಕದ ಸಾಹಿತಿ, ಕಲಾವಿದರು ಆತ್ಮಗೌರವ ಕಾಪಾಡಿಕೊಳ್ಳಬೇಕು; ಸರ್ಕಾರ, ಸಂಸ್ಥೆಗಳು ಕೊಡಮಾಡುವ ಪ್ರಶಸ್ತಿ, ಗೌರವಗಳ ಹಿಂದೆ ಬಿದ್ದು ಕನ್ನಡ–ಕರ್ನಾಟಕದ ಹಿತ ಬಲಿಕೊಡಬಾರದು.

ಹೀಗೆ ಲೇಖಕರು ತಮ್ಮ ಆತಂಕಗಳ ಜೊತೆಗೇ ಅವುಗಳ ಪರಿಹಾರಕ್ಕೆ ಸಲಹೆಗಳನ್ನೂ ನೀಡುತ್ತಾರೆ. ಹಾಗಾಗಿ ಈ ಕೃತಿ ಕೇವಲ ಆತಂಕಗಳ ಹಳವಂಡವಾಗದೆ ಪರ್ಯಾಯ ಮಾರ್ಗಸೂಚಿಗಳಿರುವ ಕೃತಿಯೂ ಆಗಿದೆ. ಇಲ್ಲಿನ ಲೇಖನಗಳಲ್ಲಿರುವ ಆತಂಕಗಳು ಹಾಗೂ ಪರ್ಯಾಯಗಳನ್ನು ನಾವುಗಳು ಒಪ್ಪದೇ ಇರಬಹುದು ಅಥವಾ ಅವುಗಳಲ್ಲಿ ಭಿನ್ನಾಭಿಪ್ರಾಯ ಗಳಿರಬಹುದು. ಆದರೆ ಅವರು ಎತ್ತುವ ಅನೇಕ ಪ್ರಶ್ನೆಗಳು, ಅವರಿಗೆದುರಾಗಿರುವ ಆತಂಕಗಳು ಎಲ್ಲ ಕನ್ನಡಿಗರವು ಎನ್ನುವುದರಲ್ಲಿ ಎರಡು ಮಾತಿಲ್ಲ.

**–ಡಾ. ಚನ್ನೇಶ್ ಹೊನ್ನಾಳಿ**

# ವಿವೇಕ ಬ್ಯೂರೋ ಆಫ್ ಕಾಂಪಿಟೇಟೀವ್ ಎಕ್ಸಾಮ್ಸ್

## ಹಾಸನ-573201

**ಯಾರಿಗೂ ಲಂಚ ಕೊಡದೆ**

**ಯಾರ ಶಿಫಾರ್ಸಿಗೂ ಹೆಣಗಾಡದೆ**

**ಉದ್ಯೋಗ ಪಡೆಯುವ ರಾಜಮಾರ್ಗ**

# ಸ್ಪರ್ಧಾತ್ಮಕ ಪರೀಕ್ಷೆ!

ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಖಾಲಿ ಇರುವ ಕ್ಲರಿಕಲ್ ಕೇಡರ್(ಗುಮಾಸ್ತರ ದರ್ಜೆ) ಹುದ್ದೆಗಳನ್ನು ಭರ್ತಿ ಮಾಡಲು **IBPS**(Institute of Banking Personnel Selection) ಇವರು ನಡೆಸುವ ಲಿಖಿತ ಪರೀಕ್ಷೆಗೆ ಒಂದು ತಿಂಗಳ ವಿಶೇಷ ತರಬೇತಿಯನ್ನು ನವೆಂಬರ್ ತಿಂಗಳಿನಲ್ಲಿ ಹಾಸನದಲ್ಲಿ ಆರಂಭಿಸುತ್ತಿದ್ದೇವೆ.

ಈ ಹುದ್ದೆಗೆ ಅರ್ಜಿ ಸಲ್ಲಿಸಲು ಕನಿಷ್ಠ ವಿದ್ಯಾರ್ಹತೆ: ಯಾವುದೇ ಅಂಗೀಕೃತ ವಿಶವ್ವಿದ್ಯಾಲಯವೊಂದರ ಪದವಿ. ಇತರ ವಿವರಗಳಿಗಾಗಿ www.ibps.com ಜಾಲತಾಣವನ್ನು ನೋಡಬಹುದು. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಇದೇ ನವೆಂಬರ್ 5.

ಅಂಚೆ ಇಲಾಖೆಯ ಅಂಚೆ ಸಹಾಯಕರ (Postal Assistants) ಹುದ್ದೆಗಳನ್ನು ಭರ್ತಿ ಮಾಡಲು ಸ್ಪರ್ಧಾತ್ಮಕ ಲಿಖಿತ ಪರೀಕ್ಷೆ ನಡೆಸುತ್ತಿದ್ದು, ಅದಕ್ಕಾಗಿಯೂ ನಾವು ವಿಶೇಷ ತರಬೇತಿ ಕಾರ್ಯಕ್ರಮವನ್ನು ಆಯೋಜಿಸುತ್ತಿದ್ದೇವೆ.

ಹಾಗೇ ನಮ್ಮ ಸಂಸ್ಥೆ ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆಯ ವಲಯ ಅರಣ್ಯಾಧಿಕಾರಿಗಳ(R.F.O) ಹುದ್ದೆಗಳನ್ನು ಭರ್ತಿಮಾಡಲು ನಡೆಸುವ ಲಿಖಿತ ಪರೀಕ್ಷೆಗೂ ಸಹ ವಿಶೇಷ ತರಬೇತಿ ಒದಗಿಸುತ್ತದೆ.

ಇದರ ಜೊತೆಗೆ, ನವೋದಯ ವಿದ್ಯಾಲಯಗಳ ಪ್ರವೇಶ ಪರೀಕ್ಷೆಗೂ ವಿದ್ಯಾರ್ಥಿಗಳಿಗೆ ನಿಯಮಿತವಾಗಿ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದೆ.



**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

**ವಿವೇಕ ಬ್ಯೂರೋ ಆಫ್ ಕಾಂಪಿಟೇಟೀವ್ ಎಕ್ಸಾಮ್ಸ್**
**ಎಸ್. ಜೆ. ಪಿ. ಪಾರ್ಕ್ ರಸ್ತೆ, ಕೆ.ಆರ್. ಪುರಂ**
**ಹಾಸನ–573201**
**ದೂರವಾಣಿ:** 9448867087 **ಮತ್ತು** 08172–268253

**ನವ ಮಾನವ ಮಾಸಿಕ** ದ ಓದುಗ ಬಳಗಕ್ಕೆ

**ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು!**

**ಶುಭ ಕೋರುವವರು:**



**–ಬಿ.ಶಿವಕುಮಾರ್**

**ಎಂ. ರೇಣುಕ**

**ಎಸ್. ಸಹನಾ**

**ಎಸ್. ಸಾಧನಾ**

**ವಿವೇಕ ಬ್ಯೂರೋ, ಹಾಸನ**

**'ನವ ಮಾನವ ಮಾಸಿಕ'ದ ಓದುಗ ಬಳಗಕ್ಕೆ**

**ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು!**



ಆಡಳಿತ ಮಂಡಳಿ

**ಜೆ.ಹೆಚ್. ಪಟೇಲ್ ಕಾಲೇಜು**

ಹೇಮಾತಿ ಹಾಸ್ಟೆಲ್ ಹತ್ತಿರ, ಬಿ.ಐ.ಇ.ಟಿ. ರಸ್ತೆ
ದಾವಣಗೆರೆ–೫೭೦೦೪

ಮುದ್ರಕರು: ಚಿತ್ರಕೂಟ ಪ್ರಿಂಟರ್ಸ್, ದುರ್ಗಿಗುಡಿ,
ಶಿವಮೊಗ್ಗ–೫೭೭ ೨೦೧ ದೂ: ೦೮೧೮೨–೨೬೦೮೯೪

ತೆರೆದ ಅಂಚೆ

ಇವರಿಗೆ,

If undelivered, please return to D.S. Nagabhushana,
HIG-5, 'Nudi', Kallahalli Extension, Vinoba Nagara,
Shivamogga - 577204 (Karnataka)